ಪ್ರೊ. ಬಿ. ಕೃಷ್ಣಪ್ಪ: ದಲಿತ ಚಿಂತನೆಗಳ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ನಿಬಂಧ)

ಸಂಶೋಧನಾ ವಿದ್ಯಾರ್ಥಿನಿ

ಉಮಾದೇವಿ

ಮಾರ್ಗದರ್ಶಕರು

ಸಿ. ಆರ್. ಗೋವಿಂದರಾಜು

ಪ್ರಾಧ್ಯಾಪಕರು, ಚರಿತ್ರೆ ವಿಭಾಗ

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೬-೦೭

139

ಪ್ರೊ. ಬಿ. ಕೃಷ್ಣಪ್ಪ : ದಲಿತ ಚಿಂತನೆಗಳ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ನಿಬಂಧ)

ಸಂಶೋಧನಾ ವಿಧ್ಯಾರ್ಥಿನಿ

ಉಮಾದೇವಿ

ಮಾರ್ಗದರ್ಶಕರು

ಸಿ. ಆರ್. ಗೋವಿಂದರಾಜು

ಪ್ರಾಧ್ಯಾಪಕರು, ಚರಿತ್ರೆ ವಿಭಾಗ

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೬-೦೭

ಮಾರ್ಗದರ್ಶಕರ ಪ್ರಮಾಣಪತ್ರ

ಪ್ರೊ. ಬಿ. ಕೃಷ್ಣಪ್ಪ : ದಲಿತ ಚಿಂತನೆಗಳ ವಿಶ್ಲೇಷಣೆ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಉಮಾದೇವಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೧೮. ೭.೦೭

(ಡಾ. ಸಿ. ಆರ್. ಗೋವಿಂದರಾಜು)

ಮಾರ್ಗದರ್ಶಕರು

ಚರಿತ್ರೆ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಪ್ರಮಾಣ ಪತ್ರ

ಪ್ರೊ. ಬಿ. ಕೃಷ್ಣಪ್ಪ : ದಲಿತ ಚಿಂತನೆಗಳ ವಿಶ್ಲೇಷಣೆ ಎಂಬ ನಿಬಂಧವನ್ನು ಡಾ. ಸಿ. ಆರ್. ಗೋವಿಂದರಾಜು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ:

Umadevi

(ಉಮಾದೇವಿ)

ಸಂಶೋಧನಾ ವಿದ್ಯಾರ್ಥಿನಿ
ಚರಿತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಹಿನ್ನೆಲೆ - ಪ್ರವೇಶ - ಸ್ವರೂಪ - ಮಹತ್ವ, ವಿಧಿ - ವಿಧಾನಗಳು ಹಾಗೂ ಮಿತಿಗಳು ೧ - ೪

ಅಧ್ಯಾಯ ಎರಡು

ಕೃಷ್ಣಪ್ಪ: ಜೀವನ ಪರಿಚಯ - ಪರಿಸರ - ಪ್ರಭಾವ ೫ - ೧೦

೨.೧ ಕೃಷ್ಣಪ್ಪ: ಕೌಟುಂಬಿಕ ಪರಿಸರ
೨.೨ ಕೃಷ್ಣಪ್ಪನವರು ಮತ್ತು ಸೈದ್ಧಾಂತಿಕ ಪ್ರಭಾವ
೨.೩ ಕೃಷ್ಣಪ್ಪ ಅವರ ಕೊನೆಯ ದಿನಗಳು

ಅಧ್ಯಾಯ ಮೂರು

ದಲಿತ ಚಿಂತಕರಾಗಿ ಕೃಷ್ಣಪ್ಪ ೧೨ - ೨೩

೩.೧ ಕೃಷ್ಣಪ್ಪ ಅವರ ದಲಿತ ಚಿಂತನೆ
೩.೨ ಕೃಷ್ಣಪ್ಪ ಅವರ ಶೈಕ್ಷಣಿಕ ಚಿಂತನೆ
೩.೩ ಕೃಷ್ಣಪ್ಪ ಅವರ ಸಾಹಿತ್ಯ ಚಿಂತನೆ
೩.೪ ಕೃಷ್ಣಪ್ಪ ಅವರ ರಾಜಕೀಯ ಚಿಂತನೆ
೩.೫ ಕೃಷ್ಣಪ್ಪ ಅವರ ಮಹಿಳಾ ಚಿಂತನೆ

ಅಧ್ಯಾಯ ನಾಲ್ಕು

ಸಂಘಟನಕಾರರಾಗಿ ಕೃಷ್ಣಪ್ಪ ೨೪ - ೩೪

೪.೧. ದಲಿತ ಸಂಘರ್ಷ ಸಮಿತಿಯ ಹುಟ್ಟಿನ ಹಿನ್ನೆಲೆ
೪.೨ ದಲಿತ ಸಂಘರ್ಷ ಸಮಿತಿಯ ತತ್ವ ಸಿದ್ಧಾಂತ: ಕೃಷ್ಣಪ್ಪ
೪.೩ ದಲಿತ ಸಂಘರ್ಷ ಸಮಿತಿಯ ರಾಜಕೀಯ ಪ್ರವೇಶ ಮತ್ತು ಒಡಕು
೪.೪ ಹೋರಾಟಗಳು: ಕೃಷ್ಣಪ್ಪ
೪.೫ ಬೆತ್ತಲೆ ಸೇವೆಯ ವಿರುದ್ಧ ಹೋರಾಟ

ಅಧ್ಯಾಯ ಐದು

ರಾಜಕಾರಣ ಹಾಗೂ ಕೃಷ್ಣಪ್ಪ ೩೫ - ೪೪

೫.೧ ಬಿ.ಎಸ್.ಪಿ. ಹುಟ್ಟಿನ ಹಿನ್ನೆಲೆ
೫.೨ ಕರ್ನಾಟಕದಲ್ಲಿ ಬಿ.ಎಸ್.ಪಿ. ನೆಲೆಗೊಂಡಿದ್ದು

ಅಧ್ಯಾಯ ಆರು

ಕೃಷ್ಣಪ್ಪ ಅವರ ಕನಸುಗಳು ಮತ್ತು ಆಶಯಗಳು ೪೫ - ೪೮

ಅಧ್ಯಾಯ ಏಳು

ತಳೆದ ನಿಲುವು ೪೯ - ೫೩

ಅನುಬಂಧ ಒಂದು ೫೪-೫೭

ಪರಾಮರ್ಶನ ಗ್ರಂಥಗಳು

ಅನುಬಂಧ ಎರಡು ೫೮-೬೧

ಗ೯೮೦ ರ ಅಕ್ಟೋಬರ್ ತಿಂಗಳು ದಲಿತರ ಮೇಲೆ ನಡೆದ ಹಲ್ಲೆದಬ್ಬಾಳಿಕೆ ಪ್ರಕರಣಗಳನ್ನು ಕುರಿತು ಪೋಲೀಸ್ ನಿಷ್ಕ್ರಿಯತೆ ಬಗ್ಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ವರದಿ. ಆಗ ದ.ಸಂ.ಸ.ಯ ರಾಜ್ಯ ಸಂಚಾಲಕರಾಗಿದ್ದ ಬಿ. ಕೃಷ್ಣಪ್ಪನವರು ತಮ್ಮ ಸ್ವಹಸ್ತಾಕ್ಷರದಿಂದ ಬರೆದ ವರದಿಯಾಗಿದೆ.

ಅನುಬಂಧ ಮೂರು ೬೨-೬೩

ದೇವಲಾಪುರ ಭೂ ಹೀನ ದಲಿತರಿಗೆ ಭೂಮಿ ಹಂಚುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುವ ಮೊದಲು ಮುಖ್ಯಮಂತ್ರಿ ಹಾಗೂ ಅರಣ್ಯಮಂತ್ರಿಗೆ ಪ್ರೊ.ಬಿ.ಕೃಷ್ಣಪ್ಪನವರು ಬರೆದ ಪತ್ರ

ಅನುಬಂಧ ನಾಲ್ಕು ೬೪-೬೫

ಧರ್ಮಸ್ಥಳದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಕೂಡದೆಂದು ತೀರ್ಮಾನಿಸಲು ಎಲ್ಲಾ ಸಂಚಾಲಕರು ರಾಜ್ಯ ಸಮಿತಿಯಲ್ಲಿ ಭಾಗವಹಿಸಲು ಕೋರಿ ಪ್ರೊ. ಬಿ. ಕೃಷ್ಣಪ್ಪನವರು ಬರೆದ ಪತ್ರ.
(ಈ ಪತ್ರದಲ್ಲಿ ಪ್ರೊ. ಬಿ. ಕೆ. ಅವರಿಗಿರುವ ದಲಿತರ ಬಗೆಗಿರುವ ಸಾಹಿತ್ಯದ ಪರಿಕಲ್ಪನೆ ಮತ್ತು ಸ್ವರೂಪ ಹೇಗಿತ್ತೆಂಬುದು ಸ್ಪಷ್ಟವಾಗುತ್ತದೆ.)

ಅನುಬಂಧ ಐದು ೬೬-೬೮

ಭೂ ಪರಭಾರೆ ಕಾಯ್ದೆಯನ್ನು ಉಲ್ಲಂಘಿಸಿ ಮೇಲ್ವರ್ಗದವರು ಹೈಕೋರ್ಟ್‌ನಿಂದ ತಂದ ತಡೆಯಾಜ್ಞೆಯನ್ನು ತೆರವುಗೊಳಿಸಲು ಪ್ರೊ. ಬಿ. ಕೆ. ಅವರು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿ.

ಅನುಬಂಧ ಆರು ೬೯-೭೧

ದಲಿತ ಸಂಘರ್ಷಕ್ಕಿರಬೇಕಾದ ಸೈದ್ಧಾಂತಿಕ ದೃಷ್ಟಿಕೋನ ಮತ್ತು ರಾಜಕೀಯ ನಿಲುವುಗಳೇನು ಎಂಬುದನ್ನು ಸ್ಪಷ್ಟ ಪಡಿಸುವ ಪ್ರೊ. ಬಿ. ಕೆ. ಅವರು ಪ್ರಕಟಿಸಿದ ಪತ್ರ

ಅಧ್ಯಾಯ ಒಂದು

ಅಧ್ಯಯನದ ಹಿನ್ನೆಲೆ - ಪ್ರವೇಶ - ಸ್ವರೂಪ - ಮಹತ್ವ, ವಿಧಿ - ವಿಧಾನಗಳು ಹಾಗೂ ಮಿತಿಗಳು

ಪ್ರಸ್ತುತ ಅಧ್ಯಯನದ ಶೀರ್ಷಿಕೆಯೇ ಹೇಳುವಂತೆ ಈ ಅಧ್ಯಯನವು ನಾಡಿನ ಹಾಗೂ ರಾಷ್ಟ್ರದ ಕೆಲವೇ ಪ್ರಮುಖ ದಲಿತ ಚಿಂತಕರಲ್ಲಿ ಒಬ್ಬರಾದ ಪ್ರೊ. ಬಿ. ಕೃಷ್ಣಪ್ಪ ಅವರ ಚಿಂತನೆ ಹಾಗೂ ಚಟುವಟಿಕೆಗಳಿಗೆ ಸಂಬಂಧಪಟ್ಟಿದ್ದು. ಸಾಮಾಜಿಕ ಚಳವಳಿಗಳ ಚರಿತ್ರೆಯಲ್ಲಿ ಮರೆಯಲಾಗದ ವ್ಯಕ್ತಿತ್ವ ಕೃಷ್ಣಪ್ಪನವರದು. ಅವರು ವೃತ್ತಿಯಿಂದ ಕನ್ನಡ ಪ್ರಾಧ್ಯಾಪಕರು. ಪ್ರವೃತ್ತಿಯಲ್ಲಿ ಚಿಂತನಾಶೀಲ ಮತ್ತು ಕ್ರಿಯಾಶೀಲರು. ಶೋಷಿತರ ಹೋರಾಟಗಾರರಾದ ಕೃಷ್ಣಪ್ಪನವರು ತಮ್ಮದೇ ಆದ ವ್ಯಕ್ತಿತ್ವದ ಪ್ರಭಾವದಿಂದ ದಲಿತ ಚಳವಳಿಯನ್ನು ಹುಟ್ಟುಹಾಕಿದರು. ಸ್ವತಃ ಕೃಷ್ಣಪ್ಪ ಅವರೇ ದಲಿತ ವರ್ಗದಿಂದ ಬಂದವರಾದ್ದರಿಂದ ಆ ವರ್ಗದ ಶೋಷಿತರಲ್ಲಿ ಸ್ವಾಭಿಮಾನ, ಶಿಕ್ಷಣ, ಸಂಘರ್ಷ, ವೈಚಾರಿಕ ಪ್ರಜ್ಞೆಯನ್ನು ಮೂಡಿಸಿದ್ದು ಗಮನಾರ್ಹವಾದುದು. ಈ ಹೊತ್ತಿನ ದಲಿತ ಸಂಘಟನೆಯ ಹುಟ್ಟು ಹಾಗೂ ಚಟುವಟಿಕೆಗಳಿಗೆ ಮೂಲ ಪ್ರೇರಣೆ ದೊರೆತದ್ದು ಕೃಷ್ಣಪ್ಪ ಅವರ ತಾತ್ವಿಕ ನೆಲೆಗಟ್ಟಿನಿಂದಲೇ. ಕೃಷ್ಣಪ್ಪ ಅವರು ತಮ್ಮ ಪ್ರಗತಿಪರ ಚಿಂತನೆ, ಚಟುವಟಿಕೆಗಳ ಮುಖೇನ ನಾಡಿನ ದಲಿತ ಚಳವಳಿ, ಸಮಾಜ, ಸಂಸ್ಕೃತಿ, ರಾಜಕೀಯ ನೆಲೆಗಳಲ್ಲಿ ಹೊಸ ಮೌಲ್ಯಗಳನ್ನು ಅಭಿವ್ಯಕ್ತಿಸಲು ಕಾರಣರಾದರು. ಈ ಅಧ್ಯಯನದಲ್ಲಿ ಕೃಷ್ಣಪ್ಪನವರ ಚಿಂತನೆ, ಚಟುವಟಿಕೆಗಳನ್ನು ಚಾರಿತ್ರಿಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೧೯೭೪ ರಲ್ಲಿ 'ದಲಿತ ಸಂಘರ್ಷ ಸಮಿತಿ'ಯನ್ನು ಹುಟ್ಟುಹಾಕುವುದರ ಜೊತೆಗೆ ದಲಿತರ ಸಾರ್ವಜನಿಕ ಬಹಿಷ್ಕಾರಗಳು, ಮಲಹೊರುವ ಪದ್ಧತಿ, ಜಾತಿಪದ್ಧತಿ, ಆರ್ಥಿಕ ಅಸಮಾನತೆ, ಸಾಮಾಜಿಕ ವೈಷಮ್ಯಗಳನ್ನು ಸಹ ತೊಡೆದು ಹಾಕಲು ನಡೆಸಿದ ಹೋರಾಟಗಳು ನೂರಾರು. ಅಲ್ಲದೆ ಜಡವಾಗಿದ್ದ ಸಾಮಾಜಿಕ ವ್ಯವಸ್ಥೆಯಲ್ಲಿ ಗಮನಾರ್ಹ ಸುಧಾರಣೆಗಳನ್ನು ತರಲು ಪ್ರಯತ್ನಿಸಿದವರು ಕೃಷ್ಣಪ್ಪ. ಕೇವಲ ನಾಯಕತ್ವವನ್ನು ಮಾತ್ರ ವಹಿಸಿಕೊಳ್ಳದೆ, ದಲಿತರ ಸ್ಥಿತಿ-ಗತಿಗಳನ್ನು ಸಹ ಕೂಲಂಕಷವಾಗಿ ಅರಿತು ಅವರ ಶ್ರೇಯೋಭಿವೃದ್ಧಿಗಾಗಿ ಹೋರಾಟಗಳನ್ನು ಕೈಗೊಂಡಿದ್ದು ಗಮನಾರ್ಹವಾದುದು.

'ಕರ್ನಾಟಕದ ಅಂಬೇಡ್ಕರ್' ಎಂದೇ ಖ್ಯಾತಿ ಪಡೆದಿದ್ದ ಅವರು ದಲಿತ ಚಳವಳಿಯ ಹರಿಕಾರರೂ ಹೌದು. ಈ ದಿಸೆಯಲ್ಲಿ ಅವರು ಮೇಲ್ವರ್ಗದವರ ದಬ್ಬಾಳಿಕೆ, ಸರ್ಕಾರದ ಅನ್ಯಾಯ, ಅಸಮಾನತೆ, ಜಾತಿವ್ಯವಸ್ಥೆ, ಸತಿಪದ್ಧತಿ, ಬೆತ್ತಲೆಸೇವೆ, ದೇವದಾಸಿ ಪದ್ಧತಿ ಮೊದಲಾದ ಸಾಮಾಜಿಕ ಪಿಡುಗುಗಳ ವಿರುದ್ಧ ಅವರು ಸಂಘಟಿತ ಚಳವಳಿಯನ್ನು ಮಾಡಿದವರು. ಅಷ್ಟೇ ಅಲ್ಲದೆ ಆ ಮೂಲಕ ದಲಿತರ ಏಳಿಗೆಗೂ ಕಾರಣರಾದವರು. ದಲಿತರ ಬಗೆಗೆ ಅಪಾರ ಕಾಳಜಿ ಇಟ್ಟುಕೊಂಡಿದ್ದ ಕೃಷ್ಣಪ್ಪನವರಿಗೆ ಶ್ರೇಣೀಕೃತ ಸಮಾಜ ಹಾಗೂ ಹಿಂದೂ ಧರ್ಮದ ಮಡಿವಂತಿಕೆಯನ್ನು ಪ್ರಶ್ನಿಸದೆ ಇರಲು ಸಾಧ್ಯವಾಗಲಿಲ್ಲ. ಸಮಾಜದ ವಾಸ್ತವವನ್ನು ಬಿಂಬಿಸುವ ಕೆಲಸವನ್ನು ಕೃಷ್ಣಪ್ಪ ಅವರು ನಿರ್ವಹಿಸಿ ತನ್ನ ಸಮುದಾಯಗಳಿಗೆ ಸಾಮಾಜಿಕ ಅರಿವನ್ನು ಮೂಡಿಸಲು ಶ್ರಮಿಸಿದರು. ಇವರ ಚಿಂತನೆ, ಹೋರಾಟಗಳು ಪ್ರಗತಿಪರವಾದವು. ಶೋಷಿತ ಸಮುದಾಯಗಳ ಎಚ್ಚರ ಮತ್ತು ಸಮಾಜದ ಎಲ್ಲಾ ಕ್ಷೇತ್ರಗಳ ಸಮಾನತೆಯ ಹೋರಾಟವು ಇವರ ಆಶಯವಾಗಿದೆ. ಇಂಥ ಹಲವು ಬಗೆಯ ಆಲೋಚನೆಗಳನ್ನು ಕುರಿತು ಅಧ್ಯಯನಗಳು ನಡೆದಿರುವುದೂ ಬಹಳ ಕಡಿಮೆ. ಈ ದಿಸೆಯಲ್ಲಿ ಕೃಷ್ಣಪ್ಪ ಅವರ ಚಿಂತನೆಗಳನ್ನು ಪ್ರಸ್ತುತ ಸಂದರ್ಭದಲ್ಲಿಟ್ಟು ಅರ್ಥೈಸುವ, ಪರಿಶೀಲಿಸುವ, ವಿಶ್ಲೇಷಿಸುವ, ಅಧ್ಯಯನಕ್ಕೆ ಒಳಪಡಿಸುವ ಜರೂರು ಇದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಒಂದು ಕಿರು ಪ್ರಯತ್ನ.

೧.೧ ಅಧ್ಯಯನ ವ್ಯಾಪ್ತಿ ಮತ್ತು ಮಿತಿಗಳು

ಪ್ರೊ. ಬಿ. ಕೃಷ್ಣಪ್ಪ ಅವರ ಚಿಂತನೆ ಮತ್ತು ಚಟುವಟಿಕೆಗಳನ್ನು ಕೇಂದ್ರಬಿಂದುವನ್ನಾಗಿಟ್ಟುಕೊಂಡಿರುವ ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿ ಹಾಗೂ ಮಿತಿಗಳಿಗೆ ಒಳಪಟ್ಟಿದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ೧೯೩೮ ರಿಂದ ೧೯೯೭ ರವರೆಗಿನ ಕಾಲಾವಧಿಯ ಮಿತಿಯನ್ನು ಹೊಂದಿದೆ. ಅಲ್ಲದೆ ಕೃಷ್ಣಪ್ಪನವರ ಚಿಂತನೆ, ಚಳವಳಿ ಕೇಂದ್ರಿತ ವಿಚಾರಗಳಿಗೆ ಸೀಮಿತವಾಗಿದೆ. ಒಟ್ಟಿನಲ್ಲಿ ಈ ಅಧ್ಯಯನವು ಸಾಮಾಜಿಕ, ಆರ್ಥಿಕ, ಸಾಹಿತ್ಯಕ ಹಾಗೂ ರಾಜಕಾರಣದ ಪರಿಧಿಗಳನ್ನು ಹೊಂದಿರುವಂಥದ್ದು.

೧.೨ ಅಧ್ಯಯನದ ವಿಧಿ-ವಿಧಾನಗಳು

ಈ ಅಧ್ಯಯನವು ಕೃಷ್ಣಪ್ಪ ಅವರ ಚಿಂತನೆಗಳನ್ನು ಚಾರಿತ್ರಿಕವಾಗಿ ದಾಖಲಿಸಿ ವಿಮರ್ಶಾತ್ಮಕವಾಗಿ ವಿಶ್ಲೇಷಣೆ ನಡೆಸುವಂಥದ್ದಾಗಿದೆ. ಅಲ್ಲದೆ ಎಲ್ಲ ಬಗೆಯ ಪ್ರಾಥಮಿಕ ಹಾಗೂ ಇತರ ಆಕರ ಸಾಮಾಗ್ರಿಗಳು ಇಲ್ಲಿ ಬಳಕೆಯಾಗಿವೆ. ಕೃಷ್ಣಪ್ಪ ಅವರ ಚಿಂತನೆಗಳನ್ನು ಕುರಿತು ನೇರವಾದ ಹಾಗೂ ಪೂರಕವಾಗಿ ದೊರೆಯುವ ಎಲ್ಲಾ ಬಗೆಯ ವಿವರ, ಕಾಗದ ಪತ್ರ, ದಾಖಲೆಗಳು, ಸಂದರ್ಶನ ಇತ್ಯಾದಿಗಳನ್ನು ಬಳಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಪತ್ರಾಗಾರಗಳು, ಸರ್ಕಾರಿ ಹಾಗೂ ಖಾಸಗಿ ಗ್ರಂಥಾಲಯಗಳು, ಸಂಘ-ಸಂಸ್ಥೆಗಳು ನೀಡಿದ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿ, ವಿವರಗಳನ್ನು ವೈಜ್ಞಾನಿಕವಾಗಿ ವರ್ಗೀಕರಿಸಿಕೊಂಡು ಚರಿತ್ರೆಯ ಶಿಸ್ತಿನ ವಿಧಿ-ವಿಧಾನಗಳ ಮೂಲಕ ಪರೀಕ್ಷಿಸಿ, ವಿಶ್ಲೇಷಿಸುವ ಪ್ರಯತ್ನ ಇಲ್ಲಿನದು. ಒಟ್ಟಾರೆ ಈ ಅಧ್ಯಯನಕ್ಕೆ ಸಮಾಜವಿಜ್ಞಾನ, ಚರಿತ್ರೆ ಸಂಶೋಧನಾ ವಿಧಾನಕತೆಯನ್ನು ಅಳವಡಿಸಿಕೊಳ್ಳಲಾಗಿದೆ.

೧.೩ ಅಧ್ಯಯನದ ಸ್ವರೂಪ

ಪ್ರೊ. ಬಿ. ಕೃಷ್ಣಪ್ಪ ಅವರ ಚಿಂತನೆ ಹಾಗೂ ಚಳವಳಿಗಳನ್ನು ಕುರಿತು ವಿಶ್ಲೇಷಿಸುವುದೇ ಈ ಅಧ್ಯಯನದ ಸ್ವರೂಪವಾಗಿದೆ.

ಮೊದಲನೆ ಅಧ್ಯಾಯವು ಹಿನ್ನೆಲೆ-ಪ್ರವೇಶ-ಸ್ವರೂಪ-ಮಹತ್ವ, ವಿಧಿ-ವಿಧಾನಗಳು ಹಾಗೂ ಮಿತಿಗಳನ್ನು ಒಳಗೊಂಡಿರುವಂಥದ್ದು.

ಎರಡನೆಯ ಅಧ್ಯಾಯದಲ್ಲಿ ಕೃಷ್ಣಪ್ಪ ಅವರ ಜೀವನ ಪರಿಚಯ-ಪರಿಸರ-ಪ್ರಭಾವವನ್ನು ಮತ್ತು ಕೌಟುಂಬಿಕ ಜೀವನ, ಅವರ ಶಿಕ್ಷಣವನ್ನು ಕುರಿತ ಮಾಹಿತಿಯನ್ನು ಉಲ್ಲೇಖಿಸಲಾಗಿದೆ. ಅಲ್ಲದೆ ಕೃಷ್ಣಪ್ಪ ಅವರ ವೃತ್ತಿಜೀವನ ಪ್ರವೇಶ, ನಂತರ ಅವರು ಹಲವು ಬಗೆಯ ಉನ್ನತ ಹುದ್ದೆಗಳಿಗೇರಿದ್ದು, ಅವರ ಹೋರಾಟದ ಬದುಕು, ರಾಜಕೀಯ ಪ್ರವೇಶದ ಹಿಂದಿನ ಕಾರಣಗಳನ್ನು ವ್ಯಾಖ್ಯಾನಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕೃಷ್ಣಪ್ಪ ಅವರ ದಲಿತ ಚಿಂತನೆಗಳನ್ನು ವಿಶ್ಲೇಷಿಸಲಾಗಿದೆ. ದಲಿತರ, ಅಲ್ಪಸಂಖ್ಯಾತರ, ಹಿಂದುಳಿದವರ ಅಭಿವೃದ್ಧಿ ಬಗ್ಗೆ ಕಾಳಜಿ ನೀಡಿರುವುದನ್ನು ಪರಿಗಣಿಸಲಾಗಿದೆ. ವರ್ಗರಹಿತ, ವರ್ಣರಹಿತ, ಸಮಾನತೆಯ ಸಮಾಜದ ಕುರಿತು ಅವರ ಕ್ರಾಂತಿಕಾರಕ ವಿಚಾರಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯ ಕೃಷ್ಣಪ್ಪ ಅವರು ದಲಿತ ಸಂಘರ್ಷ ಸಮಿತಿಯನ್ನು ಹುಟ್ಟುಹಾಕಿದುದರ ಹಿನ್ನೆಲೆ, ಉದ್ದೇಶವ ಕುರಿತು ಚರ್ಚಿಸಲಾಗಿದೆ. ಸಂಘಟನಾಕಾರರಾಗಿ ಕೃಷ್ಣಪ್ಪ ಅವರ ನೇತೃತ್ವದಲ್ಲಿ ದ.ಸಂ.ಸ. ನಡೆಸಿದ ಹೋರಾಟಗಳನ್ನು ಪರಿಶೀಲಿಸಲಾಗಿದೆ.

ಐದನೆಯ ಅಧ್ಯಾಯವು ಕೃಷ್ಣಪ್ಪ ಅವರ ರಾಜಕೀಯ ಚಿಂತನೆಗಳನ್ನು ಒಳಗೊಂಡಿದೆ. ರಾಜಕೀಯ ಪ್ರವೇಶದಿಂದ ದ.ಸಂ.ಸ.ಯಲ್ಲಿ ಉಂಟಾದ ಒಡಕು, ಕರ್ನಾಟಕದಲ್ಲಿ ಬಿ.ಎಸ್.ಪಿ. ಪಕ್ಷ ಸ್ಥಾಪನೆಯ ಹಿನ್ನೆಲೆ, ಉದ್ದೇಶಗಳ ಕುರಿತು ಚರ್ಚಿಸಲಾಗಿದೆ. ಕೃಷ್ಣಪ್ಪನವರ ರಾಜಕೀಯ ಪ್ರವೇಶ ಕುರಿತು ಸಮಕಾಲೀನರ ಅಭಿಪ್ರಾಯಗಳನ್ನು ಪರಿಶೀಲಿಸಲಾಗಿದೆ.

ಅಧ್ಯಾಯ ಆರರಲ್ಲಿ ಕೃಷ್ಣಪ್ಪ ಅವರು ದಲಿತರ ಉದ್ಧಾರಕ್ಕಾಗಿ ಕಂಡಂಥ ಕನಸುಗಳು, ಆಶಯಗಳು ಮತ್ತು ಅವುಗಳನ್ನು ಸಾಕಾರಗೊಳಿಸಿಕೊಳ್ಳಲು ಅವರು ಪಟ್ಟ ಪರಿಶ್ರಮದ ಹಾದಿಯ ಕುರಿತಾದ ವಿವರಗಳು, ವಿಶ್ಲೇಷಣೆಗಳನ್ನು ಒಳಗೊಂಡಿದೆ. ಸಮಾನತೆಯ, ವರ್ಗ, ವರ್ಣ ರಹಿತ ಸಮಾಜ ರಚನೆ, ಅಸ್ಪೃಶ್ಯತೆಯ ನಿರ್ಮೂಲನೆ, ದಲಿತರ ಶಿಕ್ಷಣ, ಹೊಟ್ಟೆಗಿಲ್ಲದವರ ಸಾಹಿತ್ಯ ಸೃಷ್ಟಿ ಇವುಗಳ ಕುರಿತು ಚರ್ಚಿಸಲಾಗಿದೆ. ಅಂತೆಯೆ ಕೊನೆಯ ಅಧ್ಯಾಯದಲ್ಲಿ (ಏಳನೆಯ) ಪ್ರಸ್ತುತ ಅಧ್ಯಯನದಿಂದ ತಳೆದ ನಿಲುವುಗಳನ್ನು ಅಭಿವ್ಯಕ್ತಿಸಲಾಗಿದೆ.

ಅಧ್ಯಾಯ ಎರಡು

ಕೃಷ್ಣಪ್ಪ: ಜೀವನ ಪರಿಚಯ - ಪರಿಸರ - ಪ್ರಭಾವ

೨.೧ ಕೃಷ್ಣಪ್ಪ: ಕೌಟುಂಬಿಕ ಪರಿಸರ

೨.೨ ಕೃಷ್ಣಪ್ಪನವರು ಮತ್ತು ಸೈದ್ಧಾಂತಿಕ ಪ್ರಭಾವ

೨.೩ ಕೃಷ್ಣಪ್ಪ ಅವರ ಕೊನೆಯ ದಿನಗಳು

ಪ್ರೊ.ಬಿ. ಕೃಷ್ಣಪ್ಪನವರು ಸತತ ಮೂರು ದಶಕಗಳ ಕಾಲ ದಲಿತ ವರ್ಗದವರ ಗಟ್ಟಿ ಧ್ವನಿಯಾಗಿದ್ದರು. ಕತ್ತಲು ತುಂಬಿದ್ದ ದಲಿತರ ಬಾಳಿನಲ್ಲಿ ಬೆಳಕನ್ನು ಮೂಡಿಸಿದ್ದಾರೆ. ಎಪ್ಪತ್ತರ ದಶಕದಲ್ಲಿ 'ದಲಿತ ಸಂಘರ್ಷ ಸಮಿತಿ'ಯನ್ನು ಹುಟ್ಟು ಹಾಕುವುದರ ಜೊತೆಗೆ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಅವಮಾನಕರವಾದ ಧಾರ್ಮಿಕ ಕಟ್ಟುಪಾಡುಗಳು, ಜಾತಿಪದ್ಧತಿ. ಮಲಹೊರುವ ಪದ್ಧತಿ, ಆರ್ಥಿಕ ಅಸಮಾನತೆ. ಸಾಮಾಜಿಕ ವೈಷಮ್ಯಗಳನ್ನು ಕಿತ್ತೊಗೆಯಲು ಅವಿರತವಾಗಿ ಶ್ರಮಿಸಿದರು. ಇದಕ್ಕಾಗಿ ಅವರು ಹಲವು ರೀತಿಯ ಚಳವಳಿಗಳನ್ನು ಹಮ್ಮಿಕೊಂಡು ದಲಿತರನ್ನು, ಹಿಂದುಳಿದವರನ್ನು ಹಾಗೂ ಅಲ್ಪಸಂಖ್ಯಾತರನ್ನು ಸಂಘಟಿಸುವಲ್ಲಿ ಯಶಸ್ವಿಯಾಗಿ 'ಕರ್ನಾಟಕದ ಅಂಬೇಡ್ಕರ್' ಎಂದೇ ಖ್ಯಾತಿ ಪಡೆದಿದ್ದಾರೆ.

ಕೃಷ್ಣಪ್ಪನವರ ವ್ಯಕ್ತಿತ್ವ ಹಾಗೂ ಬರಹಗಳನ್ನು ಕುರಿತು ಚಿಂತನೆ ಮಾಡುವುದೆಂದರೆ ಕರ್ನಾಟಕ ದಲಿತ ಚಳವಳಿಯ ಚಿಂತನೆ ಮಾಡಿದಂತೆಯೆ. ಅಷ್ಟರ ಮಟ್ಟಿಗೆ ಕೃಷ್ಣಪ್ಪನವರ ಬದುಕು-ಬರಹ ದಲಿತ ಚಳವಳಿಯೊಂದಿಗೆ ಬೆಸೆದುಕೊಂಡಿದೆ. ದಲಿತ ಚಳವಳಿಯ ಕ್ರಿಯಾಶೀಲತೆಗೆ ಕಾರಣವಾದ ಕೃಷ್ಣಪ್ಪನವರು ಬಹಳಷ್ಟು ಕಡೆ ಪ್ರವಾಸಮಾಡುತ್ತಾ ಶೋಷಣೆಗೆ ಒಳಗಾದ ಜನರ ಶಕ್ತಿಯಾಗಿದ್ದರು. ಶೋಷಣೆಗಳಿಗೆ ಒಳಗಾದವರಿಗಾಗಿ ಇವರು ನೀಡಿದ ಕೊಡುಗೆ ಅಸಮಾನ್ಯವಾಗಿದೆ.

ನಮ್ಮ ದೇಶದಲ್ಲಿ ಪ್ರಗತಿಪರ ಚಳವಳಿಗಳ ಮುಂಚೂಣಿಯಲ್ಲಿರುವವರು ಅನುಭವಿಸಬೇಕಾದ ಸಂಕಷ್ಟಗಳದ್ದೇ ಒಂದು ಚರಿತ್ರೆಯಿದೆ. ಏಕೆಂದರೆ ಚರಿತ್ರೆಯ ತಪ್ಪು ತಿಳುವಳಿಕೆಗಳನ್ನು ಪ್ರಶ್ನಿಸುತ್ತ ಹೊಸ ಇತಿಹಾಸಕ್ಕೆ ಒತ್ತಾಸೆಯಾಗುವ ವ್ಯಕ್ತಿಗಳು ಎದುರಿಸಬೇಕಾದ ಸವಾಲುಗಳು ಒಂದಲ್ಲ ಎರಡಲ್ಲ ಹತ್ತಾರು. ಇವೆಲ್ಲವನ್ನು ಎದುರಿಸುತ್ತ ಆಧುನಿಕ ದಲಿತ ಚಳವಳಿಯ ಹರಿಕಾರರಾದ ಕೃಷ್ಣಪ್ಪನವರು ಬದುಕಿದ ರೀತಿಯೇ ದಲಿತ ಚಳವಳಿಯ ಏಳಿಗೆಯ ಒಂದು ಇತಿಹಾಸವಾಗಿದೆ. ಏಕೆಂದರೆ ಅವರನ್ನು ಹೊರತು ಪಡಿಸಿದ ದಲಿತ ಚಳವಳಿಯ ಚರಿತ್ರೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ.

ಬಾಬಾ ಅಂಬೇಡ್ಕರ್ ವಾದಿಯಾಗಿ ಈ ನಾಡ ದಲಿತರ ನೋವಿನೊಂದಿಗೆ ಸ್ಪಂದಿಸಿದ ಪ್ರಮುಖ ವ್ಯಕ್ತಿಗಳಲ್ಲಿ ಕೃಷ್ಣಪ್ಪನವರು ಸಹ ಒಬ್ಬರು. ಅಂಬೇಡ್ಕರ್ ವಾದವೊಂದೇ ದಲಿತರ ವಿಮೋಚನೆಗೆ ದಾರಿ ಎನ್ನುವ ಸತ್ಯಸಂಗತಿಯನ್ನು ಅವರು ಸಾರಿ ಹೇಳಿರುವುದುಂಟು. ತಮ್ಮ ಇಪ್ಪತ್ತೈದು ವರ್ಷಗಳ ಅಮೂಲ್ಯ ಬದುಕನ್ನು ದಲಿತರ ಉದ್ಧಾರಕ್ಕಾಗಿ ತೊಡಗಿಸಿಕೊಂಡಿದ್ದರು. ಅವರ ಕ್ರಿಯಾಶೀಲತೆ, ಚರ್ಚೆ, ಒಲವು, ನಿಲುವುಗಳು ದಲಿತ ಚಳವಳಿಯ ದಿಕ್ಕನ್ನು ನಿರ್ದೇಶಿಸುತ್ತಿದ್ದವು. ಹಾಗೂ ಏಳಿಗೆಗಳಿಗೂ ಕಾರಣವಾಗುತ್ತಿತ್ತು ಎನ್ನುವ ತೀರ್ಮಾನಕ್ಕೆ ಬರಬಹುದು.

ಕೃಷ್ಣಪ್ಪನವರು ೧೯೩೮ ರ ಜೂನ್ ೯ ರಂದು ದಾವಣಗೆರೆ ಜಿಲ್ಲೆಯ ಹರಿಹರದ ಹರಿಜನಕೇರಿಯಲ್ಲಿ ಬಸಪ್ಪ ಮತ್ತು ಚೌಡಮ್ಮ ದಂಪತಿಗಳ ಮೊದಲ ಮಗನಾಗಿ ಹುಟ್ಟಿದರು. ಆರಂಭದ ದಿನದಿಂದಲೇ ಅನುಭವಿಸಿದ್ದು ಬಡತನದ ನೋವಿನ ಬದುಕನ್ನು. ಜೊತೆಗೆ ಓದಬೇಕೆಂಬ ದೊಡ್ಡದಾದ ಕನಸು. ಆ ಕನಸುಗಳನ್ನು ನನಸಾಗಿಸಿಕೊಳ್ಳುವ ದಿಕ್ಕಿನಲ್ಲಿ ಸವೆಸಿದ ದಾರಿ ಸುಗಮವಾಗಿ ಇರಲಿಲ್ಲ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣವನ್ನು ಹರಿಹರದಲ್ಲೇ ಮಾಡಲಾಯಿತು. ಚಿತ್ರದುರ್ಗದಲ್ಲಿ ಕಾಲೇಜು ಶಿಕ್ಷಣವನ್ನು

ಪ್ರಾರಂಭಿಸಿದರು. ೧೯೬೩ ರಲ್ಲಿ ಅವರು ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಸ್ನಾತಕೋತ್ತರ ಪದವಿಯನ್ನು ಪಡೆದರು. ಕೃಷ್ಣಪ್ಪನವರು ಸಂಗೀತದ ಬಗೆಗೆ ಆಸಕ್ತಿ ಹಾಗೂ ಸಾಹಿತ್ಯದಲ್ಲಿ ಅಭಿರುಚಿಯನ್ನು ಬೆಳೆಸಿಕೊಂಡು ತಮ್ಮ ವ್ಯಕ್ತಿತ್ವನ್ನು ರೂಪಿಸಿಕೊಂಡರು. ಜೊತೆಗೆ ಭಜನ ಮಂಡಳಿಯನ್ನು ಸೇರಿ ತಮ್ಮ ಕಂಠಸಿರಿಯಿಂದ ಜನರ ಮನಸೂರೆಗೊಳಿಸಿದರು. ಅಲ್ಲದೆ ಇವರು ಅನೇಕ ಬಿಡಿ ಕವನಗಳನ್ನು ರಚಿಸಿದ್ದಾರೆ.[೪] ಅವುಗಳಲ್ಲಿ ಮುಖ್ಯವಾಗಿ ಉಲ್ಲೇಖಿಸುವುದಾದರೆ 'ಮೂರ್ತಿಯೊಂದ ಮಾತು', 'ಸಂಗಣ್ಣ', 'ರಾಜತಿ', 'ಮಾನವರೊಂದೇ ಕುಲ', 'ಬೂಸಾ ಲೇಖಕರಿಗೊಂದು ಸವಾಲು' ಮುಂತಾದವು. ಇವು ದಲಿತ ಚಳವಳಿಯ ಮೈಲುಗಂಬಳಾಗಿರುವಂತೆಯೇ ಕವಿ ಚೈತನ್ಯವೊಂದರ ಅಭಿವ್ಯಕ್ತಿಯ ಕುಡಿಗಳೂ ಆಗಿವೆ. ಧ್ವನಿ ಇಲ್ಲದವರಿಗೆ ಧ್ವನಿಯಾದ ಕೃಷ್ಣಪ್ಪನವರ ಕಂಠಸಿರಿಯನ್ನು ಆಲಿಸಿದ ಮಂದಿ, ಇವರೊಳಗೊಬ್ಬ ಹೃದಯವಂತ ಹಾಡುಗಾರನಿದ್ದಾನೆಂಬುದನ್ನು ಅರಿತರೇ ವಿನಹ, ಇವರೊಳಗೊಬ್ಬ ಕವಿ ಬಚ್ಚಿಟ್ಟುಕೊಂಡಿದ್ದಾನೆಂದು ಗುರುತಿಸಲಿಲ್ಲ. ಏಕೆಂದರೆ ಅವರೆಂದು ತಾವು ಬರೆದದ್ದನ್ನು ಪ್ರಕಟಿಸಲು ಹೋಗಲಿಲ್ಲ. ಕೃಷ್ಣಪ್ಪನವರ ಬಿಡುವಿಲ್ಲದ ಹೋರಾಟದ ದಿನಗಳಲ್ಲಿ ಅನೇಕ, ಬಿಡಿ ಕವನಗಳನ್ನು ರಚಿಸಿದ್ದರು. (ಹೆಚ್ಚಿನ ಮಾಹಿತಿಗಾಗಿ ಇಂದಿರಾ ಕೃಷ್ಣಪ್ಪ, 'ನೆನಪುಗಳೇ ನಿಲ್ಲಿ... ನಿಲ್ಲಿ...') ಕವನ ರಚನೆಯ ಅಭಿರುಚಿಯ ಜೊತೆಗೆ ನಾಟಕ, ಭಾವಗೀತೆ, ಜನಪದಗೀತೆಗಳ ಬಗೆಗೆ ಅಪಾರ ಆಸಕ್ತಿಯನ್ನು ಹೊಂದಿದ್ದರು. ಕೃಷ್ಣಪ್ಪನವರು ಸೊಗಸಾಗಿ ಹಾಡುತ್ತಿದ್ದರು. ಅಂದು ಅವರು ಹೇಳುತ್ತಿದ್ದ ಹಾಡುಗಳೆಂದರೆ ಬೇಂದ್ರೆಯವರ[೫], ಕುವೆಂಪುರವರ,[೬] ಗೋಪಾಲಕೃಷ್ಣ ಅಡಿಗ,[೭] ಜಿ.ಎಸ್.ಶಿವರುದ್ರಪ್ಪ,[೮] ಜಿ.ಪಿ.ರಾಜರತ್ನಂ[೯] ಮೊದಲಾದವರ ಹಾಡುಗಳು.

ಕೃಷ್ಣಪ್ಪನವರು ತಮ್ಮ ವೃತ್ತಿಜೀವನವನ್ನು ೧೯೬೪ ರಲ್ಲಿ ಕನ್ನಡ ಅಧ್ಯಾಪಕರಾಗಿ ಮಂಡ್ಯಜಿಲ್ಲೆಯ ಕೆ. ಆರ್. ನಗರದಲ್ಲಿ ಆರಂಭಿಸಿದರು. ನಂತರ ಸಾಗರ, ಶಿವಮೊಗ್ಗ ನಗರಗಳಲ್ಲಿ ಕೆಲವು ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ೧೯೬೭ ರಲ್ಲಿ ಭದ್ರಾವತಿಯ ಸರ್. ಎಂ. ವಿ. ವಿಶ್ವೇಶ್ವರಯ್ಯ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿ ಸ್ವಯಂ ನಿವೃತ್ತಿಪಡೆಯುವವರೆಗೆ ಸುಮಾರು ಮೂವತ್ತು ವರ್ಷಗಳ ಸುದೀರ್ಘ ಶೈಕ್ಷಣಿಕ ಅನುಭವ ಹೊಂದಿದ್ದರು. ಉಪನ್ಯಾಸಕ ಹುದ್ದೆಯ ಜೊತೆಗೆ ಅವರು ನಿರ್ವಹಿಸಿದ ಇತರೆ ಹುದ್ದೆಗಳೆಂದರೆ, ಅಕಡೆಮಿಕ್ ಕೌನ್ಸಿಲ್ ಸದಸ್ಯರು, ಕರ್ನಾಟಕ ಬೋರ್ಡ್ ಆಫ್ ಸ್ಟಡೀಸ್ ಸದಸ್ಯರು, ಸೆನೆಟ್ ಸದಸ್ಯರು, ಕಾಲೇಜು ಪ್ರಾಂಶುಪಾಲರುಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳು ಹೀಗೆ ಕರ್ನಾಟಕ ಶೈಕ್ಷಣಿಕ ವಿಭಿನ್ನ ಮಂಡಳಿಗೆ ಸದಸ್ಯತ್ವವನ್ನು ಹೊಂದಿ ತಮ್ಮ ಸಲಹೆ, ಸೂಚನೆಗಳಿಂದ ಶೈಕ್ಷಣಿಕ ರಂಗಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ.

ವೃತ್ತಿಜೀವನ ಜೊತೆ ಜೊತೆಗೆ ಅಪಾರ ಸಮಾಜ ಸೇವೆಯನ್ನು ಕೃಷ್ಣಪ್ಪ ಅವರು ಸಲ್ಲಿಸಿರುವರು. ಇವರು ತಮ್ಮ ಜೀವನದಲ್ಲಿ ಶಿಸ್ತಿಗೆ ಹೆಚ್ಚಿನ ಮಹತ್ವ ಕೊಟ್ಟ ವ್ಯಕ್ತಿಯಾಗಿದ್ದಾರೆ. ಅವರ ನಿರರ್ಗಳ ಶೈಲಿ, ಸೌಮ್ಯಸ್ವಭಾವ, ವೈಚಾರಿಕ ಚಿಂತನೆ, ಅಪಾರ ಪಾಂಡಿತ್ಯ, ಎಂತಹವರನ್ನು ಬೆರಗುಗೊಳಿಸುತ್ತಿದ್ದವು. ಬಿ. ಕೆ. ಅವರ ವೈವಾಹಿಕ ಜೀವನ ಆದರ್ಶಪ್ರಾಯವಾದುದು. ಏಕೆಂದರೆ ಜಾತಿವಾದಿಗಳ ವಿರುದ್ಧ ಧ್ವನಿ ಎತ್ತಲೂ ಹೆದರುತ್ತಿದ್ದ ಆ ಕಾಲದಲ್ಲೇ ಬ್ರಾಹ್ಮಣ ಜಾತಿಯ ಹೆಣ್ಣುಮಗಳನ್ನು(ಶ್ರೀಮತಿ ಇಂದಿರಾ) ವಿವಾಹವಾಗಿ ಸಂಪ್ರದಾಯವಾದಿಗಳಿಗೆ ಸವಾಲೆಸೆದಿದ್ದರು. ಅಲ್ಲದೆ ಅವರು ಅಂತರ್‌ಜಾತಿಯ ವಿವಾಹವಾಗಿದ್ದರಿಂದ ಸಮಾಜದ ವಿಭಿನ್ನ ವರ್ಗಗಳ ಪ್ರತಿರೋಧಗಳನ್ನು ಎದುರಿಸಬೇಕಾಯಿತು. ಇದರಿಂದ ತಮ್ಮ ವೃತ್ತಿ ಜೀವನಕ್ಕೂ ಅಡೆತಡೆಗಳು ಉಂಟಾದವು.

ತಮ್ಮ ಜವಾಬ್ದಾರಿಯುತ ವೃತ್ತಿಯ ನಡುವೆಯೂ ಅವರು ದಲಿತರ ಉದ್ಧಾರಕ್ಕಾಗಿ ದಲಿತ ಸಂಘಟನೆಗಾಗಿ ಶ್ರಮಿಸಿದ್ದು ಅವಿಸ್ಮರಣೀಯವಾದುದು. ಶೋಷಿತ ವರ್ಗದವರನ್ನೆಲ್ಲಾ ಒಂದು ಪ್ರಭಾವಯುತ ಸಂಸ್ಥೆಯ ಅಡಿಯಲ್ಲಿ ಸಂಘಟಿಸಿ ಹೋರಾಡುವ ಸಲುವಾಗಿ ೧೯೭೪ ರಲ್ಲಿ 'ದಲಿತ ಸಂಘರ್ಷ ಸಮಿತಿ'ಯನ್ನು ಹುಟ್ಟುಹಾಕಿದರು.

ಕೃಷ್ಣಪ್ಪನವರು ಸಂಘಟನೆಯ ನಾಯಕತ್ವವನ್ನು ವಹಿಸಿಕೊಂಡು ದಲಿತ ಚಿಂತಕನಾಗಿ ಮಾಡಿದ ಮೊದಲ ಕಾರ್ಯವೆಂದರೆ ಕ್ರಾಂತಿಯ ಪಥದಲ್ಲಿ ನಡೆಸಿದ ಭೂ ಹೋರಾಟಗಳು. ಈ ಭೂ ಹೋರಾಟಗಳಲ್ಲಿ ಸುಮಾರು

ಎರಡೂವರೆ ಲಕ್ಷ ಎಕರೆ ಜಮೀನನ್ನು ಈ ರಾಜ್ಯದ ಹೊಲೆಯ, ಮಾದಿಗ, ಭೋವಿ, ಲಂಬಾಣಿ, ಕುರುಬ, ಅಗಸ, ಕುಂಬಾರ, ಮೇದಾರ ಇಂಥವರಿಗೆ ಸಿಗುವಂತೆ ಮಾಡಲಾಯಿತು. ಭೂ ಸುಧಾರಣಾ ಕಾನೂನು ಅಡಿಯಲ್ಲಿ ತೋಟಿ, ತಳವಾರ, ನೀರಗಂಟಿ, ಇನಾಂ ಜಮೀನುಗಳನ್ನು ದಲಿತರಿಗೆ ಬಿಡಿಸಿಕೊಡುವಂಥ ಚಳುವಳಿಯನ್ನು ೧೯೭೭ ರಲ್ಲಿ ಸಂಘಟಿಸಿದರು. ಇದರಿಂದ ಅಂದಿನ ಮುಖ್ಯಮಂತ್ರಿಗಳಾದ ದೇವರಾಜ್ ಅರಸ್ ಆಳ್ವಿಕೆಯ ಅವಧಿಯಲ್ಲಿ 'ಭೂ ಪರಬಾರೆ ನಿಷೇಧ ಕಾನೂನು' ೧೯೭೭ ರಲ್ಲಿ ಜಾರಿಗೆ ತರಲಾಯಿತು. ಇದು ಕೃಷ್ಣಪ್ಪನವರ ಹೋರಾಟದ ಯಶಸ್ಸು ಎಂದೇ ಹೇಳಬಹುದು.

ಸರ್ಕಾರ, ಭೂಮಾಲೀಕರು, ಮೇಲ್ಜಾತಿಯವರ ವಿರುದ್ಧದ ಕೃಷ್ಣಪ್ಪನವರ ಚಳವಳಿಗಳು, ಹೋರಾಟಗಳು ಕೆಳಜಾತಿಗಳಲ್ಲಿ ಒಗ್ಗಟ್ಟು, ಸ್ವಾಭಿಮಾನ, ಛಲ, ಆರ್ಥಿಕ ಸ್ವಾವಲಂಬನೆಯನ್ನು ತಂದುಕೊಟ್ಟವು. ಅಲ್ಲದೆ ದಲಿತರು ಒಂದು ಶಕ್ತಿಯಾಗಿ ಹೊರಹೊಮ್ಮಲು ಪ್ರಬಲ ಸಾಧನವಾಗಿದ್ದವು ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ. ಭೂ ಹೋರಾಟದ ಜೊತೆಗೆ ಅಸ್ಪೃಶ್ಯತೆಯ ವಿರುದ್ಧ ಹೋರಾಟವನ್ನು ಆರಂಭಿಸಿದರು. ಅಸ್ಪೃಶ್ಯತೆಯ ವಿರುದ್ಧ ಇವರು ನಡೆಸಿದ ಹೋರಾಟದಿಂದ ಸರ್ಕಾರ ಹಾಗೂ ಸಮಾಜದ ಕಣ್ಣು ತೆರೆಯಲು ಕಾರಣವಾಯಿತು. ಸಮಾಜದ ಅನಿಷ್ಟ ಪದ್ಧತಿಯಾದ ಬೆತ್ತಲೆ ಸೇವೆ ವಿರುದ್ಧ ಕೃಷ್ಣಪ್ಪನವರು ಸಂಘಟಿಸಿದ ಚಳವಳಿ, ಅಂತರರಾಷ್ಟ್ರೀಯ ಗಮನ ಸೆಳೆಯಿತು. ಹಾಗೂ ಸರ್ಕಾರ ಕಾನೂನು ಮೂಲಕ ೧೯೮೬ ರಿಂದ ಬೆತ್ತಲೆ ಸೇವೆಯ ಮೇಲೆ ನಿಷೇಧ ವಿಧಿಸಿದೆ. ಕೃಷ್ಣಪ್ಪನವರು ದಲಿತ ವಿದ್ಯಾರ್ಥಿಗಳ ಜಾಗೃತಿಗೆ ಪ್ರೇರಕರಾಗಿದ್ದರು. ಹಾಗೂ ದಲಿತ ವಿದ್ಯಾರ್ಥಿಗಳಲ್ಲಿ ಸಮಾನತೆಯ ಪ್ರಜ್ಞೆ, ಸಂಘರ್ಷದ ಹಾದಿಯನ್ನು ತೋರಿಸಿದರು ಎಂಬುದು ಅವರ ಚಿಂತನೆಗಳಿಂದ ವ್ಯಕ್ತವಾಗುತ್ತದೆ. ಎಪ್ಪತ್ತರ ದಶಕದಲ್ಲಿ ಹೆಂಡ, ಸಾರಾಯಿ ನಿಷೇಧಿಸಿ, ಆಶ್ರಮ-ಶಾಲೆಗಳ ಸ್ಥಾಪನೆಗೆ ಕೃಷ್ಣಪ್ಪನವರ ಹೋರಾಟಗಳು ಪ್ರಮುಖ ಕಾರಣವಾದವು.

ಸಮಾಜದ ಅನಿಷ್ಟ ಆಚರಣೆಗಳಿಗೆ, ಜಾತೀಯ ಅಮಾನುಷ ಆಚರಣೆಗಳಿಗೆ ಮೊದಲು ಬಲಿಯಾಗುವವರು ದಲಿತ ಹೆಣ್ಣುಮಕ್ಕಳು ಎಂಬುದು ಕೃಷ್ಣಪ್ಪನವರ ಚಿಂತನೆಯಾಗಿದೆ. ದಲಿತ ಸ್ತ್ರೀಯರ ಮೇಲೆ ಶ್ರೀಮಂತರು, ಬಲಾಢ್ಯರು ನಡೆಸುವಂಥ ದೌರ್ಜನ್ಯಗಳ ವಿರುದ್ಧ ಕೃಷ್ಣಪ್ಪನವರು ಹಲವು ಹೋರಾಟಗಳನ್ನು ಕೈಗೊಂಡಿದ್ದಾರೆ. ಇಂಥ ಹೋರಾಟಗಳು ದಲಿತ ಮಹಿಳೆಯರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದವು ಎನ್ನುವ ಅನಿಸಿಕೆ ವ್ಯಕ್ತವಾಗುತ್ತದೆ.

೨.೧ ಕೃಷ್ಣಪ್ಪ: ಕೌಟುಂಬಿಕ ಪರಿಸರ

ಕೃಷ್ಣಪ್ಪನವರ ತಂದೆಯಾದ ಬಸಪ್ಪ ಮೊದಲು ಮಿಲಿಟರಿಗೆ ಆಹಾರ ಸಾಮಾಗ್ರಿ ಸರಬರಾಜು ಮಾಡುವ ಕೆಲಸ ಮಾಡುತ್ತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದಾದ ಮೇಲೆ ಅವರು ಕೆಲಸ ಕಳೆದುಕೊಂಡಾಗ ಜೀವನ ಸಾಗಿಸಲು ಕೂಲಿ ಕೆಲಸವನ್ನು ಅವಲಂಬಿಸಿದ್ದರು. ಇಂಥ ಕಷ್ಟಕರವಾದ ಜೀವನ ನಡೆಸಿದರೂ ಕೂಡ ಕೃಷ್ಣಪ್ಪನವರ ಕುಟುಂಬದ ಸದಸ್ಯರು ಕೃಷ್ಣಪ್ಪನವರನ್ನ ಓದಿಸಿ, ವಿದ್ಯಾವಂತರನ್ನಾಗಿಸಿ ವೈಚಾರಿಕವಾಗಿ ಬೆಳೆಯಲು ಮತ್ತು ಅವರ ಜೀವನದ ಏಳಿಗೆಗೆ ತುಂಬ ಶ್ರಮಿಸಿದರು. ಸ್ವತಃ ಕೃಷ್ಣಪ್ಪನವರು ರಜೆದಿನಗಳಲ್ಲಿ ಕೂಲಿ ಕೆಲಸ ಮಾಡಿಕೊಂಡು ವಿದ್ಯಾಭ್ಯಾಸ ಮುಂದುವರೆಸಿದ್ದರು. ಇಂಥ ಕಷ್ಟಕರವಾದ ಬದುಕು ಅವರದ್ದು.

೨.೨ ಕೃಷ್ಣಪ್ಪನವರು ಮತ್ತು ಸೈದ್ಧಾಂತಿಕ ಪ್ರಭಾವ

ಹುಟ್ಟಿನಿಂದಲೇ ಬಡತನದ ಬೇಗೆ ಹಾಗೂ ಅಸ್ಪೃಶ್ಯತೆಯ ಕರಾಳ ವಾತಾವರಣದಲ್ಲಿ ಬೆಳೆದಿದ್ದ ಅವರು ಅಂದಿನ ಶೋಷಣೆಗಳು, ಹೃದಯಹೀನ ಸಮಾಜದ ವರ್ತನೆಯ ನೋವನ್ನು ಒಳಗೊಳಗೇ ಅನುಭವಿಸುತ್ತ

ಸಂವೇದನಾ ಶೀಲತೆಯನ್ನು ಬೆಳೆಸಿಕೊಂಡರು. ತಮ್ಮವರು ಒಳಗಾಗಿದ್ದ ಸತತ ಶೋಷಣೆ ಮತ್ತು ಅನ್ಯಾಯಗಳ ವಿರುದ್ಧ ವ್ಯಗ್ರಗೊಂಡಿದ್ದ ಅವರ ಮನ ಹೋರಾಟದ ಹಾದಿ ಹಿಡಿದಿತ್ತು. ತನ್ನ ಕುಟುಂಬದ ಮೇಲೆ ಅಂದಿನ ಸಮಾಜವು ವರ್ತಿಸಿದ್ದ ಪರಿ ಮತ್ತು ಬಾಲ್ಯದಲ್ಲಿ ಘಟಿಸಿದ ಘಟನೆಗಳು ಅವರ ಮೇಲೆ ಗಾಢ ಪ್ರಭಾವ ಬೀರಿದವು. ಬಾಲ್ಯದ ಕಟು ಅನುಭವಗಳು ಮುಂದೆ ಇವರೊಬ್ಬ ವಿಶಿಷ್ಟ ವ್ಯಕ್ತಿಯನ್ನಾಗಿ ರೂಪಿಸಲು ಕಾರಣವಾಗಿದ್ದುಂಟು. ಮುಂದೆ ಶಾಲಾ-ಕಾಲೇಜು ದಿನಗಳಲ್ಲಿ ಅಂಬೇಡ್ಕರ್, ಲೋಹಿಯಾ, ಜಯಪ್ರಕಾಶ್‌ನಾರಾಯಣ, ಶಾಂತವೇರಿಗೋಪಾಲಗೌಡ ಮೊದಲಾದ ಸಮಾಜದ ಸುಧಾರಕರ ಮತ್ತು ಅವರ ಮಾನವತವಾದಿ ಚಿಂತನೆಗಳಿಂದ ಸಮಾನತೆಯ ಸಿದ್ಧಾಂತಗಳಿಂದ ಪ್ರಭಾವಿತರಾಗಿದ್ದರು. ಸಮಾನತೆಯಲ್ಲಿ ನಂಬಿಕೆಯಿಟ್ಟಿದ್ದ ಕೃಷ್ಣಪ್ಪನವರು ಕೂಲಿ ಕಾರ್ಮಿಕ, ಹಿಂದುಳಿದವರ, ದಲಿತರ ಏಳಿಗೆಗೆ ಹಲವಾರು ಚಳವಳಿಗಳನ್ನು ಹೋರಾಟಗಳನ್ನು, ಸಂಘರ್ಷಗಳನ್ನು ರೂಪಿಸಿ ಅಸಮಾನತೆ ಹೋಗಲಾಡಿಸಲು ಶ್ರಮಿಸಿದರು. ಸಮಾಜದಲ್ಲಿ ಸಮಾನತೆ ಇರಬೇಕು, ದಲಿತರು ಜಾಗೃತರಾಗಬೇಕೆಂದು ದಲಿತ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾದ ಅಂಬೇಡ್ಕರ್ ಅವರನ್ನು ತಮ್ಮ ಆರಾಧ್ಯ ದೈವವನ್ನಾಗಿ ಸ್ವೀಕರಿಸಿ, ಅವರ ಬಗ್ಗೆ ಅಪಾರ ಗೌರವ, ವಿಶ್ವಾಸ ಹೊಂದಿದ್ದರು. ಹಾಗೂ ಇವರ ಕ್ರಾಂತಿಕಾರಕ ವಿಚಾರಗಳನ್ನು ಮೆಚ್ಚಿಕೊಂಡಿದ್ದರು ಎಂಬುದು ಕೃಷ್ಣಪ್ಪನವರ ಚಿಂತನೆಗಳಿಂದ ವ್ಯಕ್ತವಾಗುತ್ತದೆ. ಇನ್ನು ಹೆಚ್ಚಾಗಿ ಹೇಳಬೇಕೆಂದರೆ ಹೋರಾಟ, ಸಂಘರ್ಷದ ದೃಷ್ಟಿಯಿಂದ ಪ್ರಭಾವ ಬೀರಿದ್ದೆಂದರೆ ಅಂಬೇಡ್ಕರ್ ಅವರ ಸ್ವಾಭಿಮಾನ, ಶಿಕ್ಷಣ, ಸಂಘರ್ಷ, ರಾಜಕೀಯ ವಿಚಾರಗಳಾಗಿವೆ. ಇವು ಕೃಷ್ಣಪ್ಪನವರು ಹೋರಾಟದ ಹಾದಿ ಹಿಡಿಯುವಲ್ಲಿ ಪ್ರೇರಣೆಯನ್ನು ಒದಗಿಸಿದವು. ಹೀಗೆ ಕೃಷ್ಣಪ್ಪ ಅವರು ಸಾಮಾಜಿಕ ಚಿಂತನೆಗಳಿಂದ ಹಾಗೂ ಚಿಂತನಾಶೀಲರ ವೈಚಾರಿಕತೆಯಿಂದ ಪ್ರಭಾವಿತರಾಗಿ ಹಿಂದುಳಿದ ಹಾಗೂ ದಲಿತ, ಅಲ್ಪಸಂಖ್ಯಾತರಿಗೆ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಸಮಾನತೆ ಒದಗಿಸಿಕೊಡಲು ಅವಿರತ ಶ್ರಮಿಸಿದವರು.

೨.೩ ಕೃಷ್ಣಪ್ಪ ಅವರ ಕೊನೆಯ ದಿನಗಳು

ತಮ್ಮ ಇಡೀ ಜೀವನವನ್ನೇ ದಲಿತರ ಉದ್ಧಾರಕ್ಕಾಗಿ ಮೀಸಲಾಗಿಟ್ಟ ಕೃಷ್ಣಪ್ಪ ಅವರು ಕಾಲಗರ್ಭದಲ್ಲಿ ಹುದುಗಿ ಹೋದರು. ತಮ್ಮ ಜೀವನದ ಕೊನೆಯ ದಿನಗಳಲ್ಲಿ ತಮಗರಿವಿಲ್ಲದಂತೆಯೇ ಇರುವ ವ್ಯವಸ್ಥೆಯನ್ನು ಸಂರಕ್ಷಿಸಿಕೊಂಡುಬರುತ್ತಿದ್ದ ರಾಜಕೀಯ ಪಕ್ಷಗಳೊಂದಿಗಿನ ಅವರ ಸಖ್ಯ ಅವರು ಹುಟ್ಟುಹಾಕಿದ ಸಂಘಟನೆಯಲ್ಲಿ ಒಡಕನ್ನುಂಟು ಮಾಡಲು ಕಾರಣವಾಯಿತು. ಹೋರಾಟದ ಜೀವಿ ಕೃಷ್ಣಪ್ಪನವರು ರಾಜಕೀಯವನ್ನು ಪ್ರವೇಶಿಸಿದರು. ರಾಷ್ಟ್ರೀಯ ನಾಯಕರಾದ ಕಾನ್ಶೀರಾಂ ಅವರು ಕೃಷ್ಣಪ್ಪ ಅವರಲ್ಲಿ ರಾಷ್ಟ್ರೀಯ ನಾಯಕತ್ವದ ಗುಣಲಕ್ಷಣಗಳನ್ನು ಗುರುತಿಸಿ ಅವರನ್ನು 'ಬಹುಜನ ಸಮಾಜ ಪಕ್ಷ'ದ ರಾಷ್ಟ್ರೀಯ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಿದ್ದರು. ಕೃಷ್ಣಪ್ಪನವರು ಬಿ.ಎಸ್.ಪಿ. ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಪ್ರಬಲವಾದ ಕಾರಣವಿದೆ. ಬಿ.ಎಸ್.ಪಿ.ಯು ಅಂಬೇಡ್ಕರ್ ಅವರ ರಾಜಕೀಯ ಸಿದ್ಧಾಂತವನ್ನು ಒಪ್ಪಿ, ಬಹುಜನರ ಹಿತಕ್ಕಾಗಿ ಅಸ್ತಿತ್ವಕ್ಕೆ ಬಂದ ಪಕ್ಷವಾದ್ದರಿಂದ ಕೃಷ್ಣಪ್ಪನವರು ಈ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಂಡರು. ಕರ್ನಾಟಕ ದಲಿತ ಸಂಘರ್ಷ ಸಮಿತಿಯು ರಾಜಕೀಯ ಪ್ರವೇಶ ಕುರಿತು ಚರ್ಚೆ ನಡೆಸುತ್ತಿರುವಾಗಲೆ, ದ.ಸಂ.ಸ.ಯ ಅಸ್ತಿತ್ವವನ್ನು ಹಾಗೆಯೇ ಉಳಿಸಿಕೊಂಡು ಬಿ.ಎಸ್.ಪಿ. ಯನ್ನು ಸೇರಿತು. ನಂತರ ಬಿ.ಎಸ್.ಪಿ.ಯನ್ನು ಬೆಂಬಲಿಸುವ ಮತ್ತು ಬೆಂಬಲಿಸದೆ ಇರುವ ಎರಡು ಗುಂಪುಗಳಾಗಿ ದ.ಸಂ.ಸಮಿತಿಯಲ್ಲಿ ಗೊಂದಲವುಂಟಾಗಿ ಒಡಕಿಗೆ ಕಾರಣವಾಯಿತು. ಇಂಥ ಒಡಕು ಮುಂದೆ ದ.ಸಂ.ಸಮಿತಿಯು ತನ್ನ ಪ್ರಭಾವವನ್ನು ಕಡಿಮೆಮಾಡಿಕೊಳ್ಳುವುದಕ್ಕೆ, ಜನರು ಹಗುರವಾಗಿ ಮಾತನಾಡಿಕೊಳ್ಳಲು ಕಾರಣವಾಯಿತು.[೯] ಹೀಗೆ ಕೃಷ್ಣಪ್ಪನವರು ಕಟ್ಟಿದ ಒಂದು ಸಂಸ್ಥೆ ತನ್ನ ಕಣ್ಣೆದುರೇ

ಇಬ್ಭಾಗವಾದುದು ಅವರಿಗೆ ಅಪಾರ ನೋವು ಉಂಟುಮಾಡಿತ್ತು ಎನ್ನುವ ಅನಿಸಿಕೆ ವ್ಯಕ್ತವಾಗುತ್ತದೆ. ಅದರಂತೆ ಇನ್ನೊಂದು ಮಹತ್ವದ ನಿರ್ಣಯವೂ ಸಹ ಅವರ ಮನಸ್ಸನ್ನು ಗಾಯಗೊಳಿಸಿತ್ತು. ಅದು ಜನತಾ ಪಕ್ಷದ ಇತರೆ ಮಿತ್ರಪಕ್ಷಗಳ ಬೆಂಬಲದಿಂದ ೧೯೯೧ ರಲ್ಲಿ ಕೋಲಾರದ ೧೦ನೆಯ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದರು. ಈ ಜಿಲ್ಲೆಯಲ್ಲಿ ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ದಲಿತರು ಇಲ್ಲಿ ವಾಸವಾಗಿದ್ದರೂ ಕೂಡ ಕೃಷ್ಣಪ್ಪನವರು ಈ ಜಿಲ್ಲೆಯಿಂದ ಸ್ಪರ್ಧಿಸಿ ಸೋತಿರುವುದು ಒಂದು ವಿಪರ್ಯಾಸದ ಸಂಗತಿ. ಅವರ ಸೋಲಿಗೆ ಮತ್ತೊಂದು ಕಾರಣವೆಂದರೆ ಮೇಲ್ವರ್ಗದ ಜನರ ವಿರುದ್ಧ ಹಿಂದೆ ಮಾಡಿದ ಚಳವಳಿಗಳಿಂದಾಗಿ ಆ ಜನರು ಮತ ನೀಡಲಿಲ್ಲ. ಇದು ಅವರ ಮನಸ್ಸಿನ ಮೇಲೆ ಆಘಾತ ಉಂಟುಮಾಡಿತು.[೧೦]

ಕೃಷ್ಣಪ್ಪನವರು ದಿನಾಂಕ ೩೦.೦೪.೧೯೯೭ ರಲ್ಲಿ ಜಿಲ್ಲಾಮಟ್ಟದ ಅಂಬೇಡ್ಕರ್ ದಿನಾಚರಣೆಯಲ್ಲಿ ಭಾಗವಹಿಸಲು ಗದಗಿಗೆ ಹೋದಾಗ ಹಠಾತ್ ಹೃದಯಾಘಾತಕ್ಕೆ ತುತ್ತಾಗಿ ಕಾಲವಶರಾದರು. ಹೋರಾಟಜೀವಿ ಕೊನೆಗೂ ಹೋರಾಟದ ಹಾದಿಯಲ್ಲೇ ಕೊನೆಯ ಉಸಿರೆಳೆದಿದ್ದಾರೆ. ಇಂಥ ನಾಯಕರನ್ನು ಕಳೆದುಕೊಂಡ ಬಗ್ಗೆ ಬಿ.ಎಸ್.ಪಿ. ರಾಷ್ಟ್ರೀಯ ಅಧ್ಯಕ್ಷರಾದ ಕಾನ್ಶೀರಾಂ ಅವರು ದಕ್ಷಿಣ ಭಾರತದ ಒಬ್ಬ ಸಮರ್ಥ ನಾಯಕನನ್ನು ಪಕ್ಷ ಕಳೆದುಕೊಂಡಿತು ಎಂದು ಶೋಕ ವ್ಯಕ್ತಪಡಿಸಿದರು.

ಕೃಷ್ಣಪ್ಪನವರು ನಿಧನ ಹೊಂದಿದ ಆಘಾತಕಾರಿ ಸುದ್ದಿಯನ್ನು ಕೇಳಿ ರಾಜ್ಯದಾದ್ಯಂತ ಅವರು ಹೊಂದಿದ್ದ ಅಪಾರ ಹಿತೈಷಿಗಳು ಮತ್ತು ಅನುಯಾಯಿಗಳು, ಸ್ನೇಹಿತರು ಜಾತಿ ಭೇದವಿಲ್ಲದೆ ಅವರ ಅಂತಿಮ ದರ್ಶನಕ್ಕಾಗಿ ಜನಸಾಗರವೇ ಹರಿದು ಬಂದಿತ್ತು. ಕರ್ನಾಟಕ ರಾಜ್ಯದ ಅಂದಿನ ಮುಖ್ಯಮಂತ್ರಿ ಜೆ.ಎಚ್.ಪಟೇಲ್, ಉಪಮುಖ್ಯಮಂತ್ರಿ ಸಿದ್ದರಾಮಯ್ಯರಂಥ ರಾಜ್ಯದ, ರಾಷ್ಟ್ರದ ಹಿರಿಯ ನಾಯಕರೆಲ್ಲರೂ ಕೃಷ್ಣಪ್ಪನವರ ನಿಧನಕ್ಕೆ ತೀವ್ರ ಶೋಕ ವ್ಯಕ್ತಪಡಿಸಿದರು. ಕೃಷ್ಣಪ್ಪನವರ ಸಮಾಧಿಯನ್ನು ಹರಿಹರ ತಾಲ್ಲೂಕಿನ ಹನಗವಾಡಿಯಲ್ಲಿ ನಿರ್ಮಿಸಲಾಗಿದೆ. ಇವರ ಸಮಾಧಿಗೆ 'ಮೈತ್ರಿವನ' ಎಂಬ ಹೆಸರನ್ನು ಇಡಲಾಗಿದೆ.

ಟಿಪ್ಪಣಿಗಳು

೧. ಕೃಷ್ಣಪ್ಪ. ಬಿ., ಪ್ರೊಫೆಸರ್ ಬಿ. ಕೆ. ಬಿಚ್ಚು ನುಡಿ, ಪು. ೧, ಅದೇ, ೧೬

೨. ಹಾರೋಗದ್ದೆ ಉಷಾ ರಮೇಶ್ ನಾಯಕ, ಶಿವಮೊಗ್ಗ ಜಿಲ್ಲೆಯ ಶತಮಾನದ ಮಹಾನ್ ಪ್ರತಿಭೆಗಳು, ಭಾಗ ೧, ಪು. ೧೬೨, ೧೬೩

೩. ಬೇಂದ್ರೆಯವರ 'ಇಳಿದು ಬಾ ತಾಯಿ ಇಳಿದು ಬಾ', 'ಶುಭ ನುಡಿಯೇ ಶಕುನದ ಹಕ್ಕಿ', 'ನೀ ಹೀಂಗ ನೋಡಬ್ಯಾಡ ನನ್ನ', ಇನ್ನೂ ಮೊದಲಾದವು.

೪. ಕುವೆಂಪುರವರ, 'ಓ ನನ್ನ ಚೇತನ ಆಗು ನೀ ಅನಿಕೇತನ', 'ನಿನ್ನ ಹಾಂದಳದಂತೆ ನನ್ನ ಮನವಿರಲಿ' ಮೊದಲಾದವು.

೫. ಗೋಪಾಲಕೃಷ್ಣ ಅಡಿಗರ 'ಯಾವ ಮೋಹನ ಮುರಳಿ ಕರೆಯಿತು ದೂರ ತೀರಕೆ ನಿನ್ನನು', 'ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿ ದೋಣಿ' ಇತ್ಯಾದಿ.

೬. ಶಿವರುದ್ರಪ್ಪ ಜಿ. ಎಸ್., 'ಎದೆ ತುಂಬಿ ಹಾಡಿದೆನು ಅಂದು ನಾನು', 'ನನ್ನ ಹೃದಯ ಅರಿತು ಹಾಡು, ನನ್ನ ನಿನ್ನ ಮೋದಕೆ' ಇತ್ಯಾದಿ.

೭. ರಾಜರತ್ನಂ ಜಿ. ಪಿ., 'ಬ್ರಹ್ಮ ನಿಂಗೆ ಜೋಡಿಸ್ತೀನಿ ಹೆಂಡ ಮುಟ್ಟಿದ ಕೈನ', 'ನೀ ನನ್ನಟ್ಟಿ ಬೆಳಕಂಗಿದ್ದೆ ನಂಜೂ' ಮುಂತಾದವು.

೮. ಇಂದಿರಾ ಕೃಷ್ಣಪ್ಪ, ಬಯಲು ಚಿತ್ತರೆ ಚಂದ್ರಗುತ್ತಿ, ಪು. ೭೧

೯. ಲಕ್ಷ್ಮಣ್ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿ, ಪು. ೧೦೭, ಅದೇ, ೧೦೯

೧೦. ಅರ್ಜುನ ಗೊಳಸಂಗಿ, ಕನ್ನಡ ದಲಿತ ಸಾಹಿತ್ಯ ಸಮಾಲೋಕನ, ಪು. ೧೩೪, ಅದೇ, ೧೩೫

ಅಧ್ಯಾಯ ಮೂರು

ದಲಿತ ಚಿಂತಕರಾಗಿ ಕೃಷ್ಣಪ್ಪ

೩.೧ ಕೃಷ್ಣಪ್ಪ ಅವರ ದಲಿತ ಚಿಂತನೆ

೩.೨ ಕೃಷ್ಣಪ್ಪ ಅವರ ಶೈಕ್ಷಣಿಕ ಚಿಂತನೆ

೩.೩ ಕೃಷ್ಣಪ್ಪ ಅವರ ಸಾಹಿತ್ಯ ಚಿಂತನೆ

೩.೪ ಕೃಷ್ಣಪ್ಪ ಅವರ ರಾಜಕೀಯ ಚಿಂತನೆ

೩.೫ ಕೃಷ್ಣಪ್ಪ ಅವರ ಮಹಿಳಾ ಚಿಂತನೆ

ಶತಮಾನಗಳಿಂದಲೂ ದಲಿತರು, ಕೆಳವರ್ಗದವರು ಸಮಾಜದಲ್ಲಿರುವ ಅಸ್ಪೃಶ್ಯತೆ, ಅಸಮಾನತೆ, ಜಾತಿ ವ್ಯವಸ್ಥೆಯಿಂದ ಬಳಲುತ್ತಿದ್ದಾರೆ. ಸಮಾಜದಲ್ಲಿರುವ ಈ ತಾರತಮ್ಯವನ್ನು ತೊಡೆದು ಹಾಕಲು ಬುದ್ಧ, ಬಸವನ ಕಾಲದಿಂದಲೂ ಪ್ರಯತ್ನಗಳು ನಡೆಯುತ್ತಲೇ ಇವೆ. ಆದರೆ ಇವರ ಪ್ರಯತ್ನಗಳು ಅಸಮಾನತೆ, ಅಸ್ಪೃಶ್ಯತೆ, ಜಾತಿವ್ಯವಸ್ಥೆಯನ್ನು ಸಂಪೂರ್ಣವಾಗಿ ನಾಶಮಾಡಲು ಆಗಲಿಲ್ಲ. ಹಾಗೂ ಅಸ್ಪೃಶ್ಯರನ್ನು ತುಳಿಯುತ್ತಿರುವ ಮೇಲ್ಜಾತಿಯವರ ಮೇಲೂ ಇವರ ಪ್ರಯತ್ನಗಳು ಪರಿಣಾಮ ಬೀರಲಿಲ್ಲ. ಬುದ್ಧ, ಬಸವನ ಧರ್ಮಗಳು ಕಾಲಾನುಕ್ರಮದಲ್ಲಿ ಜಾತಿ ಧರ್ಮಗಳಾಗಿ ಪರಿವರ್ತನೆಗೊಂಡಿರುವುದು ಈ ದೇಶದ ಕರಾಳ ಇತಿಹಾಸವಾಗಿದೆ. ಸಮಾಜ ಪರಿವರ್ತನೆಗಾಗಿ ಹೋರಾಟವು ಮೇಲಿಂದ ಆರಂಭವಾಗಬೇಕು ಎಂದು ವಾದಿಸುವವರಿದ್ದಾರೆ. ಆದರೆ ಅಕ್ಷರಶಃ ಅದು ಆರಂಭವಾಗುವುದು ತಳಮಟ್ಟದಿಂದಲೇ ಆಗಿದೆ. ಎಪ್ಪತ್ತರ ದಶಕದಲ್ಲಿ ಅಸ್ಪೃಶ್ಯತೆ ವಿರುದ್ಧ ಹೋರಾಡುವುದು ಅಸ್ಪೃಶ್ಯರಿಗೆ ಅನಿವಾರ್ಯವಾಗಿತ್ತು. ಸಮಾನತೆಗೆ ಜಾತಿ ವಿರುದ್ಧ ಹೋರಾಡುವಂತೆ ಅಂಬೇಡ್ಕರ್ ಅಸ್ಪೃಶ್ಯರಿಗೆ ಕರೆಕೊಟ್ಟರು. ಅಂಬೇಡ್ಕರ್ ಸ್ವತಃ ಈ ಚಳವಳಿಯ ನೇತೃತ್ವವನ್ನು ವಹಿಸಿಕೊಂಡರು.

ಗಾಂಧೀಜಿಯವರು "ಬ್ರಿಟಿಷರೇ ನಮ್ಮ ದೇಶಬಿಟ್ಟು ತೊಲಗಿರಿ" ಎಂದು ಚಳವಳಿ ಮಾಡುತ್ತಿದ್ದರು. ಅಂಬೇಡ್ಕರ್ ಅವರು "ಹಿಂದುಗಳೇ ನಮಗೆ ಕುಡಿಯಲು ನೀರು ಕೊಡಿ, ದೇವಸ್ಥಾನದ ಒಳಗಡೆ ಬಿಡಿ" ಎಂದು ಚಳವಳಿ ಮಾಡುತ್ತಿದ್ದರು. ಗಾಂಧಿ ಅವರ ಸ್ವತಂತ್ರ್ಯ ಚಳವಳಿ ಇಂದು ಮುಗಿದ ಅಧ್ಯಾಯ. ಆದರೆ ಅಂಬೇಡ್ಕರ್ ಚಳವಳಿ ಅಂತ್ಯವಿಲ್ಲದ ನಿರಂತರ ಹೋರಾಟವಾಗಿ ಅಂಬೇಡ್ಕರ್ ಅವರ ಚಿಂತನೆಗಳು ವಿಚಾರಗಳು ಯಾವೊತ್ತೂ ಶೋಷಿತ ಸಮಾಜಕ್ಕೆ ಆದರ್ಶವಾಗಿವೆ. ಇವರ ವಿಚಾರಗಳು, ಚಿಂತನೆಗಳಿಂದ ಪ್ರಭಾವಿತರಾಗಿ ಸಮಾನತೆಯ ಸಮಾಜಕ್ಕಾಗಿ ದುಡಿಯುತ್ತಿರುವ ಅನೇಕ ಸಮಾಜ ಚಿಂತಕರು ಇದ್ದಾರೆ. ಅಂಥವರಲ್ಲಿ ಬಿ. ಕೃಷ್ಣಪ್ಪ ಅವರು ಸಹಬ್ಬರು.

ಇಪ್ಪತ್ತನೆಯ ಶತಮಾನ ಹಲವು ದಾಖಲೆಗಳನ್ನು ಮಾಡಿ ಮಂಗಳ ಗ್ರಹಕ್ಕೂ ತನ್ನ ತಂತ್ರಜ್ಞಾನದ ಕಾಲನ್ನಿಟ್ಟು ಮುಂದೆ ಸಾಗಿದೆ. ಮನುಷ್ಯ ಪ್ರಗತಿ ಸಾಗಿಸುತ್ತ ಅಸಮಾನತೆಯನ್ನು ನಿವಾರಿಸಲು ಟೊಂಕ ಕಟ್ಟಿ ನಿಂತು ತನ್ನ ಧ್ವನಿಯನ್ನು ಮುಗಿಲಿಗೆ ಏರಿಸಿದ್ದು ಇನ್ನೂ ಅತ್ಯಂತ ಕುತೂಹಲಕಾರಿಯಾದದ್ದು. ಕೃಷ್ಣಪ್ಪ ಅವರು ತಮ್ಮ ಚಿಂತನೆಗಳಿಂದ ನೇರ ವಿಚಾರಗಳಿಂದ ಜಡ್ಡುಗಟ್ಟಿದ ಈ ಸಮಾಜದ ಬುಡಗಳನ್ನು ಅಲ್ಲಾಡಿಸಿ ಪ್ರಗತಿ ಪಥಕ್ಕೆ ನಾಂದಿ ಹಾಡಿದ್ದಾರೆ. ಇಷ್ಟೆಲ್ಲಾ ಸುಧಾರಣೆಯಲ್ಲೂ ಮನುಷ್ಯ ಕುಲವನ್ನು ತೀವ್ರವಾಗಿ ಬಾಧಿಸುತ್ತಿರುವುದು ಜಾತಿವ್ಯವಸ್ಥೆ. ಇದು ಎಷ್ಟೋ ಜನ ಸಮಾಜ ಸುಧಾರಕರು, ಚಿಂತಕರು ಪ್ರಯತ್ನಪಟ್ಟರೂ ಮನುಷ್ಯ ಮನುಷ್ಯರ ನಡುವೆ ಗೋಡೆಯಾಗಿ ನಿಂತಿದೆ. ಬರ್ಲಿನ್ ಗೋಡೆ ಬಿದ್ದರೂ ಭಾರತದಲ್ಲಿ ಜಾತಿ ಗೋಡೆಗಳು ತಮ್ಮ ವಿಕಾರತೆಯನ್ನು ಸಾರುತ್ತಾ ಎಲ್ಲೆಡೆ ಅಟ್ಟಹಾಸದ ಧ್ವನಿ ಎತ್ತಿವೆ. ಇತ್ತೀಚಿಗೆ ಹಂಗರಹಳ್ಳಿಯ ಜೀತದಾಳುಗಳು ಕಬ್ಬಿಣದ ಸರಪಳಿಯಲ್ಲಿ ಇದ್ದದು, ಮಂಡ್ಯದಲ್ಲಿ ಜಾತಿಯ ಹೆಸರಿನಲ್ಲಿ ಯುವತಿಯೊಬ್ಬಳು ಕೊಲೆಯಾಗಿದ್ದು, ಚನ್ನಪಟ್ಟಣದಲ್ಲಿ ದಲಿತರ ಮೇಲಿನ ದೌರ್ಜನ್ಯ ನಡೆದಿದ್ದು ಇನ್ನೂ ಶೋಚನೀಯ.

ಎಪ್ಪತ್ತರ ದಶಕದಲ್ಲಿ ಕರ್ನಾಟಕ ರಾಜ್ಯವು ಮಹತ್ತರವಾದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಬದಲಾವಣೆಗಳನ್ನು ಕಂಡಿದೆ. ಇದರ ಮೊದಲ ಹಂತ ಕರ್ನಾಟಕದಲ್ಲಿ ದಲಿತ ವಿದ್ಯಾವಂತರು ಜಾಗೃತರಾಗಿ, ದಲಿತ ಚಳವಳಿಯನ್ನು ಆರಂಭಿಸಿದರು. ಕರ್ನಾಟಕದ ದಲಿತ ಚಳವಳಿಯು ಮಹಾರಾಷ್ಟ್ರದ 'ದಲಿತ

ಪ್ಯಾಂಥರ್ಸ್'ನಿಂದ ಪ್ರಭಾವಿತವಾಗಿದೆ. ಈ ಚಳವಳಿಯಲ್ಲಿ ಪ್ರಗತಿಪರ ಚಿಂತಕರು, ವಿದ್ಯಾವಂತ ದಲಿತರು ಸಾಮಾಜಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಕ್ಷೇತ್ರದಲ್ಲಿದ್ದ ಮೇಲ್ಜಾತಿಯವರ ದಬ್ಬಾಳಿಕೆಯನ್ನು ವಿರೋಧಿಸಲಾಯಿತು. ಇದರ ಉದ್ದೇಶ ದಲಿತರು ಮತ್ತು ಹಿಂದುಳಿದ ವರ್ಗದವರಿಗೆ ದೊರಕಬೇಕಾದ ಸಮಾನತೆ, ಸ್ವಾತಂತ್ರ್ಯಗಳನ್ನು ನೀಡಬೇಕೆಂದು ಹೋರಾಡಿದುದಾಗಿದೆ.

ಇದರ ಎರಡನೆಯ ಹಂತದಲ್ಲಿ ಅಂದರೆ ೧೯೭೪ ರಲ್ಲಿ ದಲಿತರ ಸ್ವಾಭಿಮಾನದ ಸಂಕೇತವಾಗಿ ಒಂದು ಸಾಂಸ್ಕೃತಿಕ ವೇದಿಕೆಯನ್ನು ಸ್ಥಾಪಿಸಲಾಯಿತು. ಅದೇ 'ದಲಿತ ಸಂಘರ್ಷ ಸಮಿತಿ'. ಈ ಸಾಂಸ್ಕೃತಿಕ ವೇದಿಕೆಯನ್ನು ಭದ್ರಾವತಿಯಲ್ಲಿ ಪ್ರೊ. ಬಿ. ಕೃಷ್ಣಪ್ಪ ಅವರು ಸ್ಥಾಪಿಸಿದರು. ದ.ಸಂ.ಸ.ಯ ನಾಯಕತ್ವವನ್ನು ವಹಿಸಿಕೊಂಡ ಕೃಷ್ಣಪ್ಪನವರು ಅಜ್ಞಾನದಲ್ಲಿ ಮೈಮರೆತ ಮುಗ್ಧ ಕೆಳ ಹಾಗೂ ದಲಿತ ವರ್ಗದ ಜನತೆಯನ್ನು ಎಚ್ಚರಿಸಿದರು. ಅಲ್ಲದೆ ಇವರು ದಲಿತರಲ್ಲಿ ಸ್ವಾಭಿಮಾನವನ್ನು, ಸ್ವಯಂಪ್ರಜ್ಞೆಯನ್ನು, ಅನ್ಯಾಯದ ವಿರುದ್ಧ ಸಿಡಿದೇಳುವ ಬಂಡಾಯದ ಮನೋಭಾವವನ್ನು ಬೆಳೆಸಿದ್ದಾರೆ. ಸಮಾನತೆಯ ಸಮಾಜಕ್ಕಾಗಿ 'ಬಿ. ಕೆ.' ಅವರು ಶ್ರಮಿಸಿದರು.

ಯಾವಾಗಲೂ ದಲಿತರ, ಅಲ್ಪಸಂಖ್ಯಾತರ, ಹಿಂದುಳಿದವರ ಅಭಿವೃದ್ಧಿಯ ಬಗ್ಗೆ ಕಳಕಳಿಯಿಂದ ಚಿಂತಿಸಿ, ಆ ಚಿಂತನೆಯನ್ನು ಅನುಷ್ಠಾನಗೊಳಿಸಿದ ಕೃಷ್ಣಪ್ಪನವರು ದಲಿತರ ಉದ್ಧಾರಕ್ಕೆ ಕಾರಣರಾದರು. ಹಿಂದುಳಿದ, ದಲಿತರ, ಅಲ್ಪಸಂಖ್ಯಾತ ವರ್ಗಗಳ ಅಭಿವೃದ್ಧಿಯಾಗದ ಹೊರತು ದೇಶದ ಅಭಿವೃದ್ಧಿ ಹೊಂದಲು ಸಾಧ್ಯವಾಗಲಾರದು ಎಂದು ಚಿಂತಿಸಿದ್ದು ಗಮನಾರ್ಹ. ಸವರ್ಣೀಯರ ದೌರ್ಜನ್ಯಕ್ಕೆ ಸಾಕ್ಷಿಯಾದ ಬೆತ್ತಲೆ ಸೇವೆಯ ವಿರುದ್ಧ ಹೋರಾಡಿದ ಮೊದಲಿಗರಾಗಿದ್ದಾರೆ. ಸಮಾಜದಲ್ಲಿರುವ ಇಂಥ ಅನಿಷ್ಟ ಪದ್ಧತಿಗಳು ತೊಲಗುವವರೆಗೂ ದಲಿತ ಸಮುದಾಯದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಚಿಂತಿಸತೊಡಗಿದ್ದರು. ಕೃಷ್ಣಪ್ಪ ಅವರು ಸಮಾಜವನ್ನು ಪರಿವರ್ತಿಸುವ ಕ್ರಾಂತಿಕಾರಕ ವಿಚಾರಧಾರೆಯನ್ನು ಹೊಂದಿದವರಾಗಿದ್ದಾರೆ. ರಾಷ್ಟ್ರಮಟ್ಟದಲ್ಲಿ ತಮ್ಮ ವರ್ಚಸ್ಸನ್ನು ಹೊಂದಿದ್ದ ಕೃಷ್ಣಪ್ಪನವರು ಅಸ್ಪೃಶ್ಯತೆಯ ನಿರ್ಮೂಲನೆ, ದಲಿತ ಉದ್ಧಾರ, ಸಾಮಾಜಿಕ ತಾರತಮ್ಯಗಳ ನಿವಾರಣೆ, ಮಲಹೊರುವ ಪದ್ಧತಿ ನಿಷೇಧ, ಬೆತ್ತಲೆ ಸೇವೆ ನಿಷೇಧ, ಆರ್ಥಿಕ ಸಮಾನತೆ, ಸಾಹಿತ್ಯ, ಶಿಕ್ಷಣ ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಚಿಂತನೆ ನಡೆಸಿದರು. ಕೃಷ್ಣಪ್ಪ ಅವರು ಅಂಬೇಡ್ಕರ್ ವಿಚಾರಗಳಿಂದ ಪ್ರಭಾವಿತರಾಗಿ ತಮ್ಮ ದೂರದೃಷ್ಟಿಯನ್ನು ಸಾಧಿಸಿದ್ದರು. ಎಲ್ಲಕ್ಕೂ ಮಿಗಿಲಾಗಿ ಸಮಾನತೆಯ ಸಮಾಜದ ಅನುಷ್ಠಾನಕ್ಕೆ ಆದ್ಯತೆ ಕೊಟ್ಟರು. ಈ ರೀತಿಯಾಗಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದ ಕೃಷ್ಣಪ್ಪ ಇಂದಿಗೂ "ದಲಿತರ, ಹಿಂದುಳಿದ, ಅಲ್ಪಸಂಖ್ಯಾತರ ಮನಸ್ಸಿನಾಳದಲ್ಲಿ ಮರೆಯಲಾಗದ ದಲಿತ ನಾಯಕರಾಗಿ" ಉಳಿದಿದ್ದಾರೆ. ಅಲ್ಲದೆ 'ದಲಿತ ಜನತೆಗೆ ಬೆಳಕು ತಂದ ಧ್ರುವತಾರೆ' ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಜಡವಾಗಿದ್ದ ದಲಿತ ಸಮುದಾಯದಲ್ಲಿ ಶಿಕ್ಷಣ, ಸಂಘಟನೆ, ಹೋರಾಟ ಕುರಿತು ದಲಿತ ಜನತೆಯಲ್ಲಿ ಅರಿವು ಮೂಡಿಸಿದ ನಾಯಕರೂ ಹೌದು. ದಲಿತ ಚಳವಳಿಯ ಹರಿಕಾರನಾಗಿ 'ಕರ್ನಾಟಕದ ಅಂಬೇಡ್ಕರ್' ಎಂದೇ ಖ್ಯಾತಿ ಪಡೆದಿದ್ದಾರೆ. ಕರ್ನಾಟಕದಲ್ಲಿ ಅಂಬೇಡ್ಕರ್ ನಂತರ ದಲಿತರ, ಹಿಂದುಳಿದ ವರ್ಗದವರನ್ನು ಕಟ್ಟಿಕೊಂಡು ಸಮಾಜದಲ್ಲಿ ಪುರೋಹಿತಶಾಹಿ ಮತ್ತು ಜಮೀನ್ದಾರಿ ಶಕ್ತಿಗಳ ವಿರುದ್ಧ ಬಂಡೆದ್ದವರಲ್ಲಿ ಕೃಷ್ಣಪ್ಪ ಅವರೇ ಮೊದಲಿಗರಾಗಿದ್ದಾರೆ. ಒಂದು ರೀತಿಯಲ್ಲಿ ಕೃಷ್ಣಪ್ಪನವರನ್ನು 'ಕರ್ನಾಟಕದ ದಲಿತ ವರ್ಗದ ಚಳವಳಿ ಪಿತಾಮಹ' ಎಂದರೆ ತಪ್ಪಾಗಲಾರದು.

ಹುಟ್ಟಿನಿಂದಲೇ ದಲಿತ ಕುಟುಂಬದಿಂದ ಬಂದ ಕೃಷ್ಣಪ್ಪ ದಲಿತರ ಕಷ್ಟ-ಸುಖಗಳು ಹಾಗೂ ಅಸ್ಪೃಶ್ಯತೆ, ಅಸಮಾನತೆಗಳನ್ನು ಕಂಡು ಬೆಳೆದ ವ್ಯಕ್ತಿಯಾಗಿದ್ದ ಕಾರಣ ಅವರಿಗೆ ಅಸ್ಪೃಶ್ಯತೆಯ ವಿರುದ್ಧ ಸಂಘರ್ಷ ಮಾಡಿ ಯಾವ ರೀತಿ ತಮ್ಮ ಹಕ್ಕುಗಳನ್ನು ಪಡೆಯಬೇಕು ಎಂಬುದರ ಬಗ್ಗೆ ಸ್ಪಷ್ಟ ಅರಿವಿತ್ತು. ಮೌಢ್ಯತೆ, ಅಜ್ಞಾನದಲ್ಲಿರುವ ದಲಿತರನ್ನು ಕಂಡರೆ ಮರುಗುವ ಮನೋಧರ್ಮದವರಾಗಿದ್ದ ಕೃಷ್ಣಪ್ಪ ಅವರು ತಮ್ಮ ವ್ಯಕ್ತಿತ್ವದ ಇನ್ನೊಂದು ಮುಖವಾದ ಧೈರ್ಯ ಹಾಗೂ ಎದೆಗಾರಿಕೆಯಿಂದ ಕ್ರಾಂತಿಕಾರಕವಾದ 'ಬೆತ್ತಲೆ ಸೇವೆ ನಿಷೇಧ ಕಾಯ್ದೆ'ಯನ್ನು

ಜಾರಿಗೆ ತರುವಲ್ಲಿ ಯಶಸ್ವಿಯಾದರು. ಇದರಿಂದ ಸಮಾಜದಲ್ಲಿರುವ ಮೃಗೀಯ, ಅಮಾನುಷ, ಅನಾಗರೀಕ ಪದ್ಧತಿಯನ್ನು ತೊಡೆದು ಹಾಕಲು ಸಾಧ್ಯವಾಯಿತು. ಆದರೂ ಈ ಆಚರಣೆಯು ಸಂಪೂರ್ಣವಾಗಿ ನಿಂತಿಲ್ಲ. ಇದು ದಲಿತ ಸಮುದಾಯದ ಬಗ್ಗೆ ಕೃಷ್ಣಪ್ಪರಿಗಿದ್ದ ಅಚಲ ನಿಷ್ಠೆ ಹಾಗೂ ಕಳಕಳಿಗೆ ಸಾಕ್ಷಿಯಾಗಿರುವುದು. ಅವರ ಧೀರತ್ವದ ಈ ಸುಧಾರಣಾ ಕೆಲಸ ಕರ್ನಾಟಕದಲ್ಲಿ ಹೆಗ್ಗಳಿಕೆಗೆ ಪಾತ್ರವಾದದ್ದು ಚರಿತ್ರೆಯಾಗಿದೆ.

ಇದರಿಂದ ಕೃಷ್ಣಪ್ಪ ಅವರು ಒಬ್ಬ ದಲಿತ ಚಿಂತಕನೆಂದು ಕರೆಯುವದಕ್ಕಿಂತ ಒಬ್ಬ ಮಾನವತಾವಾದಿಯೆಂದು ಕರೆಯುವುದು ಹೆಚ್ಚು ಸೂಕ್ತವೆನಿಸುತ್ತದೆ. ಈ ಮಾನವೀಯ ಗುಣದಿಂದಾಗಿಯೇ ಅವರ ಚಿಂತನೆ, ವಿಚಾರಗಳು ಹೊಸ ಸಮಾಜ ನಿರ್ಮಾಣ ವ್ಯವಸ್ಥೆಯಲ್ಲಿ ಹೆಚ್ಚಿನ ಮಹತ್ವ ಪಡೆದಿವೆ.

೩.೧೧ ಕೃಷ್ಣಪ್ಪ ಅವರ ದಲಿತ ಚಿಂತನೆ

ಕೃಷ್ಣಪ್ಪನವರು ದಲಿತ ಚಳವಳಿಯ ನೇತಾರರಾಗಿದ್ದಾರೆ. ಕರ್ನಾಟಕದಲ್ಲಿ ಮೊದಲಬಾರಿಗೆ ದಲಿತ ಜನಾಂಗವೆಲ್ಲಾ ಒಗ್ಗೂಡುವಂತೆ ಮಾಡಿ ಆ ಮೂಲಕ ಚಳವಳಿ ರೂಪಿಸಿ, ಶೋಷಕರು ಅಧೈರ್ಯಗೊಳ್ಳುವಂತೆ ಕೃಷ್ಣಪ್ಪನವರು ಮಾಡಿದರು. ಅಂದಿನ ಮುಖ್ಯಮಂತ್ರಿ ದೇವರಾಜ ಅರಸರ ಆಳ್ವಿಕೆ ಕಾಲವು ಯುಗ ಪರಿವರ್ತನೆಯ ಕಾಲವಾಗಿತ್ತು. ಇಂಥ ಪರಿವರ್ತನೆಯ ಕಾರಣದಿಂದ ದಲಿತ ಯುವಕರು ಎಚ್ಚೆತ್ತುಕೊಂಡಿದ್ದರು. ಈ ಯುವಕರಿಗೆ ಚಳವಳಿ ಹಾದಿಯ ದಿಕ್ಕನ್ನು ತೋರಿಸಿದವರು ಕೃಷ್ಣಪ್ಪನವರು ಎಂದರೆ ತಪ್ಪಾಗಲಾರದು.

ಯಾವುದೇ ಚಳವಳಿಗೆ, ಹೋರಾಟಕ್ಕೆ ಒಂದು ಸೈದ್ಧಾಂತಿಕ ನೆಲೆ ಅವಶ್ಯಕ. ಅಂಥ ನೆಲೆಯನ್ನು ಕೃಷ್ಣಪ್ಪನವರು ಒದಗಿಸಿಕೊಟ್ಟದ್ದರಿಂದ ದಲಿತರ ನೋವುಗಳಿಗೆ ಸ್ಪಂದಿಸಲು 'ದಲಿತ ಸಂಘರ್ಷ ಸಮಿತಿ'ಯ ಹುಟ್ಟು ಪಡೆಯಿತು. ದ.ಸಂ.ಸ. ನಡೆಸುವ ಹೋರಾಟಗಳಿಂದ ದಲಿತರು ಜಾಗೃತರಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಮುಂದೆ ಬಂದರು.

ಪ್ರಾರಂಭದಲ್ಲಿ 'ದಲಿತರು' ಎಂದರೆ 'ಅಸ್ಪೃಶ್ಯರು' ಮಾತ್ರ ಎಂದು ವ್ಯಾಖ್ಯಾನಿಸಲಾಗಿತ್ತು. ಆದರೆ ಕೃಷ್ಣಪ್ಪನವರು 'ದಲಿತ' ಶಬ್ದದ ಪುನರ್‌ವ್ಯಾಖ್ಯಾನ ಮಾಡಿದರು. ದಲಿತ ಚಳವಳಿ ಎಲ್ಲ ಬಡಜನರ ಚಳವಳಿಯಾಗಬೇಕು ಎಂದು 'ದಲಿತ ಎಂದರೆ ಎಲ್ಲ ಮತಧರ್ಮದಲ್ಲಿರುವ ಬಡವರು' ಎಂದು ವ್ಯಾಖ್ಯಾನಿಸಲಾಯಿತು. ಕೃಷ್ಣಪ್ಪನವರಿಗೆ ಅಸ್ಪೃಶ್ಯರ ಕುರಿತು ಮಾತ್ರವಲ್ಲ ಎಲ್ಲ ಶೋಷಿತ ಜನರ ಬಗ್ಗೆ ಅಪಾರ ಕಾಳಜಿ ಇತ್ತು ಎಂದು ವ್ಯಕ್ತವಾಗುತ್ತದೆ. ಈ ನೆಲೆಯಲ್ಲಿ ಕೃಷ್ಣಪ್ಪನವರು ಎಲ್ಲ ಜಾತಿಯ ಶೋಷಿತರು ದಲಿತರೆಂದು ಪರಿಗಣಿಸಿದ್ದು ಗಮನಾರ್ಹ.[೨]

ಭಾರತದಲ್ಲಿ ಜಾತಿಯ ಶ್ರೇಣಿಯಿಂದ ಮೇಲಿದ್ದಾಗ್ಯೂ ಆರ್ಥಿಕವಾಗಿ ಹಿಂದುಳಿಯುವಿಕೆಯು ಎಲ್ಲ ಜಾತಿಗಳಲ್ಲೂ ಇತ್ತು. ಇಂತಹವರನ್ನು ದಲಿತರೆಂದು ಪರಿಗಣಿಸಲಾಗಿದ್ದರೂ ಕೂಡ ಪೂರ್ಣ ಸ್ವರೂಪದಲ್ಲಿ ಇವರು ದಲಿತರಾಗುವುದಿಲ್ಲ ಎಂದಿದ್ದಾರೆ. ಆರ್ಥಿಕವಾಗಿ, ಜಾತಿಯಿಂದ ತುಳಿತಕ್ಕೆ ಒಳಗಾದವರನ್ನು ಮಾತ್ರ ಪೂರ್ಣ ಸ್ವರೂಪದ ದಲಿತರೆಂದು ಪರಿಗಣಿಸಿದ್ದು ಕೃಷ್ಣಪ್ಪನವರ ಚಿಂತನೆಗಳಿಂದ ವ್ಯಕ್ತವಾಗುತ್ತದೆ.

ದಲಿತರು ಶಿಕ್ಷಣ, ಸಂಘಟನೆ, ಹೋರಾಟ ಈ ತತ್ವಗಳನ್ನು ಮೈಗೂಡಿಸಿಕೊಂಡು ಕ್ರಾಂತಿಕಾರಿ ಹೋರಾಟ ನಡೆಸಿದಾಗ ಮಾತ್ರ ಸಮಾನತೆಯ, ಶೋಷಣೆ ಮುಕ್ತ ಸಮಾಜವು ನಿರ್ಮಾಣವಾಗಲು ಸಾಧ್ಯ. ಹಾಗೂ ಹಸಿವು, ಬಡತನ, ಅಸ್ಪೃಶ್ಯತೆ ಕೊನೆಗೊಳ್ಳಲು ಮತ್ತು ದಲಿತ ವಿಮೋಚನೆ ಸಾಧ್ಯವಾಗುವುದು ಎಂದಿದ್ದಾರೆ.

ಜಾತಿಪದ್ಧತಿ ಪ್ರಪಂಚದ ನಾಗರೀಕತೆಗೆ ಭಾರತ ಕೊಟ್ಟ ಒಂದು ಅಮಾನುಷ ಕೊಡುಗೆ. ದಲಿತರ ಪಾಲಿಗೆ ಜಾತಿಯೊಂದು ಮಹಾಶಾಪ. ಈ ದೇಶದಲ್ಲಿ ಜಾತಿ-ವೃತ್ತಿಯನ್ನು, ವೃತ್ತಿ-ಜಾತಿಯನ್ನು ಪರಸ್ಪರ ನಿರ್ಧರಿಸುವುದರಿಂದ ಜಾತಿ ನಾಶವಾಗದ ಹೊರತು ಸಾಂಪ್ರದಾಯಿಕ ವೃತ್ತಿಯಲ್ಲಿ ಬದಲಾವಣೆ ಅಸಾಧ್ಯ. ಸಾಂಪ್ರದಾಯಿಕ ವೃತ್ತಿ

ನಾಶವಾಗದ ಹೊರತು ವ್ಯಕ್ತಿ ಬಿಡುಗಡೆ ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ವೃತ್ತಿ ಬದಲಾವಣೆ ಅಲ್ಲಲ್ಲಿ ಕಂಡುಬಂದರೂ, ಜಾತಿಯ ಮೂಲ ಸತ್ವ ಗಟ್ಟಿಗೊಳ್ಳುತ್ತಲೇ ಇರುತ್ತದೆಂಬ ವಿಚಾರವನ್ನು ಕೃಷ್ಣಪ್ಪನವರ ಚಿಂತನೆಗಳಿಂದ ತಿಳಿಯಬಹುದಾಗಿದೆ.

ಶತಮಾನಗಳಿಂದಲೂ ಮೇಲ್ಜಾತಿಯವರು ದಲಿತರು ಅಕ್ಷರ ಜ್ಞಾನ ಪಡೆಯದಂತೆ ನೋಡಿಕೊಂಡಿದ್ದರು. ದಲಿತರು ಅಕ್ಷರಸ್ಥರಾದರೆ ತಮಗೆ ತಲೆಬಾಗದೇ ಹೋಗಬಹುದೆಂಬ ಭೀತಿಯಿಂದಾಗಿ ಅವರನ್ನು ಅನಕ್ಷರಸ್ಥರಾಗಿ ಉಳಿಸಿದ್ದಾರೆ. ಇದರಿಂದ ದಲಿತರಿಗೆ ಯಾವುದು ಅನ್ಯಾಯ, ಯಾವುದು ಶೋಷಣೆ ಎಂಬ ಅರಿವು ಕೂಡ ಇರಲಿಲ್ಲ. ಅಷ್ಟೊಂದು ಮೌಢ್ಯತೆಯನ್ನು ಅವರಲ್ಲಿ ಸವರ್ಣೀಯರು ತುಂಬಿದ್ದರು.

ಸವರ್ಣೀಯರು ಅಸ್ಪೃಶ್ಯರ ದರ್ಶನ ಅಮಂಗಳವೆಂದು ಅವರ ಸಾಮಾಜಿಕ ಒಡನಾಟವನ್ನು ಪ್ರತಿಬಂಧಿಸಿದ್ದರು. ಇದಕ್ಕಾಗಿ ಅವರು ಊರ ಹೊರಗಡೆ ವಾಸಮಾಡಬೇಕಾಯಿತು. ಇಂಥ ಅನೇಕ ಅನಿಷ್ಟ ಆಚರಣೆಗಳಿಂದ ದಲಿತರ ವಿಮೋಚನೆ ಆಗಬೇಕು, ಸಮಾಜದಿಂದ ತಿರಸ್ಕರಿಸಿದ್ದ ದಲಿತರಿಂದ ಈ ದೇಶದ ಸಂಪತ್ತಿನ ಉತ್ಪಾದನೆ ಅಡಗಿದೆ ಎಂಬ ಅರಿವನ್ನು ಕೃಷ್ಣಪ್ಪನವರು ದಲಿತರಲ್ಲಿ ಮೂಡಿಸಿದ್ದು ಗಮನಾರ್ಹವಾಗಿದೆ.

ದಲಿತರು ಒದ್ದ ಕಾಲುಗಳಿಗೆ ಚಪ್ಪಲಿ ಹೊಲಿದು, ಮೂಕಪ್ರಾಣಿಗಳಂತೆ ಜೀತ ಮಾಡಿದ್ದರು ಕೂಡ ಸವರ್ಣೀಯರು ದಲಿತರನ್ನು ಮನುಷ್ಯರೆಂದು ಭಾವಿಸಿದರೇನು? ಶತಮಾನಗಳು ಉರುಳಿದರೂ ಅವರ ಮನಸ್ಸು ಬದಲಾಗಿಲ್ಲ. ಅದ್ದಬಿದ್ದವರನ್ನೆ ಮತ್ತಷ್ಟು ತುಳಿಯುವ ಈ ಹಿಂದು ಧರ್ಮದಲ್ಲಿ ತಾವು ಏಕೆ ಇರಬೇಕೆಂದು ಇಂದು ದಲಿತರು ಅನ್ಯ ಧರ್ಮಗಳಿಗೆ ಮತಾಂತರ ಹೊಂದುತ್ತಿದ್ದಾರೆ. ದಲಿತರ ಮತಾಂತರಕ್ಕೆ ಸವರ್ಣೀಯರ ದೌರ್ಜನ್ಯಗಳು, ಅನಿಷ್ಟ ಆಚರಣೆಗಳೇ ಕಾರಣವೆಂಬುದನ್ನು ಕೃಷ್ಣಪ್ಪನವರ ಚಿಂತನೆಗಳಿಂದ ವ್ಯಕ್ತವಾಗುತ್ತದೆ.' ಇಂದು ದಲಿತರು ಹೆಚ್ಚು ಹೆಚ್ಚು ಮತಾಂತರಗೊಳ್ಳುತ್ತಿರುವುದಕ್ಕೆ ಕಾರಣ ದಲಿತರು ವಿದ್ಯಾವಂತರಾಗುತ್ತಿರುವುದೇ ಕಾರಣ. ಯಾವ ವಿದ್ಯಾವಂತ ದಲಿತನೇ ಆಗಲಿ, ತನ್ನನ್ನು ಕೀಳಾಗಿ ಕಾಣುವ ಯಾವ ಧರ್ಮವನ್ನು ಗೌರವಿಸಲಾರ. ಇದರಿಂದ ಮತಾಂತರಗಳು ಹೆಚ್ಚಾಗುತ್ತಿವೆ. ಆದರೆ ಹಿಂದು ರಾಷ್ಟ್ರದ ಕನಸು ಕಾಣುತ್ತಿರುವ ಜಾತಿವಾದಿಗಳು ಮತಾಂತರ ನಿಷೇಧ ಕಾಯ್ದೆಯನ್ನು ತರಲು ಪ್ರಯತ್ನ ನಡೆಸುತ್ತಿದ್ದಾರೆ. ಜಾತಿವಾದಿಗಳ ಉದ್ದೇಶ ಹಿಂದು ಧರ್ಮದ ರಕ್ಷಣೆಗಾಗಿ ಅಲ್ಲ, ಅಸ್ಪೃಶ್ಯರನ್ನು ತಮ್ಮ ಅಧೀನದಲ್ಲಿ ಇಡುವುದಕ್ಕೆ ಸಾಧ್ಯ ಎನ್ನುವ ಉದ್ದೇಶದಿಂದಾಗಿದೆ. ಇದರಿಂದ ಮತಾಂತರ ನಿಷೇಧ ಕಾಯ್ದೆ ಜಾರಿಗೆ ಶತ ಪ್ರಯತ್ನ ನಡೆಸಿರುವರು ಎನ್ನುವುದು ಕೃಷ್ಣಪ್ಪನವರ ಚಿಂತನೆಗಳಿಂದ ತಿಳಿಯಬಹುದು.

ಕೃಷ್ಣಪ್ಪನವರು ಚಿಂತನೆ ನಡೆಸಿದಂತೆ 'ಜೀತ, ಅವಮಾನ, ಶೋಷಣೆಗಳಿಂದ ಬಿಡುಗಡೆ ಹೊಂದಲು ದಲಿತರಿಗೆ ಉಳಿದ ಮಾರ್ಗ ಮತಾಂತರವಾಗಿದೆ. ಆದರೆ ಯಾವ ಮತ? ಈ ಬಗ್ಗೆ ರಾಷ್ಟ್ರಮಟ್ಟದಲ್ಲಿ ದಲಿತರು ಚರ್ಚಿಸಿ, ಸಮಗ್ರವಾಗಿ ತೀರ್ಮಾನ ತೆಗೆದುಕೊಳ್ಳಬೇಕು ಎಂದಿದ್ದಾರೆ.

ವರ್ಣ ದ್ವೇಷದ ಅಪರಾಧಕ್ಕಾಗಿ ಬಿಳಿಯರನ್ನು ಟೀಕಿಸುವ ಭಾರತ ಸರ್ಕಾರವು ತನ್ನ ದೇಶದಲ್ಲಿಯೇ ಜಾತೀಯತೆ ಮುಂದುವರಿಯಲು ಅವಕಾಶ ಕೊಟ್ಟಿರುವುದು ಆಶ್ಚರ್ಯಕರ ಸಂಗತಿಯೆನ್ನಬಹುದು. ಭಾರತದಲ್ಲಿ ಜಾತಿ ವ್ಯವಸ್ಥೆಯು ಮುಂದುವರಿಯುವುದಾದರೆ ಅದು ಜನರ ತಪ್ಪಲ್ಲ, ಪ್ರಮುಖವಾಗಿ ಸರ್ಕಾರದ್ದು. ಸಮಾಜವು ಜನರಿಂದ ರಚಿತವಾಗಿದ್ದು ಮತ್ತು ಆ ಸಾಮಾಜಿಕ ವ್ಯವಸ್ಥೆಯನ್ನು ಕಾಲಕ್ಕೆ, ಅವಶ್ಯಕತೆಗೆ ಅನುಗುಣವಾಗಿ ಕಾನೂನು ರಚಿಸುವುದು ಸರ್ಕಾರದ ಕರ್ತವ್ಯವಾಗಿದೆ. ಸರ್ಕಾರವು ದಿಟ್ಟಕ್ರಮ ತೆಗೆದುಕೊಂಡಾಗ ಮಾತ್ರ ಜಾತಿ ವ್ಯವಸ್ಥೆಯನ್ನು ನಾಶಮಾಡಬಹುದು. ಈ ಕೆಲಸವನ್ನು ಯಾವುದೇ ಸಂಸ್ಥೆ ಅಥವಾ ವ್ಯಕ್ತಿಗತವಾದ ಸಂಕಲ್ಪದಿಂದ ಮಾಡಲು ಸಾಧ್ಯವಿಲ್ಲ ಎಂಬುದು ಕೃಷ್ಣಪ್ಪನವರ ವಿಚಾರಧಾರೆಯಾಗಿದೆ. ಹಿಂದು ಸಮಾಜದಲ್ಲಿ ಜಾತಿ ವಿನಾಶವು ಸಾಧ್ಯವೇ? ಸಾಧ್ಯ ಎನ್ನುವುದಾದರೆ ಅದು ಅಷ್ಟೇ ವಿಳಂಬ ಎನ್ನುವ ಅನಿಸಿಕೆ ವ್ಯಕ್ತವಾಗುತ್ತದೆ.

ಪುಟ. ೧೬

ಎಲ್ಲೆಲ್ಲಿ ದಲಿತರು ಸ್ವಾಭಿಮಾನ-ಆತ್ಮಗೌರವ ಪ್ರದರ್ಶಿಸುತ್ತಾರೋ ಅಲ್ಲೆಲ್ಲ ಸವರ್ಣೀಯರು ಅವರ ಮೇಲೆ ಹಲ್ಲೆ, ದೌರ್ಜನ್ಯ, ಸಾಮಾಜಿಕ ಬಹಿಷ್ಕಾರಗಳಂಥ ಅವಮಾನಕರವಾದ ಪದ್ಧತಿಗಳನ್ನು ಹೇರಿ, ಅವರ ಆತ್ಮಾಭಿಮಾನಗಳನ್ನು ಬಗ್ಗು ಬಡಿಯುತ್ತಾರೆ. ದಲಿತರಲ್ಲಿರುವ ಮೌಢ್ಯತೆಯಿಂದಾಗಿ ಸವರ್ಣೀಯರ ಮೇಲೆ ಬಲ ಪ್ರಯೋಗಿಸಲು ಹೋಗುವುದಿಲ್ಲ. ಇದನ್ನೇ ಲಾಭ ಮಾಡಿಕೊಂಡು ಸವರ್ಣೀಯರು ದಲಿತರ ಮೇಲೆ ಹಲ್ಲೆ, ದೌರ್ಜನ್ಯ, ಅತ್ಯಾಚಾರಗಳನ್ನು ನಡೆಸುತ್ತಿದ್ದಾರೆ.

ಸವರ್ಣೀಯರಿಗೆ ಬೇರೆ ಸಂದರ್ಭಗಳಲ್ಲಿ ಕಾಡುವಂಥ ಮಡಿ, ಮೈಲಿಗೆ, ಅಸ್ಪೃಶ್ಯತೆ ದಲಿತ ಹೆಣ್ಣುಮಕ್ಕಳನ್ನು ತಮ್ಮ ಕಾಮ ತೃಪ್ತಿಗಾಗಿ ಬಳಸಿಕೊಳ್ಳುವ ಸಂದರ್ಭದಲ್ಲಿ ಬರುವುದಿಲ್ಲವೆ? ಆಗ ಎತ್ತ ಹೋಗುತ್ತವೆ ಮಡಿ, ಮೈಲಿಗೆಗಳು. ಭೂಮಾಲೀಕರು, ಹಣವಂತರು, ಕೆಳವರ್ಗದ ಹೆಣ್ಣುಮಕ್ಕಳನ್ನು ತಮ್ಮ ಕಾಮದ ಆಸೆಗಾಗಿ ಬಳಸಿಕೊಳ್ಳಲು ದೈವದ ಹೆಸರಿನಲ್ಲಿ ಬೆತ್ತಲೆ ಸೇವೆ, ದೇವದಾಸಿ ಪದ್ಧತಿಗಳನ್ನು ಆಚರಣೆಗೆ ತಂದರು. ದಲಿತರ ಅಜ್ಞಾನ-ಬಡತನಗಳನ್ನು ಶ್ರೀಮಂತರು ತುಂಬಾ ಚಾಣಾಕ್ಷತೆಯಿಂದ ಶೋಷಣೆ ಮಾಡಿ ಬೆತ್ತಲೆ, ಲೈಂಗಿಕ ವ್ಯಭಿಚಾರ ನಡೆಸಿದ್ದಾರೆ. ಯಾವುದೇ ನಂಬಿಕೆ ವಾಸ್ತವಿಕತೆಯನ್ನು ಮರೆತು ಅಂಧ ನಂಬಿಕೆಯಾದಾಗ, ಸತ್ಯವನ್ನು ತಿರಸ್ಕರಿಸಿ ತನ್ನತನವನ್ನೇ ಕಳೆದುಕೊಂಡು ಮನುಷ್ಯತ್ವವನ್ನೇ ನಾಚಿಸುವಂತೆ ಎಂಥ ಪೈಶಾಚಿಕ ಕೃತ್ಯಗಳನ್ನು ಸಹ ಮಾಡಿಸಬಲ್ಲದು ಎಂಬುದಕ್ಕೆ ಬೆತ್ತಲೆ ಸೇವೆ, ದೇವದಾಸಿ ಪದ್ಧತಿಗಳೇ ಉತ್ತಮ ನಿದರ್ಶನಗಳಾಗಬಲ್ಲವು. ಒಟ್ಟಿನಲ್ಲಿ ಧರ್ಮದ ಹೆಸರಿನಲ್ಲಿ ಒಂದು ಜನಾಂಗವನ್ನು – ಬರ್ಬರ ಆಚರಣೆಗಳನ್ನು ನುಣುಪಾದ ಶಾಲಿನಲ್ಲಿ ಮುಚ್ಚಿಡ ಬಯಸುತ್ತಿದ್ದಾರೆ ಸವರ್ಣೀಯರು. 'ಒಂದು ವೇಳೆ ಬೆತ್ತಲೆ ಸೇವೆ, ದೇವದಾಸಿ ಪದ್ಧತಿಯನ್ನು ಆಚರಿಸುವಂಥ ಹೆಣ್ಣುಮಕ್ಕಳು ಬ್ರಾಹ್ಮಣರೋ, ಲಿಂಗಾಯತರೋ, ಗೌಡರೋ ಆಗಿದ್ದರೆ ಇಂಥ ಪದ್ಧತಿ ಎಂದೋ ನಿಂತು ಹೋಗುತ್ತಿತ್ತು. ಆದರೆ ಅವರೆಲ್ಲ ಹೊಲೆ-ಮಾದಿಗರ ಹೆಣ್ಣುಮಕ್ಕಳಲ್ಲ' ಎನ್ನುವ ವಿಚಾರವು ಕೃಷ್ಣಪ್ಪನವರದಾಗಿದೆ.

ಕೃಷ್ಣಪ್ಪನವರು ಬೆತ್ತಲೆ ಸೇವೆಯನ್ನು ಅಮಾನುಷ, ಮೃಗೀಯ ಅನಾಗರಿಕ ಲಕ್ಷಣ ಎಂದಿದ್ದಾರೆ.[೪] ಇಂಥ ಅನಿಷ್ಟ ಆಚರಣೆಯನ್ನು ಹೋಗಲಾಡಿಸಲು ತೀವ್ರ ಕಾಳಜಿಯಿಂದ ಚಿಂತಿಸಿರುವರು. ಆದರೆ ಜ್ಞಾನ ಪೀಠ ಪ್ರಶಸ್ತಿ ವಿಜೇತರಾದ ಡಾ. ಯು. ಆರ್. ಅನಂತಮೂರ್ತಿಯಂಥವರು 'ಬೆತ್ತಲೆ ಪೂಜೆ ಯಾಕೆ ಕೂಡದು' ಎಂದು ಪ್ರಶ್ನಿಸಿದ್ದಾರೆ. ಅಂದರೆ ಅವರು ಬೆತ್ತಲೆ ಸೇವೆಯನ್ನು ವಿರೋಧಿಸಿಲ್ಲ ಎಂಬುದು ಅವರ ಚಿಂತನೆಯಿಂದ ತಿಳಿದುಬರುತ್ತದೆ. "ನಾವು ನೀವು ದುರದೃಷ್ಟವಶಾತ್ ಕಳೆದುಕೊಂಡಿರುವ 'ದೈವಿಕ ಶ್ರದ್ಧೆಯ ಉತ್ಕಟತೆಯನ್ನು' ಆ ಬೆತ್ತಲೆ ಸೇವೆ ಸಲ್ಲಿಸುವವರಲ್ಲಿ ನೀವು ಯಾಕೆ ಕಾಣುವುದಿಲ್ಲ? ನಮಗೆ ಹೆಣ್ಣಿನ ಬೆತ್ತಲೆ ದೇಹ ಒಂದೋ ಕಾಮವನ್ನು ಕೆರಳಿಸುತ್ತದೆ ಅಥವಾ ಒಬ್ಬ ಶಿಲ್ಪಿಯೋ, ಚಿತ್ರಕಾರನೋ ಅದನ್ನು ಬಿಡಿಸಿದರೆ ಕಲಾತ್ಮಕ ಅಭಿವ್ಯಕ್ತಿ ಎನ್ನಿಸುತ್ತದೆ. ಆದರೆ ಬೆತ್ತಲೆಯಾಗಿ ಪೂಜಿಸುವವರಿಗೆ ಅದು ಕಲಾತ್ಮಕ ಅಭಿವ್ಯಕ್ತಿಯೂ ಅಲ್ಲ, ಕಾಮಪ್ರಚೋದಕರವೂ ಅಲ್ಲ. ಇದಕ್ಕೆ ಏಕೆ ಭಾವನಾತ್ಮಕವಾಗಿ ನಾವು ಪ್ರಚೋದಿಸುವುದಿಲ್ಲ? ಪ್ರಪಂಚದಲ್ಲಿ ಎಲ್ಲೂ ಇಲ್ಲದ್ದನ್ನು ಇಲ್ಲಿ ಕಾಣುತ್ತೇವೆ. ನಾವು ಇಂದು ಬೆತ್ತಲೆ ಚಿತ್ರವಿಲ್ಲದ ಜಾಹಿರಾತಿನಿಂದ ಏನನ್ನಾದರೂ ಮಾರುವುದುಂಟೆ? ಒಂದು ಸೋಪ್, ಟೂಥ್‌ಬ್ರಷ್, ಶಾಂಪು, ಪ್ಲಾಸ್ಟಿಕ್ ಬಕೆಟನ್ನ ಮಾರಲು ಕೂಡ ನಾವು ಬೆತ್ತಲೆ ದೇಹವನ್ನು ಬಳಸುವುದಿಲ್ಲವೆ? ಬೆತ್ತಲೆ ಸೇವೆಯನ್ನು ಯಾಕೆ ನಾವು ವಿರೋಧಿಸಬೇಕು ಎಂಬುದು ಅನಂತಮೂರ್ತಿಯವರ ವಿಚಾರವಾಗಿದೆ.[೫] ಶತಮಾನಗಳಿಂದ ನಡೆದುಕೊಂಡುಬಂದ ಬೆತ್ತಲೆ ಸೇವೆಯನ್ನು ಅನಂತ ಮೂರ್ತಿಯವರು ಇಂದಿನ ಆಧುನಿಕ ಜಾಹಿರಾತುಗಳಿಗೆ ಹೋಲಿಸಿ, ಬೆತ್ತಲೆ ಎನ್ನುವುದು ಸಾಮಾನ್ಯವಾದ ವಿಚಾರವೆಂಬಂತೆ ಹೇಳಿರುವುದು ಇಂದು ಚರ್ಚಿಸಬೇಕಾದ ವಿಚಾರ ಎನ್ನುವ ಅನಿಸಿಕೆ ವ್ಯಕ್ತವಾಗುತ್ತದೆ.

ಇನ್ನೋರ್ವ ದಲಿತ ಚಿಂತಕರಾದ ದೇವನೂರು ಮಹಾದೇವ ಅವರು ಬೆತ್ತಲೆ ಪೂಜೆ ಕುರಿತ ಚಿಂತನೆಯನ್ನು ಇಲ್ಲಿ ಸೂಚಿಸುವುದು ಸೂಕ್ತ. ಅವರು ಬೆತ್ತಲೆ ಸೇವೆಯ ಬಗ್ಗೆ ಸರಳವಾಗಿ ಹೇಳುತ್ತಾರೆ. 'ನೋಡುವವರು

ಬೆತ್ತಲೆಯಾಗಿದ್ದಲ್ಲಿ ಸೇವೆ ಮಾಡುವವರ ಬೆತ್ತಲೆಗೆ ತನ್ನ ವಿರೋಧವಿಲ್ಲ' ಎಂದಿದ್ದಾರೆ. ಆದರೆ ಇವರು ಬೆತ್ತಲೆ ಸೇವೆಯ ಕುರಿತು ಸರಳವಾಗಿ ಹೇಳಿದ್ದರೂ ಕೂಡ ಆ ಹೇಳಿಕೆ ಬೆತ್ತಲೆ ಸೇವೆಯ ಕುರಿತು ತೀವ್ರ ಚಿಂತನೆಗೆ ಮತ್ತು ಜಿಜ್ಞಾಸೆಗೆ ಪ್ರೇರೇಪಿಸುತ್ತದೆ. ಹಾಗಾಗಿ ಇವರು ಈ ಕುರಿತು ಪ್ರಜ್ಞಾಪೂರ್ವಕವಾಗಿಯೇ ಈ ಹೇಳಿಕೆ ನೀಡಿದ್ದಾರೆನ್ನಬಹುದು. ಇವರು ಬೆತ್ತಲೆ ಸೇವೆಯ ಹಿಂದಿನ ಕ್ರೌರ್ಯವನ್ನು ಸಾಂಕೇತಿಕವಾಗಿ ವ್ಯಕ್ತಪಡಿಸಿರುತ್ತಾರೆ.

ದೇಶದ ಸಂಪತ್ತಿನ ಉತ್ಪಾದನೆಯಲ್ಲಿ ದಲಿತರ ಶ್ರಮದ ಪಾತ್ರ ಗಮನಾರ್ಹವಾಗಿದೆ. ಆ ಶ್ರಮದ ಬೆಲೆ ಅವರಿಗೆ ದಕ್ಕದಂತೆ ದೋಚಿದ್ದಕ್ಕಾಗಿ ಇಂದು ಅವರಿಗೆ ಮೀಸಲಾತಿ ಕೊಡಬೇಕು. ಯಾರಾದರೂ ಮೀಸಲಾತಿ ಮೇಲ್ಜಾತಿಯವರು ದಲಿತರಿಗೆ ತೋರಿಸುವ ಅನುಕಂಪ, ಕೊಡುವ ಭಿಕ್ಷೆ ಎಂದು ಭಾವಿಸಿದರೆ ಅದು ತಪ್ಪು. 'ಮೀಸಲಾತಿ ಶತಮಾನಗಳ ಶೋಷಣೆಗಾಗಿ ದಲಿತರು ಗಳಿಸಿರುವ ಹಕ್ಕೆ ಹೊರತು ಅದು ಭಿಕ್ಷೆಯಲ್ಲ' ಎಂಬುದು ಕೃಷ್ಣಪ್ಪನವರ ವಿಚಾರಧಾರೆಯಾಗಿದೆ.

ಮೀಸಲಾತಿಯಿಂದ ಪ್ರತಿಭೆ, ಅರ್ಹತೆ, ಯೋಗ್ಯತೆಗಳು ಹಾಳಾಗುತ್ತವೆ. ನಿರುದ್ಯೋಗ ಹೆಚ್ಚುತ್ತದೆ ಎಂದು ಸವರ್ಣೀಯರು ವಾದಿಸುತ್ತಾರೆ. ಅಲ್ಲದೆ ಮೀಸಲಾತಿಯಿಂದ 'ಮೂರನೇ ದರ್ಜೆಯ ಜನ ಮೂರನೇ ದರ್ಜೆ ರಾಷ್ಟ್ರವನ್ನು ನಿರ್ಮಾಣ ಮಾಡುತ್ತಾರೆ' ಎನ್ನುವ ವಾದವನ್ನು ಕೃಷ್ಣಪ್ಪನವರು ಅಲ್ಲಗಳೆಯುತ್ತಾರೆ. ಇದು ವಸ್ತುಸ್ಥಿತಿಯ ಅರಿವಿಲ್ಲದ, ಅವೈಜ್ಞಾನಿಕವಾದ, ಸ್ವಾರ್ಥದಿಂದ ಕೂಡಿದ ವಿಚಾರವಾಗಿದೆ. ಅರ್ಹತೆ, ಪ್ರತಿಭೆ, ಯೋಗ್ಯತೆಗಳು ಯಾವುದೇ ಒಂದು ಜಾತಿಯ, ಜನಾಂಗದ ಗುತ್ತಿಗೆಯಲ್ಲ. ಪ್ರತಿಭೆ, ಅರ್ಹತೆಗಳಿಗೂ ಹುಟ್ಟಿಗೂ ಯಾವ ಸಂಬಂಧವೂ ಇಲ್ಲ ಎನ್ನುವುದು ಕೃಷ್ಣಪ್ಪನವರ ಚಿಂತನೆಯಾಗಿದೆ.

ಮೀಸಲಾತಿಯಿಂದ ಮೇಲ್ಜಾತಿಯವರಿಗೆ ಉದ್ಯೋಗ ಮತ್ತು ವಿದ್ಯಾಭ್ಯಾಸ ಅವಕಾಶಗಳು ಕಡಿಮೆಯಾಗುತ್ತಿವೆ ಎಂಬ ಆರೋಪಗಳಿವೆ. ಇಂಥ ಆರೋಪಗಳು ಸತ್ಯಕ್ಕೆ ದೂರವಾಗಿವೆ ಎಂಬುದು ಅಂಕಿ-ಅಂಶಗಳನ್ನು ಗಮನಿಸಿದರೆ ತಿಳಿಯುತ್ತದೆ. ಇಲ್ಲಿ ಅಂಕಿ-ಅಂಶಗಳ ಪಟ್ಟಿಯನ್ನು ಉದ್ದೇಶಪೂರ್ವಕವಾಗಿ ನೀಡಲಾಗಿಲ್ಲ. (ಹೆಚ್ಚಿನ ಮಾಹಿತಿಗಾಗಿ ಪ್ರೊ. ಬಿ. ಕೃಷ್ಣಪ್ಪನವರ ಚಿಂತನೆಗಳು ಮತ್ತು ಬರಹಗಳು, ಪು. ೨೬, ೨೪) ಅಂಕಿ ಅಂಶಗಳನ್ನು ಗಮನಿಸಿದಾಗ ಕನಿಷ್ಠ ನಾಲ್ಕನೆಯ ಒಂದು ಭಾಗದಷ್ಟೂ ಮೀಸಲಾತಿ ಪಡೆಯದ ದಲಿತರು ಉಳಿದವರ ವಿದ್ಯೆ ಹಾಗೂ ಉದ್ಯೋಗ ಅವಕಾಶಗಳನ್ನು ಕಿತ್ತುಕೊಳ್ಳುತ್ತಿದ್ದಾರೆ ಎಂಬ ಮಾತಿನಲ್ಲಿ ಎಷ್ಟು ಹುರುಳಿದೆ? ಕೃಷ್ಣಪ್ಪನವರು ಕೆಳಜಾತಿಗಳಿಗೆ ಮೇಲ್ಜಾತಿಗಳೊಂದಿಗೆ ಸಾಮಾಜಿಕ ಒಡನಾಟ ಸಾಧ್ಯವಾಗಬೇಕಾದರೆ ಮೀಸಲಾತಿ ಅಗತ್ಯವಾಗಿ ಬೇಕೆಂದಿದ್ದಾರೆ.

೩.೨ ಕೃಷ್ಣಪ್ಪ ಅವರ ಶೈಕ್ಷಣಿಕ ಚಿಂತನೆ

ಬದುಕನ್ನು ಪರಿವರ್ತಿಸುವ ಸಾಧನ ಶಿಕ್ಷಣ. ಆದರೆ ಪ್ರಾಚೀನ ಕಾಲದಿಂದಲೂ ಕೆಲವು ಮೇಲ್ಜಾತಿಯವರನ್ನು ಬಿಟ್ಟು ಎಲ್ಲರಿಗೂ ವಿದ್ಯೆ ನಿಷಿದ್ಧ. ಈ ಕಾಲದಲ್ಲಿ ವ್ಯಕ್ತಿಯ ವಿಚಾರ ಸಾಮರ್ಥ್ಯವನ್ನು ಹೆಚ್ಚಿಸುವ, ಸಂಸ್ಕಾರವಂತರನ್ನಾಗಿ ಮಾಡುವ ಜೀವನದ ದಾರಿ, ಗುರಿಗಳನ್ನು ತೋರಿಸಿಕೊಡುವ ವಿದ್ಯೆಗೆ ಕಡಿವಾಣವನ್ನು ಮೇಲ್ಜಾತಿಯವರು ಹಾಕಿದ್ದರು. ಇದರಿಂದ ದಲಿತರು, ಕೆಳವರ್ಗದವರು ಅಪಾರ ಅಸಮಾನತೆ ಹಾಗೂ ತಿಳುವಳಿಕೆ ಇಲ್ಲದೆ ಮೌಢ್ಯದಲ್ಲಿ ಮುಳುಗಿದ್ದರಿಂದಲೇ ಸವರ್ಣೀಯರ ಶೋಷಣೆಗೆ ಗುರಿಯಾದರು. ಇದರಿಂದ ದಲಿತರು ಸಮಾಜದಲ್ಲಿ ಯಾವುದೇ ಸ್ಥಾನಮಾನಗಳಿಲ್ಲದೆ ಬದುಕುವ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಹಾಗಾಗಿ ದಲಿತರಿಗೆ ಶಿಕ್ಷಣ ದೊರೆತರೆ ಅವರ ಸ್ಥಿತಿಯು ಉತ್ತಮಗೊಂಡು ಶೋಷಣೆಯ ವಿರುದ್ಧ ಸೆಟೆದು ನಿಲ್ಲುವಂಥ ಸಾಮರ್ಥ್ಯವು ದೊರೆಯುತ್ತದೆ. ದಲಿತರ ಎಲ್ಲಾ ಸ್ಥಿತಿಗಳನ್ನು ಕೃಷ್ಣಪ್ಪನವರು ಚೆನ್ನಾಗಿ ಅರಿತಿದ್ದರು.

ದಲಿತರು ಹಿಂದುಳಿಯುವುದಕ್ಕೆ ಮುಖ್ಯ ಕಾರಣ ಅನಕ್ಷರತೆ ಮತ್ತು ಶಿಕ್ಷಣದ ಕೊರತೆ. ಇದನ್ನು ನಿರ್ಮೂಲನೆಗೊಳಿಸುವಂಥ ಚಿಂತನೆಯನ್ನು ಮಾಡಿದ್ದಾರೆ. ದಲಿತ ವಿದ್ಯಾರ್ಥಿಗಳಿಗಾಗಿ ಅಗತ್ಯ ಸೌಲಭ್ಯಗಳನ್ನು,

ಮೀಸಲಾತಿಯನ್ನು ನೀಡಿದರೆ ಅವರು ಶಿಕ್ಷಣ ಪಡೆಯಲು ಮುಂದಾಗುತ್ತಾರೆ ಎಂಬುದು ಕೃಷ್ಣಪ್ಪನವರ ಚಿಂತನೆಯಿಂದ ತಿಳಿದುಬರುತ್ತದೆ.

ಕೃಷ್ಣಪ್ಪನವರು ದಲಿತರ ಶಿಕ್ಷಣದ ಜೊತೆಗೆ ಇಂದಿನ ಶಿಕ್ಷಣದ ಕುರಿತು ಚಿಂತನೆ ನಡೆಸಿದ್ದಾರೆ. ಈಗಿನ ಶಿಕ್ಷಣವು ತನ್ನ ಮೂಲತತ್ವವನ್ನೇ ಬಿಟ್ಟು ಹಾದಿ ತಪ್ಪುತ್ತಿರುವ ಕುರಿತು ಚಿಂತನೆ ಮಾಡಿದ್ದಾರೆ. ಶಿಕ್ಷಣ ಕೇಂದ್ರಗಳಿಗೆ ರಾಜಕಾರಣ, ಜಾತಿಯ ಭೂತಗಳ ಕೈಗಳು ಪ್ರವೇಶ ಪಡೆದಿವೆ. ಹಾಗೂ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ನಡುವಿನ ಬಾಂಧವ್ಯವು ಹಾಳಾಗಿ ಪರಸ್ಪರ ವೈರಿಗಳಂತೆ ವರ್ತಿಸುತ್ತಿದ್ದಾರೆ. ಇಂದು ಅಧ್ಯಾಪಕರು, ವಿದ್ಯಾರ್ಥಿ ಇವರಿಬ್ಬರು ತಮ್ಮ ಕರ್ತವ್ಯಗಳಿಗೆ ನಿಷ್ಠರಾಗಿಲ್ಲ. ಇದು ಹೀಗೆ ಮುಂದುವರೆದರೆ ಶಿಕ್ಷಣ ಕೇಂದ್ರಗಳ ಪ್ರಗತಿ, ದೇಶದ ಪ್ರಗತಿ ಸಾಧ್ಯವಿಲ್ಲ ಎಂಬುದು ಕೃಷ್ಣಪ್ಪನವರ ವಿಚಾರಧಾರೆ.

೩.೩ ಕೃಷ್ಣಪ್ಪ ಅವರ ಸಾಹಿತ್ಯ ಚಿಂತನೆ

ಕೃಷ್ಣಪ್ಪ ಅವರು ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳನ್ನು ಓದಿಕೊಂಡು ಅದರಲ್ಲಿನ ನ್ಯೂನತೆಗಳನ್ನು ಎತ್ತಿ ತೋರಿಸುವಂಥ ವಿದ್ವಾಂಸರಾಗಿದ್ದರು. ಸಾಹಿತ್ಯವನ್ನು ಕುರಿತು ಅಪಾರ ಆಸಕ್ತಿಯಿದ್ದ ಕೃಷ್ಣಪ್ಪ ಅವರು ಹಲವು ಹಂತಗಳಲ್ಲಿ ಚಿಂತಿಸಿದ್ದಾರೆ. ಇವರ ಸಾಹಿತ್ಯ ಚಿಂತನೆಯು ದಲಿತ ಮತ್ತು ಕೆಳವರ್ಗದವರ ಹಿತದೃಷ್ಟಿಯನ್ನು ಒಳಗೊಂಡಿತ್ತು. ಸಾಹಿತ್ಯ ರಚನೆ ನೈಜವಾಗಿ, ಸಾಮಾನ್ಯ ಜನರ ಜೀವನಕ್ಕೆ ಸ್ಪಂದಿಸುವಂತೆ ಇರಬೇಕೆಂದು ಬಯಸುತ್ತಿದ್ದರು. ಕೃಷ್ಣಪ್ಪನವರು ಕವಿ-ಕಾವ್ಯ ದೃಷ್ಟಿ, ಕಾವ್ಯ ಭಾಷೆಯ ಚಿಂತನೆಯನ್ನು ಕೂಡ ಮಾಡಿದ್ದಾರೆ. ಕವಿಯು ಜನ ಸಾಮಾನ್ಯರ ವಸ್ತುವಿಷಯವನ್ನು ಇಟ್ಟುಕೊಂಡು, ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ಸಾಹಿತ್ಯವನ್ನು ರಚನೆ ಮಾಡಬೇಕೆಂದಿದ್ದಾರೆ. ಸಾಹಿತ್ಯ ಎನ್ನುವುದು ಸರಳವಾಗಿದ್ದು ಆ ಸಾಹಿತ್ಯದ ಸಾರವು ಶೋಷಿತರಿಗೆ ತಲುಪಿ ಅವರು ಕ್ರಾಂತಿಗೆ ಸಜ್ಜುಗೊಳ್ಳುವಂಥ ಉದ್ದೇಶವಿರುವ ಸಾಹಿತ್ಯದ ಸೃಷ್ಟಿಯನ್ನು ಕೃಷ್ಣಪ್ಪನವರು ಬಯಸಿರುವುದು ಅವರ ಸಾಹಿತ್ಯ ಚಿಂತನೆಯಿಂದ ತಿಳಿದುಬರುತ್ತದೆ.

ಕೃಷ್ಣಪ್ಪನವರು ದಲಿತರಲ್ಲಿ ಜಾಗೃತಿ ಮೂಡಿಸಲು ದಲಿತ ಸಾಹಿತ್ಯ ವೇದಿಕೆ, ದಲಿತ ಸಾಹಿತ್ಯ ಸಮಾವೇಶಗಳನ್ನು ಏರ್ಪಡಿಸಿದರು. ಇದರಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ದಲಿತ ಸಾಹಿತ್ಯ'ವೆಂಬ ಹೊಸ ಪ್ರಕಾರ ಹುಟ್ಟು ಪಡೆಯಿತು. ಇದರಿಂದ ಹಲವಾರು ಲೇಖಕರು, ಕವಿಗಳು ಬೆಳಕಿಗೆ ಬಂದರು. ಉದಾಹರಣೆಗೆ ದೇವನೂರು ಮಹಾದೇವ, ಸಿದ್ದಲಿಂಗಯ್ಯ, ವಿಜಯಾಪಾಟೀಲ್, ಗೋವಿಂದಯ್ಯ, ಕೆ. ಎನ್. ಶಿವತೀರ್ಥನ್, ಚೆನ್ನಣ್ಣವಾಲೀಕಾರ್, ಇಂಧೂದರ ಮೊದಲಾದವರು. ದಲಿತ ಸಾಹಿತ್ಯ ಎಂದರೆ ಕಮಿಟ್‌ಮೆಂಟ್ ಅಂದರೆ ಬದ್ಧತೆ ಎಂದರ್ಥ. ಬದ್ಧತೆ ಇಲ್ಲದೆ ಇರುವ ಸಾಹಿತ್ಯಕ್ಕೆ ದಲಿತ ಸಾಹಿತ್ಯ ಎಂದು ಕರೆಯಲಾಗುವುದಿಲ್ಲ. ಎಪ್ಪತ್ತರ ದಶಕದಲ್ಲಿ ದಲಿತ ಸಾಹಿತ್ಯವು ಹುಟ್ಟುಪಡೆಯಿತು. ದಲಿತ ಸಾಹಿತ್ಯ ಹುಟ್ಟಿಗೆ ಕೃಷ್ಣಪ್ಪ ಅವರು ಹುಟ್ಟು ಹಾಕಿದ ದ.ಸಂ.ಸ. ಯು ಪ್ರಮುಖ ಕಾರಣವಾಗಿದೆ. ದಲಿತೇತರರು ಬರೆದ ಸಾಹಿತ್ಯವನ್ನು 'ದಲಿತ ಸಾಹಿತ್ಯ' ಎನ್ನೋಣವೇ ಅಥವಾ ದಲಿತನೊಬ್ಬ ಬರೆದಿರುವ ಸಾಹಿತ್ಯವನ್ನು ದಲಿತರ ಸಾಹಿತ್ಯ ಎಂದು ಕರೆಯುವುದೋ ಎನ್ನುವ ಕುರಿತು ಕೃಷ್ಣಪ್ಪ ಅವರು ಚಿಂತಿಸಿದ್ದಾರೆ. ದಲಿತೇತರರು ಬರೆದಿರುವ ಸಾಹಿತ್ಯ ನೈಜವಾಗಿರುವುದಿಲ್ಲ. ವಸ್ತುಸ್ಥಿತಿಯ ಅರಿವು ಅವರಿಗೆ ಇರದೆ ಹೋಗಬಹುದು. ಏಕೆಂದರೆ ಇವರು ಶೋಷಣೆಗಳನ್ನು ಅನುಭವಿಸದೇ, ಬರೀ ಮೇಲ್ನೋಟಕ್ಕೆ ಕಾಣುವ ಶೋಷಣೆಗಳ ಕುರಿತ ಸಾಹಿತ್ಯವಾಗಿರುತ್ತದೆ. ಆದ್ದರಿಂದ ಇವರ ಸಾಹಿತ್ಯವನ್ನು ದಲಿತ ಸಾಹಿತ್ಯ ಎಂದು ಕರೆಯಲಾಗದು. ಮತ್ತು ದಲಿತೇತರರು ದಲಿತ ಸಾಹಿತ್ಯದ ಕುರಿತು ಬರೆಯುತ್ತಾರೆ. ಆದರೆ ಅವರನ್ನು ದಲಿತ ಸಾಹಿತಿಗಳೆಂದು ಕರೆದುಕೊಳ್ಳಲು ಒಪ್ಪುವುದಿಲ್ಲ. ತಮ್ಮನ್ನು ದಲಿತರೆಂದು ಕರೆಯಿಸಿಕೊಳ್ಳಲು ತಯಾರಿಲ್ಲದ ಮೇಲೆ ಅವರ ಸಾಹಿತ್ಯವನ್ನು ದಲಿತ ಸಾಹಿತ್ಯವೆಂದು ಹೇಗೆ ಕರೆಯುವುದು ಎನ್ನುವುದು ಅವರ ದಲಿತ ಸಾಹಿತ್ಯ ಚಿಂತನೆಯಿಂದ ವ್ಯಕ್ತವಾಗುತ್ತದೆ.

ಹಾಗಾದರೆ ಹುಟ್ಟಿನಿಂದ ದಲಿತನಾದವನು ಬರೆದ ಸಾಹಿತ್ಯವನ್ನು ದಲಿತ ಸಾಹಿತ್ಯವೆಂದು ಕರೆಯಬಹುದೆ. ಇತ್ತೀಚಿನ ದಿನಗಳಲ್ಲಿ ಜಾತಿಯನ್ನು ಹೇಳಿಕೊಂಡರೆ ಹೇಗೆ, ಏನೋ, ಎಂಬ ಕೀಳರಿಮೆ ಭಾವನೆ ಹೊಂದಿರುವಾಗ ತಾನೊಬ್ಬ ದಲಿತ ಕವಿ ಎಂದು ಹೇಳಿಕೊಳ್ಳುವುದು ಕೂಡಾ ಕೀಳರಿಮೆ ಇರುವಾಗ ಇವನು ದಲಿತ ಕವಿ ಅಥವಾ ಲೇಖಕ ಎಂದು ತಿಳಿಯುವುದು ಕಷ್ಟ. ದಲಿತರೇ ಬರೆದ ದಲಿತ ಸಾಹಿತ್ಯದಲ್ಲಿ ಕಮಿಟ್‌ಮೆಂಟ್ ಅಂದರೆ ಬದ್ಧತೆಗಳಿಲ್ಲದೆ ಹೋದರೆ ಅದನ್ನು ದಲಿತ ಸಾಹಿತ್ಯವೆಂದು ಕರೆಯಲಾಗುವುದಿಲ್ಲ. ಏಕೆಂದರೆ ಬದ್ಧತೆಗಳಿಲ್ಲದ ದಲಿತ ಸಾಹಿತ್ಯಕ್ಕೆ ಯಾವುದೇ ಮೌಲ್ಯ ಬಾರದು ಎಂದಿದ್ದಾರೆ.

ಕಳೆದ ಐವತ್ತು ವರುಷಗಳ ಕಾಲ ನಾವು ಬರಿ ಹೊಸಗೇಡಿ ಸಾಹಿತ್ಯವನ್ನು ನಿರ್ಮಾಣ ಮಾಡಿಕೊಂಡು ಬಂದಿದ್ದೇವೆ ಎಂಬುದು ಕೃಷ್ಣಪ್ಪನವರ ಅಭಿಪ್ರಾಯವಾಗಿದೆ. ಇದು ಅತ್ಯಂತ ದುರಂತದ ವಿಚಾರ ಎಂದಿದ್ದಾರೆ. ಕಾವ್ಯ ವಾಸ್ತವಿಕ ಆಗಿರುವುದಕ್ಕಿಂತ ಹೆಚ್ಚು ಕಾಲ್ಪನಿಕ ಆಗಿದೆ. ಕಾಲ್ಪನಿಕವಾಗಿ ಬರೆಯುವ ಲೇಖಕನಿಗೆ ಯಾವ ನಿಚ್ಚಳ ಧೋರಣೆಗಳೂ ಇರುವುದಿಲ್ಲ. ಅಥವಾ ಬದ್ಧತೆ ಇಲ್ಲದ ಕಾವ್ಯ ರಚನೆ ಮಾಡುತ್ತಾನೆ. ಇದರಿಂದ ಕಾವ್ಯ ಒಂದು ರೀತಿ ಜನರಿಂದ ದೂರವಾಗಿ ಉಳಿಯುತ್ತದೆ ಎಂಬುದು ಕೃಷ್ಣಪ್ಪನವರ ಚಿಂತನೆಯಾಗಿದೆ. ಕೃಷ್ಣಪ್ಪನವರು ದಲಿತ ಸಾಹಿತ್ಯದ ಧೋರಣೆ, ಗುರಿಗಳ ಬಗ್ಗೆ ಸೈದ್ಧಾಂತಿಕ ಚೌಕಟ್ಟನ್ನು ಗೊತ್ತುಪಡಿಸಿದರು ಎಂದರೆ ತಪ್ಪಾಗಲಾರದು.[೬] ದಲಿತ ಸಾಹಿತ್ಯ ಹೊಟ್ಟೆ ತುಂಬಿದವರ ಸಾಹಿತ್ಯವಲ್ಲ. ಸಾಮಾನ್ಯರನ್ನು ಗುರಿಯಾಗಿಟ್ಟುಕೊಂಡು ಬರೆದಂಥ ಸಾಹಿತ್ಯ. ದಲಿತ ಸಾಹಿತ್ಯ ಬರೆಯುವುದು ಕೂಲಿಕಾರನಿಗಾಗಿ, ಶೋಷಣೆಗೆ ಒಳಗಾದವನಿಗೆ, ಶ್ರಮದ ಜೀವಿಗಾಗಿ. ಇವರನ್ನೆಲ್ಲಾ ಅನ್ಯಾಯದ ವಿರುದ್ಧ ಬಡಿದೇಳಿಸುವುದಕ್ಕಾಗಿ ಸಾಹಿತ್ಯ ರಚನೆಯಾಗಬೇಕಾಗಿದೆ ಎಂಬುದು ಅವರ ಅಭಿಪ್ರಾಯವಾಗಿದೆ.

ದಲಿತ ಸಾಹಿತ್ಯದಲ್ಲಿ ರಸಾನಂದ, ಕಲಾತ್ಮಕತೆ ಇತ್ಯಾದಿಗಳನ್ನು ಹುಡುಕುವುದು ಅನುಚಿತ. ಇವುಗಳನ್ನು ಹೊಟ್ಟೆ ತುಂಬಿದವರಿಗಾಗಿ ರಚಿಸಿದ ಸಾಹಿತ್ಯದಲ್ಲಿ ಕಾಣಬಹುದು. ಆದರೆ ಚಳವಳಿಯಿಂದ ಕ್ರಾಂತಿಯಿಂದ ಸಮಾಜದ ಸಮಗ್ರ ಬದಲಾವಣೆಯ ಗುರಿಯುಳ್ಳ ಸಾಹಿತ್ಯ ರಸಾನಂದ, ಕಲಾತ್ಮಕತೆಯಿಂದ ದೂರವಿರುತ್ತದೆ. ದಲಿತ ಸಾಹಿತ್ಯ ಕೆಲವು ತತ್ವಗಳಿಗೆ ಬದ್ಧವಾದ ಸಾಹಿತ್ಯವಾಗಿದೆ. ಈ ದೇಶದ ಸಮಗ್ರ ವ್ಯವಸ್ಥೆಯ ಶೋಷಣೆಯ ವಿರುದ್ಧ ಸಿಡಿದು ನಿಲ್ಲಲು ಪ್ರೇರಕವಾಗಿದೆ. ದಲಿತತ್ವವು ಸಾಧ್ಯವಾಗುವುದು ಜಾತಿಯಿಂದ, ವರ್ಗದಿಂದ, ಧರ್ಮದಿಂದ ಶೋಷಣೆಗೆ ಒಳಗಾದ ಹಿಂದುಳಿದ ಜಾತಿಗಳಿಂದ ಮಾತ್ರ. ಈ ಮಾತನ್ನು ಹೇಳುವಾಗ ಇನ್ನೊಂದು ಎಚ್ಚರಿಕೆ ವಹಿಸಬೇಕೆಂದಿದ್ದಾರೆ. ಏನೆಂದರೆ ಜಾತಿಯಿಂದ ಹಿಂದುಳಿದ ಹೊಲೆ-ಮಾದಿಗನೊಬ್ಬ ಹಿಂದೂ ಜಾತಿ ವ್ಯವಸ್ಥೆಯನ್ನು, ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರತಿಭಟಿಸದೆ ಒಪ್ಪಿ ಬರೆದ ಸಾಹಿತ್ಯವನ್ನು ದಲಿತ ಸಾಹಿತ್ಯ ಎನ್ನಲಾಗುವುದಿಲ್ಲ. ಅಲ್ಲದೆ ರಾಚಯ್ಯ, ಬಸವಲಿಂಗಪ್ಪನವರಂಥ ಆರ್ಥಿಕವಾಗಿ ಮುಂದುವರೆದ ದಲಿತನಿಗೆ ಆರ್ಥಿಕ ಅಸಮಾನತೆಯ ನೋವುಗಳು ಅರ್ಥವಾಗದೆ ಹೋಗಬಹುದು. ಅಂಥವರೂ ಬರೆದ ಸಾಹಿತ್ಯ ದಲಿತ ಸಾಹಿತ್ಯ ಹೇಗಾಗುತ್ತದೆ ಎಂಬುದು ಬಿ.ಕೆ. ಅವರ ವಿಶ್ಲೇಷಣೆಯಾಗಿದೆ.

ಕೃಷ್ಣಪ್ಪ ಅವರ ದಲಿತ ಸಾಹಿತ್ಯ ಚಿಂತನೆಯಿಂದ ಒಟ್ಟಾರೆಯಾಗಿ ತಿಳಿದು ಬರುವುದು ದಲಿತನಾಗಿ ಹುಟ್ಟಿದ ಮಾತ್ರಕ್ಕೆ ಅವನು ಬರೆದ ಸಾಹಿತ್ಯವೆಲ್ಲ ದಲಿತ ಸಾಹಿತ್ಯ ಎಂದಾಗಲಿ, ಅಥವಾ ದಲಿತೇತರನೊಬ್ಬ ದಲಿತರ ಬಗ್ಗೆ ಅನುಕಂಪದಿಂದ ಬರೆದ ಮಾತ್ರಕ್ಕೆ ದಲಿತ ಸಾಹಿತ್ಯ ಎಂದಾಗಲಿ ಭಾವಿಸುವುದು ತಪ್ಪು. ದಲಿತ ಸಾಹಿತ್ಯ ಕೆಲವು ತತ್ವಗಳಿಗೆ ಬದ್ಧವಾಗಿ ಮಾತ್ರ ರಚನೆ ಆಗಬೇಕು ಎಂಬುದು ಅವರ ನಿಲುವು.

ಕೃಷ್ಣಪ್ಪನವರ ಕುವೆಂಪು ಕಾದಂಬರಿಗಳ ಕುರಿತ ಚಿಂತನೆಯು ವಿಭಿನ್ನ ಬಗೆಯದು. ಕುವೆಂಪು ಅವರು ಒಬ್ಬ ದಲಿತ ಕವಿಯಾಗಿದ್ದರು ಕೂಡ ತಮ್ಮ ಕಾದಂಬರಿಗಳಾದ `ಮಲೆಗಳಲ್ಲಿ ಮದುಮಗಳು', `ಕಾನೂರು ಹೆಗ್ಗಡತಿ' ಮತ್ತು ಉಳಿದ ಗದ್ಯಬರವಣಿಗೆಯಲ್ಲಿ ಸಂಸ್ಕೃತಕ್ಕೆ ಹೆಚ್ಚಿನ ಪ್ರಾತಿನಿಧ್ಯತೆ ನೀಡಿದ್ದುದರ ಬಗೆಗೆ ಕೃಷ್ಣಪ್ಪನವರ ತಕರಾರು ಇದೆ.

ಕೃಷ್ಣಪ್ಪನವರು ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನವನ್ನು ನೈಜವಾಗಿ ಚಿತ್ರಿಸಿಲ್ಲ ಎಂದು ಟೀಕಿಸಿದ್ದಾರೆ. ಶೋಷಣೆಯನ್ನು ಕುರಿತು ಬರೆಯುವ ಲೇಖಕರಿಗೆ ಶೋಷಣಾ ವ್ಯವಸ್ಥೆಯ ಬಗ್ಗೆ ಸ್ಪಷ್ಟವಾದ ಕಲ್ಪನೆ, ನಿಚ್ಚಳ ಧೋರಣೆಯು ಅವಶ್ಯಕ. ಆದರೆ ಲೇಖಕರಿಗೆ ಅಂಥ ಧೋರಣೆ ಇಲ್ಲದೆ ಹೋದಾಗ ಸ್ವಜನ ಪಕ್ಷಪಾತಿಯೂ, ವರ್ಗಹಿತಾಸಕ್ತನೂ ಆಗುತ್ತಾನೆ ಎಂಬುದು ಸ್ಪಷ್ಟ. ಕುವೆಂಪು ದಲಿತ ಜೀವನದ ಚಿತ್ರಣವನ್ನು ಕೊಡುವಾಗ ಇಂಥ ಸಂದಿಗ್ಧತೆಯ ಆರೋಪದಿಂದ ಮುಕ್ತವಾಗಿಲ್ಲ ಎಂಬುದು ಕೃಷ್ಣಪ್ಪನವರ ವ್ಯಾಖ್ಯಾನವಾಗಿದೆ.[೬]

೩.೪ ಕೃಷ್ಣಪ್ಪ ಅವರ ರಾಜಕೀಯ ಚಿಂತನೆ

ದಲಿತರ ಸ್ಥಿತಿಯಲ್ಲಿ ಪರಿವರ್ತನೆ, ಬದಲಾವಣೆಯನ್ನು ಕೇವಲ ಹೋರಾಟದಿಂದ ತರಲು ಸಾಧ್ಯವಿಲ್ಲ. ರಾಜಕೀಯ ಅಧಿಕಾರ ಪಡೆದುಕೊಂಡರೆ ಮಾತ್ರ ಪರಿವರ್ತನೆ ತರಲು ಸಾಧ್ಯ ಎಂದಿದ್ದಾರೆ. ಸಮಗ್ರ ವ್ಯವಸ್ಥೆಯನ್ನು, ಸಮಸ್ಯೆಗಳನ್ನು ಬಗೆಹರಿಸಲು ರಾಜಕೀಯ ಅಧಿಕಾರವು ಅವಶ್ಯಕವಾಗಿದೆ.[೭] ಹೊಲೆಯ, ಮಾದಿಗ ಇತ್ಯಾದಿ ಒಳಜಾತಿಗಳು ಹಾಗೂ ಇತರ ಹಿಂದುಳಿದ ಜಾತಿಗಳ ನಡುವಿನ ವೈಮನಸ್ಸಿನ ಗೋಡೆಯನ್ನು ಒಡೆದು ಪ್ರೀತಿ, ಸಮಾನತೆ ಇರುವ ಬಹುಜನ ಸಮಾಜ ನಿರ್ಮಾಣಕ್ಕಾಗಿ ಶೋಷಿತರೆಲ್ಲರು ಒಂದಾಗಿ ಸ್ವತಂತ್ರ ರಾಜಕೀಯ ಶಕ್ತಿಯಾಗಬೇಕು ಎಂಬುದು ಅವರ ವಿಚಾರಧಾರೆಯಾಗಿದೆ. ನಂತರ ರಾಜಕೀಯ ಅಧಿಕಾರದ ಗದ್ದುಗೆ ಪರಿ ಶೋಷಿತರ ವಿಮೋಚನೆಗಾಗಿ ಸಮಾಜದ ಸಮಗ್ರ ಬದಲಾವಣೆ ತರಲು ಸಾಧ್ಯವಾಗುತ್ತದೆ ಎಂಬುದು ಕೃಷ್ಣಪ್ಪನವರ ಚಿಂತನೆಗಳಿಂದ ತಿಳಿದುಬರುತ್ತದೆ.

ದೇಶದ ಎಲ್ಲ ಬದಲಾವಣೆಗಳಿಗೆ ರಾಜಕೀಯ ಶಕ್ತಿಯು ಒಂದು ಉಪಕರಣ ಅಥವಾ ಸಾಧನ ಇದ್ದಂತೆ. ಇಂಥ ಸಾಧನವನ್ನು ದಲಿತರು ಬಳಸಿಕೊಂಡು ತಮ್ಮ ಸ್ಥಾನಮಾನಗಳನ್ನು ಉತ್ತಮ ಪಡಿಸಿಕೊಳ್ಳಬೇಕು ಎಂದಿದ್ದಾರೆ. ಸ್ವಾತಂತ್ರ್ಯದ ನಂತರ ಇಂದಿನವರೆಗೂ ಕೂಡ ಹಲವಾರು ದಲಿತ ಮುಖಂಡರು ಅಧಿಕಾರದ ಗದ್ದುಗೆಯನ್ನು ಏರಿದ್ದಾರೆ. ಆದರೂ ದಲಿತರ ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳಲ್ಲಿ ನಿರೀಕ್ಷಿಸಿದಷ್ಟು ಬದಲಾವಣೆಯಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಪ್ರಜ್ಞಾವಂತ ಪ್ರಗತಿಪರ ದಲಿತರು ಅಧಿಕಾರಕ್ಕೆ ಬಾರದೇ ಇರುವುದು ಎನ್ನಲಾಗಿದೆ.[೮]

ದಲಿತರು ರಾಜಕೀಯ ಪಕ್ಷದ ಜೊತೆಗೆ ಹೊಂದಾಣಿಕೆ ಬಯಸುವಾಗ ಬಹುಜನರ ಹಿತವನ್ನು ಹೊಂದಿರುವ ಹಾಗೂ ಅಂಬೇಡ್ಕರ್ ಅವರ ರಾಜಕೀಯ ಸಿದ್ಧಾಂತವನ್ನು ಒಪ್ಪಿಕೊಂಡಿರುವ ಪಕ್ಷವನ್ನು ಸೇರಬೇಕು. ಆಗ ಮಾತ್ರ ಶೋಷಿತರ ಹಿತವನ್ನು ಸಾಧಿಸಲು ಸಾಧ್ಯ ಮತ್ತು ಸಮಾಜದ ಪರಿವರ್ತನೆ ಆಗಲು ಸಾಧ್ಯ.

ಇಂದಿನ ಸರ್ಕಾರದ ಗುರಿ ದಲಿತರ ಓಟಿನ ಮೇಲೆಯೇ ಹೊರತು ಅವರ ಉದ್ಧಾರಕ್ಕಾಗಿ ಅಲ್ಲ. ಈ ದೇಶದಲ್ಲಿರುವ ಎಲ್ಲ ಪಕ್ಷಗಳು ದಲಿತರನ್ನು ಯಾವ ರೀತಿ ನಡೆಸಿಕೊಳ್ಳುತ್ತಿದ್ದಾರೆಂದರೆ 'ಕಟುಕನು ಕುರಿಗೆ ಹುಲ್ಲು ತೋರಿಸಿ ಆಕರ್ಷಣೆ ಮಾಡಿ ಕರೆದು, ಕೊನೆಗೆ ಕಡಿದು ಹಾಕುವ ರೀತಿಯಲ್ಲಿದೆ' ಎನ್ನುವ ತೀರ್ಮಾನಕ್ಕೆ ಬರಬಹುದು.

ದಲಿತರು ರಾಜಕೀಯ ಅಧಿಕಾರವನ್ನು ಪಡೆದರೆ ಮಾತ್ರ ಸಂಪತ್ತಿನಲ್ಲಿ ಸಮಪಾಲು ಪಡೆಯಲು ಸಾಧ್ಯ. ರಾಜಕೀಯ ಅಧಿಕಾರ ಇಲ್ಲದೇ ಹೋದರೆ ಸಂಪತ್ತಿನ ಪಾಲು ಸಿಗುವುದಿಲ್ಲ. ಇದನ್ನು ಅರಿತು ದಲಿತರು ರಾಜಕೀಯ ಅಧಿಕಾರವನ್ನು ಪಡೆಯಲು ಮುಂದಾಗಬೇಕು ಎಂದಿದ್ದಾರೆ. ಇಂದು ದಲಿತರು ದೇವಸ್ಥಾನ ಪ್ರವೇಶ ಮಾಡುವುದಕ್ಕಿಂತ ಪಾರ್ಲಿಮೆಂಟನ್ನು ಪ್ರವೇಶ ಮಾಡಬೇಕು ಅಥವಾ ಅಧಿಕಾರದ ಶಕ್ತಿ ಪಡೆಯುವುದು ಹೆಚ್ಚು ಸೂಕ್ತ.

ಕೃಷ್ಣಪ್ಪನವರು 'ಸೋಷಿಯಲಿಸ್ಟ್ ಪಕ್ಷ'ದ ಬಗೆಗೆ ಅಪಾರವಾದ ಒಲವು ಹೊಂದಿರುವುದನ್ನು ಅವರ ಚಿಂತನೆಗಳಿಂದ ತಿಳಿದುಬರುತ್ತದೆ. ಈ ದೇಶದ ಜಾತಿ ವ್ಯವಸ್ಥೆಯ ಬಗೆಗೆ ನಿಖರವಾಗಿ ಅಧ್ಯಯನ ಮಾಡಿ ಆ ಬಗ್ಗೆ ನಿಚ್ಚಳವಾದ ಧೋರಣೆಯುಳ್ಳ 'ಸೋಷಿಯಲಿಸ್ಟ್ ಪಕ್ಷ'ವನ್ನು ದಲಿತರು ಬೆಂಬಲಿಸಬೇಕೆಂದಿರುವುದು ಕೃಷ್ಣಪ್ಪನವರ ವಿಚಾರಧಾರೆಯಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸೋಷಿಯಲಿಸ್ಟರು ಓಟಿನ ರಾಜಕಾರಣಕ್ಕೆ

ಬಿದ್ದು ಜಾತಿ ವಿರೋಧಿ ಕಾರ್ಯಕ್ರಮವನ್ನು ಮೂಲೆಗುಂಪು ಮಾಡಿದ್ದಾರೆ ಎಂದು ಕೃಷ್ಣಪ್ಪನವರು ವಸ್ತುನಿಷ್ಠ ಪರಿಸ್ಥಿತಿಯನ್ನು ಟೀಕಿಸುವಲ್ಲಿ ಹಿಂಜರಿಯುವುದಿಲ್ಲ.

ಜಾತಿವ್ಯವಸ್ಥೆ ಇರುವ ಭಾರತದಂಥ ದೇಶದಲ್ಲಿ ಒಂದು ವರ್ಗದ ಕೈಯಲ್ಲಿ ಅಧಿಕಾರ ಕೇಂದ್ರಿಕರಣಗೊಳ್ಳುವುದನ್ನು ಕೃಷ್ಣಪ್ಪನವರು ವಿರೋಧಿಸುತ್ತಾರೆ. ಏಕೆಂದರೆ ಜಾತಿ ವ್ಯವಸ್ಥೆಯ ಅಡಿಯಲ್ಲಿ ಕೇಂದ್ರಿಕರಣವು ಅಪಾಯಕಾರಿ ಅಸ್ತ್ರವೋ, ಹಾಗೆಯೇ ಜಾತಿ ವ್ಯವಸ್ಥೆಯ ಅಡಿಯಲ್ಲಿ ವಿಕೇಂದ್ರಿಕರಣವೂ ಅಷ್ಟೇ ಅಪಾಯಕಾರಿಯಾಗುತ್ತದೆ ಎಂದಿದ್ದಾರೆ.

೩.೫ ಕೃಷ್ಣಪ್ಪ ಅವರ ಮಹಿಳಾ ಚಿಂತನೆ

ಕೃಷ್ಣಪ್ಪನವರು ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಆರ್ಥಿಕ ಸ್ವಾವಲಂಬನೆಯ ಕುರಿತು ಹಲವು ಹಂತಗಳಲ್ಲಿ ಚಿಂತನೆಯನ್ನು ನಡೆಸಿದ್ದಾರೆ. ಪ್ರಾಚೀನ ಕಾಲದಿಂದಲೂ ಸ್ತ್ರೀಯರು ವಿದ್ಯಾಭ್ಯಾಸ, ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಪುರುಷನ ಭೋಗ ವಸ್ತುವಾಗಿ ಶೋಷಣೆಗೆ ಒಳಗಾಗುತ್ತಿದ್ದಾಳೆ. ವೇದಗಳ ಕಾಲದಲ್ಲಿ ಸ್ತ್ರೀಯರು ವೇದಾಧ್ಯಯನ ಮಾಡುತ್ತಿದ್ದರು ಎಂದು ಹೇಳಲಾಗುತ್ತದೆ. ಆದರೆ ಈ ಹಕ್ಕು ಹೊಂದಿದ್ದು ಕೇವಲ ಮೇಲ್ಜಾತಿಯ ಸ್ತ್ರೀಯರು ಮಾತ್ರ. ಇಂಥ ಅವಕಾಶವು ದಲಿತ ಹೆಣ್ಣುಮಕ್ಕಳಿಗೆ ಇರಲಿಲ್ಲ. ದಲಿತರಿಗೆ ವೇದಾಧ್ಯಯನದ ಹಕ್ಕೆ ಇಲ್ಲದ ಕಾಲದಲ್ಲಿ ಇನ್ನೂ ದಲಿತ ಸ್ತ್ರೀಯರಿಗೆ ವೇದಾಧ್ಯಯನ ಸಾಧ್ಯವೆ? ಪ್ರಾಚೀನ ಕಾಲದಿಂದ ಇಂದಿನವರೆಗೂ ಇಂಥ ಹಲವು ತಾರತಮ್ಯಗಳು ನಡೆಯುತ್ತಲೇ ಬಂದಿರುವ ಬಗೆಗೆ ಕೃಷ್ಣಪ್ಪನವರ ತಕರಾರು ಇದೆ.

ಇಂದು ಸ್ತ್ರೀಯರು ಎಲ್ಲ ಕ್ಷೇತ್ರಗಳಲ್ಲಿಯೂ ಪ್ರವೇಶಿಸಿದ್ದು, ಅವಳು ಆರ್ಥಿಕ ಸ್ವಾವಲಂಬನೆ ಪಡೆದು ಉನ್ನತ ಸ್ಥಾನಮಾನಗಳಲ್ಲಿದ್ದಾಳೆ. ಆದರೆ ಇಂಥ ಸ್ಥಾನಮಾನಗಳನ್ನು ಪಡೆದಿರುವುದು ಉನ್ನತ ವರ್ಗದ ಮೇಲ್ಜಾತಿಯ ಸ್ತ್ರೀಯರು ಮಾತ್ರ. ದಲಿತ ಮಹಿಳೆಗೆ ಅಂಥ ಅವಕಾಶಗಳು ಇನ್ನೂ ಲಭಿಸಿಲ್ಲ. ಅಲ್ಲದೆ ಅವಳು ಶೋಷಣೆಗೆ ಒಳಗಾಗುತ್ತಲೇ ಇದ್ದಾಳೆ. ದಲಿತ ಮಹಿಳೆಯರು ಇತರೆ ವರ್ಗದ ಮಹಿಳೆಯರಿಗಿಂತ ಹೆಚ್ಚು ಶೋಷಣೆಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ದಲಿತ ಮಹಿಳೆಯರು ಬೇರೆ ವರ್ಗದ ಮಹಿಳೆಯರಿಗಿಂತ ಹೆಚ್ಚಾಗಿ ತಮ್ಮನ್ನು ಎಲ್ಲಾ ಕ್ಷೇತ್ರಗಳಲ್ಲೂ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ದಲಿತ ಸ್ತ್ರೀಯ ಸ್ಥಾನಮಾನಗಳು ಉತ್ತಮಗೊಳ್ಳುತ್ತವೆ ಎಂಬುದು ಅವರ ವಿಚಾರಧಾರೆಯಿಂದ ತಿಳಿದು ಬರುತ್ತದೆ.

ಕೃಷ್ಣಪ್ಪನವರು ಒಟ್ಟಾರೆಯಾಗಿ ಇಡೀ ಸಮಾಜದ ಸ್ತ್ರೀಯ ಸ್ಥಾನಮಾನ, ಸ್ವಾತಂತ್ರ್ಯ, ಸಮಾನತೆ, ಸ್ವಾವಲಂಬನೆಯನ್ನು ಕುರಿತು ಚಿಂತಿಸಿದ್ದಾರೆ. ಆದರೆ ಇತರೆ ಮಹಿಳೆಯರಿಗಿಂತ ದಲಿತ ಮಹಿಳೆಯನ್ನು ಕುರಿತು ಹೆಚ್ಚು ಕಾಳಜಿ ವಹಿಸಿರುವುದು ಅವರ ಚಿಂತನೆಗಳಿಂದ ವ್ಯಕ್ತವಾಗುತ್ತದೆ. (ಹೆಚ್ಚಿನ ಮಾಹಿತಿಗಾಗಿ ಪ್ರೊ. ಬಿ. ಕೃಷ್ಣಪ್ಪ ಚಿಂತನೆಗಳು ಮತ್ತು ಬರಹಗಳು, ಪು.೮೩, ೮೪)

ಟಿಪ್ಪಣಿಗಳು

೧. ಹಾಲಪ್ಪ ಎಚ್., (ಸಂ.), ಜನಹಿತ ಬಹುಮತ, ಪು. ೧೦

೨. ಕೃಷ್ಣಪ್ಪ ಬಿ., ಚಳವಳಿಗಳು ಮತ್ತು ಬರಹಗಳು, ಪು. ೩, ಅದೇ, ೧೧, ಅದೇ, ೯೩, ಅದೇ, ೯೪

೩. ಕೃಷ್ಣಪ್ಪ ಬಿ., ಪ್ರೊ. ಬಿ. ಕೆ. ಚಿಂತನೆಗಳು ಮತ್ತು ಬರಹಗಳು, ಪು. ೮, ಅದೇ, ೧೧, ಅದೇ, ೧೨

೪. ಇಂದಿರಾ ಕೃಷ್ಣಪ್ಪ, (ಸಂ.), ಬಯಲು ಬೆತ್ತಲೆ ಚಂದ್ರಗುತ್ತಿ, ಪು. ೩

೫. ಅನಂತ ಮೂರ್ತಿ ಯು. ಆರ್., ಬೆತ್ತಲೆ ಪೂಜೆ ಯಾಕೆ ಕೂಡದು, ಪು. ೩೬, ಅದೇ, ೩೮

೬. ರುದ್ರಪ್ಪ ಹನಗವಾಡಿ, (ಸಂ.), ಸಂಘರ್ಷದ ರೂವಾರಿ ಪ್ರೊ. ಬಿ. ಕೆ. ಪು. ೧೬

೭. ಅರವಿಂದ ಮಾಲಗತ್ತಿ, (ಸಂ.), ದಲಿತಮಾರ್ಗ, ಪು. ೩೧೧, ಅದೇ, ೩೧೭, ಅದೇ, ೩೧೮

೮. ಕೃಷ್ಣಪ್ಪ ಬಿ., ಪ್ರೊಫೆಸರ್ ಬಿ. ಕೆ. ಬಿಚ್ಚುನುಡಿ, ಪು. ೧೪, ಅದೇ, ೩೭

೯. ಇಂದಿರಾ ಕೃಷ್ಣಪ್ಪ, (ಸಂ.), ಸಂಘರ್ಷದ ನುಡಿಗಳು, ಪು. ೭, ಅದೇ, ೮

ಅಧ್ಯಾಯ ನಾಲ್ಕು

ಸಂಘಟನಕಾರರಾಗಿ ಕೃಷ್ಣಪ್ಪ

೪.೧. ದಲಿತ ಸಂಘರ್ಷ ಸಮಿತಿಯ ಹುಟ್ಟಿನ ಹಿನ್ನೆಲೆ

೪.೨ ದಲಿತ ಸಂಘರ್ಷ ಸಮಿತಿಯ ತತ್ವ ಸಿದ್ಧಾಂತ: ಕೃಷ್ಣಪ್ಪ

೪.೩. ದಲಿತ ಸಂಘರ್ಷ ಸಮಿತಿಯ
ರಾಜಕೀಯ ಪ್ರವೇಶ ಮತ್ತು ಒಡಕು

೪.೪ ಹೋರಾಟಗಳು: ಕೃಷ್ಣಪ್ಪ

೪.೫ ಬೆತ್ತಲೆ ಸೇವೆಯ ವಿರುದ್ಧ ಹೋರಾಟ

೧೯೭೦ ರಲ್ಲಿ ಮಹಾರಾಷ್ಟ್ರದಲ್ಲಿ 'ದಲಿತ ಪ್ಯಾಂಥರ್ಸ್' ಹುಟ್ಟಿತು. ಇದು ಅಮೇರಿಕದ 'ಬ್ಲಾಕ್ ಪ್ಯಾಂಥರ್ಸ್' ನ ಪ್ರಭಾವದಿಂದ ಹುಟ್ಟಿಕೊಂಡಿದೆ. ಇಂದಿನ ಎಲ್ಲ ದಲಿತ ಚಳವಳಿಗೆ ಒಂದಿಲ್ಲೊಂದು ರೀತಿಯಲ್ಲಿ ಮಹಾರಾಷ್ಟ್ರ ದಲಿತ ಪ್ಯಾಂಥರ್ಸ್ ಸ್ಫೂರ್ತಿಯ ಚಿಲುಮೆಯಾಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು. ಅಂದಿನ ಜೆ.ಪಿ. ಚಳವಳಿ ಮತ್ತು ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳವಳಿಯಿಂದ ಪ್ರಭಾವಿತರಾದ ಪ್ರೊ. ಬಿ. ಕೃಷ್ಣಪ್ಪನವರು 'ದಲಿತ ಸಂಘರ್ಷ ಸಮಿತಿ'ಯನ್ನು ಹುಟ್ಟುಹಾಕಿದರು. ಈ ಸಮಿತಿಯು ಭದ್ರಾವತಿಯಲ್ಲಿ ೧೯೭೪ ರಲ್ಲಿ ಸ್ಥಾಪಿಸಲಾಯಿತು. ಎಪ್ಪತ್ತರ ದಶಕದಲ್ಲಿ 'ದಲಿತ ಸಂಘರ್ಷ ಸಮಿತಿ' ಮಹತ್ವದ ಪಾತ್ರ ಪಡೆದಿರುವುದು ಕೃಷ್ಣಪ್ಪನವರು ನಿರ್ವಹಿಸಿದ ಪಾತ್ರದ ಹಿನ್ನೆಲೆಯಲ್ಲಿ. 'ದಲಿತ ಸಂಘರ್ಷ ಸಮಿತಿ'ಯ ಬಹುಪಾಲು ಹೋರಾಟಗಳು ಕೃಷ್ಣಪ್ಪನವರ ನೇತೃತ್ವದ್ದೇ ಎಂದು ಇಲ್ಲಿ ಹೇಳಬಹುದಾಗಿದೆ.

ಯಾವುದೇ ಹೋರಾಟಕ್ಕೆ ಒಂದು ಸೈದ್ಧಾಂತಿಕ ನೆಲೆ ಅವಶ್ಯಕ. ಇಂಥ ನೆಲೆಯನ್ನು ಕೃಷ್ಣಪ್ಪನವರು ಒದಗಿಸಿಕೊಟ್ಟರು. ಇದರಿಂದ ದ.ಸಂ.ಸ ಹುಟ್ಟು ಪಡೆಯಿತು ಎಂದರೆ ತಪ್ಪಾಗಲಾರದು. ಕೃಷ್ಣಪ್ಪನವರು ಕರ್ನಾಟಕದ ಉದ್ದಗಲಕ್ಕೂ ಅದರ ಶಾಖೆಗಳನ್ನು ತೆರೆದು ದಲಿತರಲ್ಲಿ ಹೋರಾಟದ ಕೆಚ್ಚನ್ನು ಮೂಡಿಸಿದರು. ಎಪ್ಪತ್ತರ ದಶಕದಲ್ಲಿ ಹುಟ್ಟು ಪಡೆದ ದ.ಸಂ.ಸ. ಜಾತಿ ಪರಿಮಿತಿಯನ್ನು ದಾಟಿ, ಎಲ್ಲ ಶೋಷಿತರ ಅಹವಾಲುಗಳಿಗೆ ಸ್ಪಂದಿಸುವ ಮೂಲಕ ಕರ್ನಾಟಕದ ಮನೆ ಮಾತಾಗಿತ್ತು. ದಲಿತರಿಂದ ಆರಂಭವಾದ 'ದಲಿತ ಸಂಘರ್ಷ ಸಮಿತಿ' ದಲಿತೇತರ ಸಮಸ್ಯೆಗಳಿಗೂ ಸ್ಪಂದಿಸಿ ಜಾತ್ಯಾತೀತ ಧೋರಣೆಗಳಿಗೆ ಚಾಲನೆ ನೀಡುವಂತೆ ಕೃಷ್ಣಪ್ಪನವರು ಶ್ರಮಿಸಿದ್ದು ಗಮನಾರ್ಹ.[೧]

೪.೧ ದಲಿತ ಸಂಘರ್ಷ ಸಮಿತಿಯ ಹುಟ್ಟಿನ ಹಿನ್ನೆಲೆ

ಭಾರತೀಯ ಹಿಂದು ಸಮಾಜದಲ್ಲಿ ಜಾತಿಯ ಕಾರಣಕ್ಕಾಗಿ ಒಂದು ವರ್ಗದ ಅಸ್ಪೃಶ್ಯ ತಳ ಸಮುದಾಯದ ಹಿಂಸೆ, ಅವಮಾನದಲ್ಲಿ ನೊಂದು-ಬೆಂದು ಹೋಗಿದ್ದರು. ಅಂಥ ಜನವರ್ಗಗಳಿಗೆ ಭರವಸೆ, ಸ್ವಾಭಿಮಾನದ ಎಚ್ಚರಗಳನ್ನು ನೀಡಲೆಂದೇ ಹುಟ್ಟಿದ ಸಾಂಸ್ಕೃತಿಕ ಸಂಘಟನೆ 'ದಲಿತ ಸಂಘರ್ಷ ಸಮಿತಿ'ಯಾಗಿದೆ.

ಎಪ್ಪತ್ತರ ದಶಕದ ಕಾಲಘಟ್ಟದಲ್ಲಿ ಕನ್ನಡ ನೆಲದಲ್ಲಿ ಜರುಗಿದ ಸಾಮಾಜಿಕ ರಾಜಕೀಯ ಮತ್ತು ಸಾಹಿತ್ಯ ಚಳವಳಿಯ ಹಿಂದೆ ಮಾರ್ಕ್ಸ್, ಲೆನಿನ್ ಮಾವೋ, ಫುಲೆ, ಗಾಂಧಿ, ಅಂಬೇಡ್ಕರ್, ಪೆರಿಯಾರ್, ಜೆ. ಪಿ. ಯಂಥವರ ಪ್ರೇರಣೆ ಪ್ರಭಾವವಿತ್ತು. ಹಾಗೆಯೇ ದಲಿತ ಚಳವಳಿ ಮತ್ತು ದಲಿತ ಸಂಘಟನೆಗಳಿಗೆ ಅಂಬೇಡ್ಕರ್ ಅವರ ವಾದವು ಪ್ರಮುಖ ಪ್ರೇರಣೆಯಾಗಿದೆ. ದೇವರಾಜ ಅರಸು (೧೯೭೯) ಅವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾಗ, ಅವರ ನೇತೃತ್ವದಲ್ಲಿ, ಎಲ್. ಜಿ. ಹಾವನೂರು ಅವರು ಮಂಡಿಸಿದ ವರದಿ ಜಾರಿಗಾಗಿ ಅಂಬೇಡ್ಕರ್ ಜನ್ಮದಿನಾಚರಣೆ ದಿನದಂದು ನಡೆಸಿದ ಆಂದೋಲನದಿಂದ ದಲಿತ ಬುದ್ಧಿಜೀವಿಗಳು ಒಂದು ನಿರ್ದಿಷ್ಟ ಕಾರಣಕ್ಕಾಗಿ ಒಂದುಗೂಡುವಂತೆ ಮಾಡಿತು. ಬಿ. ಬಸವಲಿಂಗಪ್ಪ ಅವರ 'ಬೂಸ ಪ್ರಕರಣ', ತಲೆಯ ಮೇಲೆ ಮಲಹೊರುವ ಪದ್ಧತಿ ನಿಷೇಧಿಸಲು ಎಬ್ಬಿಸಿದ ಕೂಗು, ದೇವರು, ಧರ್ಮವನ್ನು ಕುರಿತು ಆಡಿದ ಮಾತುಗಳು

ಸಂಪ್ರದಾಯ ಬದ್ಧ ಜನರ ನಿದ್ದೆಕೆಡಿಸಿದವು. ಇವೆಲ್ಲವುಗಳ ಪರಿಣಾಮ ಶೋಷಿತ ಸಮುದಾಯದ ಯುವಕರು ಹೊಸ ಬಗೆಯ ಚಿಂತನೆಗೆ ತತ್‌ಕ್ಷಣದ ಕಾರಣವಾಯಿತು.

ಇದೇ ಕಾಲಕ್ಕೆ (೧೯೭೩) ಪಿ. ಲಂಕೇಶ್, ತೇಜಸ್ವಿ, ರಾಮದಾಸ್, ದೇವನೂರು, ಸಿದ್ದಲಿಂಗಯ್ಯ ಮುಂತಾದವರು ಸೇರಿಕೊಂಡು ಮೈಸೂರಿನಲ್ಲಿ 'ಜಾತಿ ವಿನಾಶ ಸಮ್ಮೇಳನ' ನಡೆಸಿ ಕರ್ನಾಟಕದಲ್ಲಿ ಹೊಸ ಬಗೆಯ ಚಿಂತನೆ ಹುಟ್ಟು ಹಾಕಿದರು. ಇದೇ ಜನ ೧೯೭೪ ರಲ್ಲಿ 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ರಚಿಸಿಕೊಂಡು ಸಮ್ಮೇಳನ ನಡೆಸಿ ಶೂದ್ರ ಸಮೂಹದ ಜಾಗೃತಿಗೆ ಕಾರಣರಾದರು. ಇಂಥ ಸಾಮಾಜಿಕ, ಸಾಂಸ್ಕೃತಿಕ ಪರಿವರ್ತನಾ ಗಾಳಿ ಕರ್ನಾಟಕದಲ್ಲಿ ಸಂಚರಿಸುತ್ತಿರುವಾಗಲೆ, ಪ್ರೊ. ಬಿ. ಕೃಷ್ಣಪ್ಪನವರ ನಾಯಕತ್ವದಲ್ಲಿ 'ದಲಿತ ಸಂಘರ್ಷ ಸಮಿತಿ'ಯು ರೂಪುಗೊಂಡಿತು. ಇದು ದಲಿತರಲ್ಲಿ ಜಾಗೃತಿ ಮೂಡಿಸಿದ್ದಲ್ಲದೆ, ದಲಿತ ವರ್ಗಗಳಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಎಚ್ಚರಗಳನ್ನು ಜಾಗೃತಗೊಳಿಸಿತ್ತು. ೧೯೭೭ ರ ಜೂನ್‌ನಲ್ಲಿ ರಾಜ್ಯದ ಬೇರೆ ಬೇರೆ ದಲಿತ ಸಂಘಟನೆಗಳನ್ನು ಒಗ್ಗೂಡಿಸಿ ಅದಕ್ಕೆ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ಎಂಬ ಹೆಸರನ್ನು ದಲಿತ ಸಂಘರ್ಷ ಸಮಿತಿಯ ಹೆಸರಿಗೆ ಪರ್ಯಾಯವಾಗಿ ಬಳಸಲಾಯಿತು.

ದ.ಸಂ.ಸ. ಹುಟ್ಟುವ ಮೊದಲು ದಲಿತರಿಗೆ ಯಾವುದೇ ಸಂಘಟನೆಗಳು ಇರಲಿಲ್ಲವೆಂದಲ್ಲ. ಉದಾಹರಣೆಗೆ ಜಯ ಭೀಮ ಸಂಘ, ಅಂಬೇಡ್ಕರ್ ಸಂಘ, ಹರಿಜನ ಭಜನಾ ಮಂಡಲಿ, ಭೀಮಸೇನೆ ಹೀಗೆ ಬೇರೆ ಬೇರೆ ಸಂಘಟನೆಗಳಿದ್ದವು.[೨] ಆದರೆ ಇವು ಹೆಚ್ಚಾಗಿ ಸರ್ಕಾರಿ ಸೌಲಭ್ಯ ಪಡೆಯುವುದಕ್ಕಾಗಿ ಮುಂದಾದವೇ ಹೊರತು ದಲಿತರ ಸಮಸ್ಯೆಗಳಿಗೆ ನಿರೀಕ್ಷಿಸಿದಷ್ಟು ಪರಿಹಾರಗಳನ್ನು ದೊರಕಿಸಲಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ. ೧೯೭೩ ರಲ್ಲಿ ದಲಿತ ಕ್ರಿಯಾ ಸಮಿತಿ ಬೆಂಗಳೂರಿನಲ್ಲಿ ಜನ್ಮತಾಳಿತ್ತು. ಇದು ದ.ಸಂ.ಸ. ಗಿಂತ ಮೊದಲು ಕ್ರಿಯಾಶೀಲವಾಗಿದೆ. ಇದರ ಅಧ್ಯಕ್ಷತೆಯನ್ನು ಡಿ. ಎಂ. ತಿಮ್ಮರಾಯಪ್ಪನವರು ವಹಿಸಿಕೊಂಡಿದ್ದರು.[೩] ದಲಿತ ಕ್ರಿಯಾ ಸಮಿತಿಯು ದಲಿತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿದ್ದರಿಂದ ದ.ಸಂ.ಸ ಹುಟ್ಟಿತು ಎಂದರೆ ತಪ್ಪಾಗಲಾರದು.

ದ.ಸಂ.ಸ. ಇತಿಹಾಸದಲ್ಲಿ ಗಮನಿಸಬಹುದಾದಂಥ ಮೂರು ಜನ ಪ್ರಮುಖ ವ್ಯಕ್ತಿಗಳೆಂದರೆ ಕೃಷ್ಣಪ್ಪ, ದೇವನೂರು ಮಹಾದೇವ, ಸಿದ್ದಲಿಂಗಯ್ಯನವರು. ದೇವನೂರು ಮಹಾದೇವ ಅವರು ಸಂಘಟನೆಯ ಮೆದುಳಾಗಿ, ಸಿದ್ದಲಿಂಗಯ್ಯನವರು ಬಾಯಿಯಾಗಿ, ಕೃಷ್ಣಪ್ಪನವರು ಸಂಘಟನೆಗೆ ರಕ್ತ, ಮಾಂಸ ತುಂಬುವ ದೇಹವಾಗಿದ್ದು ಅವರುಗಳು ನಿರ್ವಹಿಸಿದ ಕಾರ್ಯಗಳಿಂದ ತಿಳಿಯಬಹುದು. ಕೃಷ್ಣಪ್ಪನವರು ಮಾನವತಾವಾದಿ ಚಳವಳಿಗಾರರಾಗಿ, ದೇವನೂರು ಮಹಾದೇವ ಅವರು ಸಮಾಜವಾದಿ ಚಳವಳಿಗಾರರಾಗಿ, ಸಿದ್ದಲಿಂಗಯ್ಯ ಕಮ್ಯೂನಿಸ್ಟ್ ಚಳವಳಿಗಾರರಾಗಿದ್ದರು. ಈ ಮೂರು ಶಕ್ತಿಗಳು ಸೇರಿ ದ.ಸಂ.ಸ. ಯನ್ನು ಸದೃಢ ಸಂಘಟನೆಯಾಗಿ ಮಾಡಿದರು. ಇವರ ನೇತೃತ್ವದ ದ.ಸಂ.ಸ. ತನ್ನ ಹೋರಾಟದ ಉದ್ದಕ್ಕೂ ಅಂಬೇಡ್ಕರ್ ತತ್ವಗಳ ಹಾದಿಯಲ್ಲಿ ನಡೆಯಿತು.

ಕರ್ನಾಟಕದ ಪ್ರಬಲ ಸಂಘಟನೆಯಾದ ದ.ಸಂ.ಸ. ಯ ಪ್ರಥಮ ರಾಜ್ಯ ಸಂಚಾಲಕರಾಗಿ ೧೯೭೯ ರಿಂದ ೧೯೮೫ ರವರೆಗೆ ಕೃಷ್ಣಪ್ಪನವರು ಶೋಷಣೆಯ ವಿರುದ್ಧ ಹೋರಾಡಿದರು. ರಾಜ್ಯ ಸಂಚಾಲಕ ಹುದ್ದೆಯನ್ನು ಕೈಬಿಟ್ಟರು ಕೂಡ ಕೃಷ್ಣಪ್ಪನವರು ತಮ್ಮ ಕೊನೆಯ ದಿನಗಳವರೆಗೂ ಕೂಡ ದಲಿತರ ಉದ್ಧಾರಕ್ಕಾಗಿ ಹೋರಾಡಿದ್ದು ಗಮನಾರ್ಹ. ಕೃಷ್ಣಪ್ಪನವರು ಶಿಸ್ತಿನ ಸಿಪಾಯಿಯಾಗಿದ್ದರು. ಸಂಘಟನೆಯನ್ನು ಸದೃಢಪಡಿಸುವುದಕ್ಕಾಗಿ ಕೆಲವೊಂದು ಶಿಸ್ತು ಸಂಹಿತೆಗಳನ್ನು ರೂಪಿಸಿ, ಅವುಗಳನ್ನು ಕಾರ್ಯಕರ್ತರು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಿದರು. ಕೃಷ್ಣಪ್ಪನವರು 'ವ್ಯಕ್ತಿಗಿಂತ ಸಂಘಟನೆಯೇ ದೊಡ್ಡದು' ಎಂದು ಚಿಂತಿಸಿದ್ದವರು ಎಂಬುದು ಅವರ ವಿಚಾರಧಾರೆಗಳಿಂದ ತಿಳಿದುಬರುತ್ತದೆ.[೪]

ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಶೋಷಣೆಯ ವಿರುದ್ಧ ನಿರಂತರವಾಗಿ ಹೋರಾಡಲು ಚಳವಳಿಯಾಗಿ ದ.ಸಂ.ಸ. ಯನ್ನು ರೂಪಿಸಿದ ಕೀರ್ತಿ ಕೃಷ್ಣಪ್ಪನವರಿಗೆ ಸಲ್ಲುತ್ತದೆ. ೧೯೭೮ ರವರೆಗೆ ಕೃಷ್ಣಪ್ಪನವರ ನೇತೃತ್ವದ ದ.ಸಂ.ಸ. ಕೇವಲ ಅಸ್ಪೃಶ್ಯತೆ, ಜಾತಿ ವಿರುದ್ಧ ಚಳವಳಿಗಳನ್ನು ಮಾತ್ರ ನಡೆಸಿತು. ಆದರೆ ಇದನ್ನೇ ಮುಂದುವರೆಸಿಕೊಂಡು ಹೋಗಲು ಸಾಧ್ಯವಾಗಲಿಲ್ಲ. ಅದರ ಜೊತೆಗೆ ಭೂಹೀನರೂ, ಕೂಲಿಕಾರರೂ ಆದ ಕೆಳವರ್ಗದ ಜನರ ಮೂಲಭೂತ ಅಗತ್ಯಗಳ ಕಡೆ ಗಮನಹರಿಸಿ, ಭೂಹೋರಾಟಗಳನ್ನು, ಅತ್ಯಾಚಾರ, ದೌರ್ಜನ್ಯ, ಕೊಲೆ ಪ್ರಕರಣಗಳ ವಿರುದ್ಧ ಹಲವು ಚಳವಳಿಗಳು ಕೃಷ್ಣಪ್ಪನವರ ನೇತೃತ್ವದಲ್ಲಿ ನಡೆದಿರುವುದು ಗಮನಾರ್ಹವಾಗಿದೆ.

ಕೃಷ್ಣಪ್ಪನವರು ಸಂಘಟನೆ-ಹೋರಾಟ, ಹೋರಾಟ-ಸಂಘಟನೆ ಇವೆರಡೂ ಪರಸ್ಪರ ಬೆಸೆದುಕೊಂಡಿರುವ ಹಾಗೂ ಇವೆರಡು ಪರಿಣಾಮಕಾರಿ ಶಬ್ದಗಳು ಎಂದಿದ್ದಾರೆ. ಇದರ ಅರ್ಥವೇನೆಂದರೆ ಹೋರಾಟ ನಡೆಯುವುದು ಸಂಘಟನೆಯಿಂದ, ಸಂಘಟನೆಯಾಗುವುದು ಹೋರಾಟಕ್ಕಾಗಿ. ಅನ್ಯಾಯ, ಶೋಷಣೆ, ಅಸಮಾನತೆ ಎಲ್ಲಿರುತ್ತದೆಯೋ ಅಲ್ಲಿ ಸಂಘಟನೆ ಹೋರಾಟಗಳು ಅನಿವಾರ್ಯವಾಗುತ್ತವೆ ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ.

೪.೨ ದಲಿತ ಸಂಘರ್ಷ ಸಮಿತಿಯ ತತ್ವ ಸಿದ್ಧಾಂತ: ಕೃಷ್ಣಪ್ಪ

ಅಂಬೇಡ್ಕರ್ ವಾದಿಗಳಾದ ಕೃಷ್ಣಪ್ಪನವರು ಅಂಬೇಡ್ಕರ್ ದಲಿತರ ಉದ್ಧಾರಕ್ಕಾಗಿ ಹಾಕಿಕೊಟ್ಟ ತತ್ವಗಳನ್ನು ಮುಂದುವರಿಸಿಕೊಂಡು ಬಂದಿರುವುದು ಗಮನಾರ್ಹವಾಗಿದೆ. ಅಂಬೇಡ್ಕರ್ ತತ್ವಗಳಾದ 'ಸ್ವಾಭಿಮಾನ, ಆತ್ಮಗೌರವ, ಶಿಕ್ಷಣ, ಸಂಘಟನೆ, ಸಂಘರ್ಷ, ಪರಿವರ್ತನೆ' ಇವುಗಳನ್ನು ಅನುಸರಿಸಿ ದ.ಸಂ.ಸ. ತನ್ನ ಹೋರಾಟದ ಹಾದಿಯನ್ನು ಹಿಡಿಯಲು ಪ್ರೇರಣೆಯನ್ನು ಕೃಷ್ಣಪ್ಪನವರು ನೀಡಿದರು. ಇಂದಿಗೂ ಕೂಡ ದಲಿತ ಸಂಘಟನೆಗಳು ಈ ತತ್ವಗಳ ಮಾರ್ಗದಲ್ಲಿ ಕ್ರಿಯಾಶೀಲವಾಗಿವೆ. ಇಂಥ ತತ್ವ ಸಿದ್ಧಾಂತಗಳಿಂದ ಮಾತ್ರ ದಲಿತರ ಉದ್ಧಾರವಾಗುವುದು ಎಂದು ಕೃಷ್ಣಪ್ಪನವರ ನಂಬಿಕೆಯಾಗಿತ್ತು. ದಲಿತರಲ್ಲಿ ಸ್ವಾಭಿಮಾನ ಜಾಗೃತಗೊಂಡು ಶೋಷಣೆಯ ವಿರುದ್ಧ ಸಂಘರ್ಷ ಮಾಡುವ ಮೂಲಕ ಸಮಾನತೆಯನ್ನು, ಪರಿವರ್ತನೆಯನ್ನು ತಂದುಕೊಳ್ಳುತ್ತಾರೆ ಎಂಬುದು ಅವರ ಚಿಂತನೆಗಳಿಂದ ತಿಳಿದು ಬರುತ್ತದೆ."

ಕೃಷ್ಣಪ್ಪನವರ ನೇತೃತ್ವದಲ್ಲಿ 'ದಲಿತ ಸಂಘರ್ಷ ಸಮಿತಿ' ಪ್ರಮುಖ ಉದ್ದೇಶವೆಂದರೆ ದಲಿತ ಜನಾಂಗದ ಸಂಪೂರ್ಣ ಅಭಿವೃದ್ಧಿಗೆ ಶ್ರಮಿಸುವುದು. ದಲಿತರು ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಸಮಾನತೆಯನ್ನು ಗಳಿಸಬೇಕೆಂದು ಕೃಷ್ಣಪ್ಪನವರು ಸಂಘಟನೆಯನ್ನು ಕಟ್ಟಿ ಬೆಳಸಿದರು ಎಂದರೆ ತಪ್ಪಾಗಲಾರದು.

೪.೩ ದಲಿತ ಸಂಘರ್ಷ ಸಮಿತಿಯ ರಾಜಕೀಯ ಪ್ರವೇಶ ಮತ್ತು ಒಡಕು

ಕೃಷ್ಣಪ್ಪನವರು ಹೋರಾಟವನ್ನೇ ಮೂಲ ಮಂತ್ರವನ್ನಾಗಿಸಿಕೊಂಡು ತನ್ನ ಅಸ್ತಿತ್ವವನ್ನು ಕಂಡುಕೊಂಡ ದ.ಸಂ.ಸ. ಹೋರಾಟದ ಜೊತೆಗೆ ರಾಜಕೀಯ ರಂಗವನ್ನು ಪ್ರವೇಶಿಸಿದ್ದನ್ನು ಇಲ್ಲಿ ವಿಶ್ಲೇಷಿಸುವುದು ಸೂಕ್ತ. ದ.ಸಂ.ಸ ೧೯೮೫ ರಲ್ಲಿ ರಾಜಕೀಯ ರಂಗವನ್ನು ಪ್ರವೇಶಿಸಿತ್ತು. ಸಮಾಜವಾದಿಗಳಾದ ದೇವನೂರು ಮಹಾದೇವರು ಮತ್ತು ಕಮ್ಯುನಿಸ್ಟ್‌ವಾದಿಯಾದ ಸಿದ್ದಲಿಂಗಯ್ಯನವರು ಶೋಷಣೆ ಮಾಡುವವರ ವಿರುದ್ಧ ಹೋರಾಟವನ್ನು ಕೈಬಿಟ್ಟು ಶೋಷಣೆ ಮಾಡುವ ಜನರ ಮನಸ್ಸು ಪರಿವರ್ತನೆ ಮಾಡಿ ಸಮಾಜದಲ್ಲಿ ಹೊಂದಾಣಿಕೆ ಜೀವನ ನಡೆಸುವಂತೆ ಕರೆ ನೀಡಿ, ಮೇಲ್ಜಾತಿಯನ್ನು ಸಂತೃಪ್ತಿಗೊಳಿಸಲು ಮುಂದಾದರು. ಇವರಿಂದ ದ.ಸಂ.ಸ.ಯಲ್ಲಿ ಯಥಾಸ್ಥಿತಿವಾದ ಸಿದ್ಧಾಂತಕ್ಕೆ ನುಸುಳಿತ್ತು. ಇದು ಪ್ರಥಮಬಾರಿಗೆ ದ.ಸಂ.ಸ.ಯಲ್ಲಿ ಒಡಕು ಉಂಟಾಗಲು ಕಾರಣವಾಯಿತೆಂದು ಕೃಷ್ಣಪ್ಪನವರು ಹೇಳಿದ್ದಾರೆ.

ದ.ಸಂ.ಸ. ಮತ್ತು ರೈತಸಂಘಟನೆಗಳು ಸೇರಿ ಒಂದು ಪರ್ಯಾಯ ರಾಜಕೀಯ ಪಕ್ಷವನ್ನು ಕಟ್ಟಲು ಚರ್ಚೆಗಳು ನಡೆದಿದ್ದವು. ಆಗ ಕೃಷ್ಣಪ್ಪನವರು ರೈತ ಚಳವಳಿಯು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸದೆ ಅದು ಕೇವಲ ಶ್ರೀಮಂತ ಫ್ಯೂಡಲ್ ಜನರ ಸಂಘಟನೆಯಾಗಿದೆ ಎಂಬ ವಾದ ಮಂಡಿಸಿದರು. ಇದರಿಂದ ದ.ಸಂ.ಸ. ಈ ರೈತ ಸಂಘಟನೆಯಿಂದ ದೂರ ಉಳಿಯುವಂತೆ ಹೇಳಿರುವುದನ್ನು ಕೃಷ್ಣಪ್ಪನವರ ಚಿಂತನೆಗಳಿಂದ ತಿಳಿಯಬಹುದು. ಅವರ ೧೯೮೫ ರ ನಂತರ ದ.ಸಂ.ಸ.ಶ್ರೀಮಂತ ರೈತಸಂಘಟನೆಗಳೊಂದಿಗೆ ರಾಜಕೀಯ ಸಂಬಂಧವನ್ನು ಹೊಂದಲು ಪ್ರಾರಂಭಿಸಿದ್ದು ಅದರ ಒಡಕಿಗೆ ಕಾರಣವಾಯಿತು ಎಂದರೆ ತಪ್ಪಾಗಲಾರದು. ದೇವನೂರು ಮಹಾದೇವರು ದ.ಸಂ.ಸ. ಯ ರಾಜ್ಯ ಸಂಚಾಲಕರಾಗಿದ್ದಾಗ ಜನತಾ ಪಕ್ಷದ ರಾಮಕೃಷ್ಣ ಹೆಗಡೆ ಅವರಿಗೆ ಬೆಂಬಲ ನೀಡಿದರು. ದ.ಸಂ.ಸ. ಯ ಈ ಬೆಂಬಲದಿಂದಾಗಿ ದ.ಸಂ.ಸ.ಯಲ್ಲಿ ಒಡಕು ನಿಜವಾಗಿ ಉಂಟಾಯಿತು ಎನ್ನಬಹುದು. ದೇವನೂರರ ಈ ನಿರ್ಧಾರದಿಂದ ಚಳವಳಿಯಲ್ಲಿದ್ದ ನಾಯಕ ಮತ್ತು ಕಾರ್ಯಕರ್ತರು ಒಪ್ಪದೆ ತಮ್ಮ ಕೋಪವನ್ನು ಬಹಿರಂಗವಾಗಿ ವ್ಯಕ್ತಪಡಿಸಿದರು. ಕೃಷ್ಣಪ್ಪನವರು ಮಹಾದೇವರಿಗೆ ಪತ್ರ ಬರೆದು ತಕ್ಷಣವೇ ತಾವು ರಾಜ್ಯ ಸಂಚಾಲಕತ್ವಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು. ಅವರು ದೇವನೂರರಿಗೆ ಬರೆದ ಪತ್ರದ ಕೆಲವು ಸಾಲುಗಳನ್ನು ಇಲ್ಲಿ ತಿಳಿಸುವುದು ಸೂಕ್ತ.

> **"ದಲಿತ ಸಂಘರ್ಷ ಸಮಿತಿಯು ಮೂಲತಃ ಒಂದು ಚಳವಳಿ-ಹೋರಾಟ ಎಂದು ನಾನು ಭಾವಿಸಿದ್ದೇನೆ. ರಾಜಕಾರಣಕ್ಕೂ ಹೋರಾಟಕ್ಕೂ ಬಹಳ ದೂರ. ರಾಜಕಾರಣ ಮಾಡಹೊರಟವರು ಚಳವಳಿ-ಹೋರಾಟಗಳನ್ನು ಕೊಂದಿದ್ದಾರೆ ಎನ್ನುವುದಕ್ಕೆ ಇತಿಹಾಸ ಅಸಂಖ್ಯ ಉದಾಹರಣೆಗಳನ್ನು ಕೊಟ್ಟಿದೆ..."**

ಇವೇ ಆ ಸಾಲುಗಳಾಗಿವೆ. ಕೇವಲ ಹೋರಾಟದ ನೆಲೆಯಲ್ಲಿ ತನ್ನ ಅಸ್ತಿತ್ವ ಕಂಡುಕೊಂಡ ದ.ಸಂ.ಸ. ರಾಜಕಾರಣದೊಡನೆ ನಂಟು ಬೆಳೆಸಿಕೊಂಡೊಡನೆ ದುರ್ಬಲಗೊಳ್ಳಲು ಪ್ರಾರಂಭವಾಯಿತು ಎನ್ನುವ ತೀರ್ಮಾನಕ್ಕೆ ಬರಬಹುದು.

ರಾಜಕಾರಣ ಪ್ರವೇಶದಿಂದ ದ.ಸಂ.ಸ. ತನ್ನ ಮೂಲ ಉದ್ದೇಶವನ್ನು ಮರೆತಂತೆ - ಎನ್ನುವ ವಿಷಯದ ಅರಿವು ಕೃಷ್ಣಪ್ಪನವರಿಗಿತ್ತು. ಆದರೂ ಕೂಡ ಪ್ರಾರಂಭದಲ್ಲಿ ದ.ಸಂ.ಸ. ರಾಜಕೀಯ ಪ್ರವೇಶವನ್ನು ವಿರೋಧಿಸಿದ ಕೃಷ್ಣಪ್ಪನವರು ಆ ನಂತರದಲ್ಲಿ ಬಿ.ಎಸ್.ಪಿ.ಯನ್ನು ಬೆಂಬಲಿಸಿದರು. ಇದೊಂದು ವೈರುಧ್ಯದ ಸಂಗತಿಯೇ ಸರಿ.

ದ.ಸಂ.ಸ. ರಾಜಕೀಯ ಪ್ರವೇಶಕ್ಕಿಂತ ಮೊದಲು ದ.ಸಂ.ಸ. ಮುಖಂಡರುಗಳಲ್ಲಿ ಹೊಂದಾಣಿಕೆ ತಕ್ಕಮಟ್ಟಿಗೆ ಇತ್ತು. ಆದರೆ ಬಿ.ಎಸ್.ಪಿ. ಯೊಡನೆ ಸಂಬಂಧ ಹೊಂದಿದೊಡನೆ ದ.ಸಂ.ಸ.ಯಲ್ಲಿ ಬಿಕ್ಕಟ್ಟು ಶುರುವಾಯಿತು ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ. ಕೆಲವು ಮುಖಂಡರು ಜನತಾಪಕ್ಷಕ್ಕೆ ಇನ್ನೂ ಕೆಲವು ಮುಖಂಡರು ಬಿ.ಎಸ್.ಪಿ.ಯೊಂದಿಗೆ ಸಂಬಂಧ ಬೆಳೆಸಿಕೊಂಡರು. ಇದರ ಪರಿಣಾಮವಾಗಿ ದ.ಸಂ.ಸ.ಯು ದಿಕ್ಕು ತಪ್ಪಿತು. ದ.ಸಂ.ಸ.ಯ ಒಳಗಜಗಳಗಳಿಂದ ತನ್ನ ಮಹತ್ವ, ಕ್ರಿಯಾಶೀಲತೆಗಳನ್ನು ಕಳೆದುಕೊಂಡಿತು ಎನ್ನಬಹುದು. ಜನಸಾಮಾನ್ಯರ ದೃಷ್ಟಿಯಲ್ಲಿ `ಹಗುರ' ಎನಿಸಿತು. `ಹಾವು ಹೇಗೆ ತನ್ನ ಮೊಟ್ಟೆಯನ್ನು ತಾನೇ ತಿನ್ನುವುದೋ ಅದೇ ರೀತಿ ತಾನು ಹುಟ್ಟು ಹಾಕಿದ ಸಂಘಟನೆಯನ್ನು ಕೃಷ್ಣಪ್ಪನವರು ರಾಜಕೀಯ ಪ್ರವೇಶದಿಂದ ಒಡೆದರು' ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ.

೪.೪ ಹೋರಾಟಗಳು: ಕೃಷ್ಣಪ್ಪ

ದ.ಸಂ.ಸ. ರೂವಾರಿಯಾಗಿದ್ದವರು ಪ್ರೊ. ಬಿ. ಕೃಷ್ಣಪ್ಪನವರು. ಇವರು ತಮ್ಮ ಜೀವನದ ಸುಮಾರು ಇಪ್ಪತ್ತೈದು ವರ್ಷಗಳನ್ನು ದಲಿತರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮುನ್ನಡೆಗೆ ನಡೆಸಿದ ಹೋರಾಟಗಳಿಗಾಗಿ ಮೀಸಲಿಟ್ಟಿದ್ದಾರೆ. ದಲಿತರ ಪರವಾಗಿ ಕೃಷ್ಣಪ್ಪ ಅವರು ಸಂಘಟಿಸಿದ ಹೋರಾಟಗಳು ನೂರಾರು. ಇವರ ನೇತೃತ್ವದ ದ.ಸಂ.ಸ.

ಜನಮುಖಿಯಾಗಿ ಕ್ರಿಯಾಶೀಲವಾಗುವಂತೆ ಎಚ್ಚರವಾಗಿಸಿದ್ದನ್ನು ಅವರ ಕಾರ್ಯ ಚಟುವಟಿಕೆಗಳಿಂದ ತಿಳಿಯಬಹುದು. ಈ ಸಮಯದಲ್ಲಿ ದ.ಸಂ.ಸ. ಅಖಿಲ ಕರ್ನಾಟಕ ವ್ಯಾಪ್ತಿಯನ್ನು ಹೊಂದಿತು. ಈ ರಾಜ್ಯದಲ್ಲಿ ಬೆತ್ತಲೆ ಸೇವೆ, ದೇವದಾಸಿ ಪದ್ಧತಿಯನ್ನು ಕೊನೆಗೊಳಿಸಲು ಕೃಷ್ಣಪ್ಪನವರ ನೇತೃತ್ವದ ದ.ಸಂ.ಸ. ಹೋರಾಡಿದ್ದು ಐತಿಹಾಸಿಕ ಮಹತ್ವದ ಘಟನೆ ಎಂದರೆ ತಪ್ಪಾಗಲಾರದು. ಕಟ್ಟಾ ಅಂಬೇಡ್ಕರ್‌ವಾದಿಯಾದ ಕೃಷ್ಣಪ್ಪನವರು 'ದ.ಸಂ.ಸ.ಯ ಭೀಷ್ಮ' ಎಂದೇ ಗುರುತಿಸಲ್ಪಟ್ಟವರಾಗಿದ್ದಾರೆ.

ಕೃಷ್ಣಪ್ಪನವರು ದಲಿತರಿಗಾಗಿ ಭೂ ಹೋರಾಟಗಳನ್ನು, ದೌರ್ಜನ್ಯದ ವಿರುದ್ಧ, ಜಾತಿಪದ್ಧತಿ, ಅಸಮಾನತೆ, ಅಸ್ಪೃಶ್ಯತೆ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿ, ಮಲಹೊರುವ ಪದ್ಧತಿಗಳ ವಿರುದ್ಧ ಸಂಘಟಿತ ಹೋರಾಟಗಳನ್ನು ನಡೆಸಿದ್ದು ಗಮನಾರ್ಹ. ಹೋರಾಟಗಳಿಂದ ಕೃಷ್ಣಪ್ಪನವರು ಪ್ರಧಾನವಾಗಿ ಕಾಣಿಸಿಕೊಂಡ ವ್ಯಕ್ತಿಯಾಗಿದ್ದಾರೆ. ಅವರ ಬೇರೆ ಬೇರೆ ಹೋರಾಟಗಳಿಗೆ ಹೋಲಿಸಿದರೆ ಭೂ ಹೋರಾಟಗಳು ಪ್ರತ್ಯೇಕವಾಗಿ ನಿಲ್ಲುತ್ತವೆ. ಈ ಭೂ ಹೋರಾಟಗಳು ಸಫಲವಾಗಿವೆ ಎಂದರೆ ತಪ್ಪಾಗಲಾರದು. ಅವರು ನಡೆಸಿದ ಭೂ ಹೋರಾಟಗಳ ಫಲವಾಗಿ ದೇವರಾಜ ಅರಸು ಅವರ ಕಾಲದಲ್ಲಿ ೧೯೭೭ ರಲ್ಲಿ 'ಭೂ ಪರಭಾರೆ' ಶಾಸನ ಜಾರಿಗೊಂಡಿತ್ತು. ಇದರಿಂದ ಭೂ ಹೀನ ದಲಿತರಿಗೆ ಭೂಮಿಯು ದೊರಕಿದ್ದು ಕೃಷ್ಣಪ್ಪನವರ ಭೂ ಹೋರಾಟಗಳಿಗೆ ದೊರಕಿದ ಜಯ ಎಂದೇ ಹೇಳಬಹುದು.

ದಲಿತ ವರ್ಗದ ಭೂರಹಿತರಿಗೆ ಭೂಮಿಯನ್ನು ಒದಗಿಸಲು ಸರ್ಕಾರ ಕಾನೂನು ಮಾಡಿದೆ. ಆದರೆ ಆ ಕಾನೂನುಗಳನ್ನು ಧಿಕ್ಕರಿಸಿ ಮೇಲ್ಜಾತಿಯವರು ದಲಿತರಿಗೆ ನೀಡಿದ ಭೂಮಿಯನ್ನು ಲಪಟಾಯಿಸುತ್ತಿರುವುದು ಅವರ ದೌರ್ಜನ್ಯದ ಪ್ರತೀಕ ಎಂದರೆ ತಪ್ಪಾಗಲಾರದು. ಹಾಗಾಗಿ ಕೃಷ್ಣಪ್ಪನವರು ದಲಿತರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಕ್ಕಾಗಿಯೆ ಭೂ ಹೋರಾಟಗಳನ್ನು ಕೈಗೊಂಡರು.

ಕರ್ನಾಟಕದಲ್ಲಿ ದಲಿತರು ದರಖಾಸ್ತು, ಗೋಮಾಳ, ಕೆರೆಯಂಗಳ ಇತ್ಯಾದಿ ಭೂಮಿ ಸಾಗುವಳಿ ಮಾಡಿರುವುದು ಅತ್ಯಲ್ಪ. ಹೀಗೆ ಸಾಗುವಳಿ ಮಾಡಿದ ದಲಿತರ ಮೇಲೆ ಮೇಲ್ಜಾತಿಯ ಭೂಮಾಲೀಕರು ದಬ್ಬಾಳಿಕೆ ನಡೆಸುತ್ತಿದ್ದರು. ಅಲ್ಲದೆ ಭೂಮಿಯನ್ನು ಕಬಳಿಸುತ್ತಿದ್ದರು. ಇನ್ನೂ ಕೆಲವು ಕಡೆ ದಲಿತರ ಭೂಮಿಯನ್ನು ಒತ್ತುವರಿ ಮಾಡಿ ಸಾಗುವಳಿ ಆರಂಭಿಸಿದ್ದಾರೆ. ಇಷ್ಟೇ ಅಲ್ಲದೆ ಗೋಮಾಳ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದ ದಲಿತರಿಗೆ ಸಾಗುವಳಿ ಚೀಟಿಕೊಡದಂತೆ ಸರ್ಕಾರಿ ಅಧಿಕಾರಿಗಳ ಮೇಲೆ ಭೂಮಾಲೀಕರು ಒತ್ತಡ ಹೇರಿರುವ ಪ್ರಯತ್ನ ನಡೆಸಲಾಗಿತ್ತು. ರಾಜಕೀಯ ಬಲ ಈ ಭೂಮಾಲೀಕರಿಗೆ ದೊರೆತ್ತಿದ್ದುದರಿಂದ ಅವರು ಹೆಚ್ಚು ಪ್ರಭಾವಶಾಲಿಗಳಾಗಲು ಕಾರಣ ಎನ್ನಬಹುದು. ಇಂಥ ವಸ್ತುಸ್ಥಿತಿಯು ಕರ್ನಾಟಕದಲ್ಲಿತ್ತು. ಹಾಗಾಗಿ ಕೃಷ್ಣಪ್ಪನವರು ಲ್ಯಾಂಡ್ ಗ್ರ್ಯಾಂಟ್ ಕಾನೂನಿನ ಪ್ರಕಾರ ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಭೂಹೀನ ದಲಿತರಿಗೆ ಹಂಚಬೇಕೆಂದು ಹೋರಾಟ ಮಾಡಿದರು. ಇದರಿಂದ ಲಕ್ಷಾಂತರ ಭೂಹೀನ ದಲಿತರಿಗೆ ಭೂಮಿಯು ದೊರೆಯಲು ಸಾಧ್ಯವಾಯಿತು. ಇದು ಕೃಷ್ಣಪ್ಪನವರ ಹೋರಾಟದ ಯಶಸ್ಸು ಎಂಬುದು ಗಮನಾರ್ಹ.

ಕೃಷ್ಣಪ್ಪನವರ ನೇತೃತ್ವದಲ್ಲಿ ದ.ಸಂ.ಸ. ಯು ನಡೆಸಿದಂಥ ಪ್ರಮುಖ ಭೂ ಹೋರಾಟಗಳೆಂದರೆ ಹೊನ್ನಾಳಿ ತಾಲ್ಲೂಕಿನ ಕ್ಯಾಸಿನ ಕೆರೆ ಭೂ ಹೋರಾಟ, ೧೯೭೫ ರಲ್ಲಿ ಸಿದ್ದಲಿಪುರ ಭೂ ಹೋರಾಟ, ಧಾರವಾಡ ಜಿಲ್ಲೆಯ ದುಮ್ಮಿಹಾಳ ಭೂ ಹೋರಾಟ(೧೯೭೬), ಹಾಸನ ಜಿಲ್ಲೆಯ ಬಿದರೆ ಹೋರಾಟ(೧೯೭೬), ಚಿಕ್ಕಮಗಳೂರು ಜಿಲ್ಲೆ ಹೆಗ್ಗಡ ದೇವನ ಕೋಟೆ ತಾಲ್ಲೂಕಿನ ದೇವಲಾಪುರ ಭೂ ಹೋರಾಟ(೧೯೮೩), ಕೋಲಾರ ಜಿಲ್ಲೆಯ ನಾಗಸಂದ್ರ ಹೋರಾಟ(೧೯೮೫), ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಮಲ್ಲೇದವರ ಗುಡ್ಡ ಭೂಹೋರಾಟ (೧೯೮೫), ರಾಯಚೂರು ಜಿಲ್ಲೆ ಮೆದಕಿನಾಳ ಭೂ ಹೋರಾಟ(೧೯೮೬) – ಇತ್ಯಾದಿ. (ಹೆಚ್ಚಿನ ಮಾಹಿತಿಗಾಗಿ ನೋಡಿ ಕ.ವಿ.ವಿ.ಹಂ. ಚರಿತ್ರೆ ವಿಶ್ವಕೋಶ ಸಂಪುಟ ನಾಲ್ಕು, ಪುಟ. ೮೨೪, ೮೨೫). ಕೃಷ್ಣಪ್ಪನವರು

ನಡೆಸಿದ ಭೂ ಹೋರಾಟಗಳಲ್ಲಿ ಅತ್ಯಂತ ಮಹತ್ವವಾದ ಭೂ ಹೋರಾಟವೆಂದರೆ ಸಿದ್ದಲಿ ಪುರ ಭೂ ಹೋರಾಟ. ಕರ್ನಾಟಕದಲ್ಲಿ 'ಭೂ ಪರಭಾರ ನಿಷೇಧ ಕಾಯ್ದೆ'ಯು ಜಾರಿಗೆ ತರಲು ಪ್ರೇರಣೆ ದೊರೆತದ್ದು ಸಿದ್ದಲಿಪುರ ಭೂ ಹೋರಾಟದಿಂದಲೆ ಎಂಬುದು ಈಗ ಐತಿಹಾಸಿಕ ಘಟನೆಯಾಗಿದೆ.

ಕೃಷ್ಣಪ್ಪನವರು ನಡೆಸಿದಂಥ ಭೂ ಹೋರಾಟಗಳು ಕರ್ನಾಟಕದ ಗ್ರಾಮೀಣ ಪ್ರದೇಶದ ಫ್ಯೂಡಲ್ ವ್ಯವಸ್ಥೆಯ ಬೇರುಗಳನ್ನು ಅಲ್ಲಾಡಿಸತೊಡಗಿದ್ದವು. ಹಾಗೂ ದಲಿತ ಸಮೂಹದಲ್ಲಿ ಸ್ವಾಭಿಮಾನ ಮೂಡಿಸಿ, ದಲಿತರಿಗೆ ಸ್ವತಂತ್ರ ಆರ್ಥಿಕ ಬದುಕನ್ನು ಕಲ್ಪಿಸಿಕೊಟ್ಟವು ಎಂದರೆ ತಪ್ಪಾಗಲಾರದು.

ಕೃಷ್ಣಪ್ಪ ಅವರು ಭೂ ಹೋರಾಟಗಳನ್ನು ಅಷ್ಟೇ ಅಲ್ಲದೆ, ಮನುಷ್ಯನಿಗೆ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ನಿವೇಶನಗಳನ್ನು ದೊರಕಿಸಿಕೊಡಲು ಹೋರಾಟಗಳನ್ನು ಕೈಗೊಂಡಿದ್ದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಭದ್ರಾವತಿ ನ್ಯೂಮಾಡಲ್ ಕಾಲೋನಿ(೨೪.೧೦.೧೯೭೭)ಯ ನಿವೇಶನಗಳಿಗಾಗಿ ಹೋರಾಟವನ್ನು ಆರಂಭಿಸಿ ಯಶಸ್ವಿಯಾದರು. ಹಾಗೆಯೇ ಚಿಕ್ಕಮಗಳೂರಿನ ಟೌನ್ ಮುನಿಸಿಪಾಲಿಟಿಗೆ ಸೇರಿದ ದಲಿತ ಕಾಲೋನಿ ನಿವೇಶನ ಹೋರಾಟ, ದೇವಿ ನಗರ, ಕುರಿಪಾಳ್ಯ, ನರಸಿಂಹರಾಜ್ ಕಾಲೋನಿ, ತಗಡೂರು ಇನ್ನೂ ಮೊದಲಾದ ಪ್ರಮುಖ ನಿವೇಶನ ಹೋರಾಟಗಳನ್ನು ನಡೆಸಿ ಅಸಂಖ್ಯ ನಿವೇಶನ ರಹಿತ ದಲಿತರಿಗೆ ವಸತಿ ಸೌಕರ್ಯವನ್ನು ಹೊಂದಲು ಕೃಷ್ಣಪ್ಪನವರ ಹೋರಾಟಗಳಿಂದ ಸಾಧ್ಯವಾಯಿತು.

ಕೃಷ್ಣಪ್ಪನವರು ನಡೆಸಿದ ಭೂ ಹೋರಾಟಗಳು ಸಂಡೂರು ಭೂಹೋರಾಟಗಳು, ಕಾಗೋಡು ಭೂ ಹೋರಾಟಗಳಿಗಿಂತಲೂ ಭಿನ್ನವಾಗಿದ್ದವು. ಏಕೆಂದರೆ ಸಂಡೂರು, ಕಾಗೋಡು ಭೂ ಹೋರಾಟಗಳು ಶ್ರೀಮಂತ ರೈತರು ತಮ್ಮ ಹಿತಾಸಕ್ತಿಗಾಗಿ ನಡೆಸಿದಂಥ ಭೂ ಹೋರಾಟಗಳಾಗಿದ್ದವೇ ಹೊರತು ಜನಸಾಮಾನ್ಯರಿಗಾಗಿ ನಡೆದಂಥ ಹೋರಾಟಗಳಾಗಿರಲಿಲ್ಲ. ಆದರೆ ಕೃಷ್ಣಪ್ಪನವರ ನೇತೃತ್ವದಲ್ಲಿ ದ.ಸಂ.ಸ.ಯು ನಡೆಸಿದ ಭೂ ಹೋರಾಟಗಳು ಭೂರಹಿತ ದಲಿತರಿಗಾಗಿ ನಡೆಸಿದಂಥ ಹೋರಾಟಗಳಾಗಿದ್ದು, ದಲಿತರು ಆರ್ಥಿಕವಾಗಿ ಸಬಲರಾಗಲು ಕಾರಣವಾದ ಹೋರಾಟಗಳೆಂದು ಕರೆದರೆ ಅತಿಶಯೋಕ್ತಿಯಾಗಲಾರದು. ಆದರೆ ಭೂ ಹೋರಾಟಗಳು ತೀವ್ರವಾದಷ್ಟು ಇತರೆ ವ್ಯತಿರಿಕ್ತ ಪರಿಣಾಮಗಳು ಉಂಟಾದವು. ಉದಾಹರಣೆಗೆ ಕೊಲೆ, ಹಲ್ಲೆ, ದೌರ್ಜನ್ಯಗಳು, ಅತ್ಯಾಚಾರಗಳು ಹೆಚ್ಚಾದವು. ಇದಕ್ಕೆ ಪ್ರಮುಖ ಕಾರಣ ದಲಿತರು ತಮ್ಮ ಆತ್ಮಗೌರವ, ಸ್ವಾಭಿಮಾನವನ್ನು ಪ್ರದರ್ಶಿಸಿದ್ದರಿಂದಲೇ ಎನ್ನುವ ತೀರ್ಮಾನಕ್ಕೆ ಬರಬಹುದು. ದಲಿತರು ತಮ್ಮ ಭೂಮಿಯನ್ನು ಮೇಲ್ಜಾತಿಯವರಿಗೆ ನೀಡಲು ನಿರಾಕರಿಸಿದಾಗ ಈ ರೀತಿಯ ಪ್ರಕರಣಗಳು ಹೆಚ್ಚಾಗಿ ಸಂಭವಿಸಿವೆ. ದಲಿತರ ಮೇಲೆ ನಿರಂತರವಾಗಿ ನಡೆಯುತ್ತಿರುವ ಇಂಥ ಹಲ್ಲೆ, ಕೊಲೆ, ಅತ್ಯಾಚಾರಗಳನ್ನು ಪ್ರತಿಭಟಿಸಿದ ಕೃಷ್ಣಪ್ಪನವರು ಆಗಸ್ಟ್ ೧೫, ೧೯೮೪ ರ ದಿನವನ್ನು 'ದಲಿತರ ಹಲ್ಲೆ, ಕೊಲೆ, ಅತ್ಯಾಚಾರ, ಸಾಮಾಜಿಕ ಬಹಿಷ್ಕಾರ ವಿರೋಧ' ದಿನವನ್ನಾಗಿ ಆಚರಿಸಿದ್ದು ಗಮನಾರ್ಹ. ಎಲ್ಲಿಯವರೆಗೆ ಈ ದೇಶದಲ್ಲಿ ಶ್ರಮಜೀವಿ ದಲಿತ ವರ್ಗಕ್ಕೆ ಹೊಟ್ಟೆ ತುಂಬ ಅನ್ನ – ಮೈತುಂಬ ಬಟ್ಟೆ – ವಾಸಮಾಡಲು ಮನೆ, ಜಾಗೃತರಾಗಲು ವಿದ್ಯೆ, ದಲಿತರಿಗೆ ರಕ್ಷಣೆ ಸಿಗುವುದಿಲ್ಲವೋ ಅಲ್ಲಿಯವರೆಗೂ ಈ ದೇಶದಲ್ಲಿ ನಿಜವಾದ ಸ್ವಾತಂತ್ರ್ಯ ಸ್ಥಾಪನೆಯಾಗುವುದಿಲ್ಲ ಎಂಬುದು ಕೃಷ್ಣಪ್ಪನವರ ವಿಚಾರಧಾರೆಯಾಗಿದೆ.

ಕೃಷ್ಣಪ್ಪನವರು ದಲಿತರ ಮೇಲೆ ನಡೆಸಿದ ಹಲವಾರು ದೌರ್ಜನ್ಯಗಳು, ಕೊಲೆ ಪ್ರಕರಣಗಳು, ಅತ್ಯಾಚಾರಗಳು, ಸಾಮಾಜಿಕ ಬಹಿಷ್ಕಾರಗಳು, ಮಲಹೊರುವ ಪದ್ಧತಿ, ದೇವದಾಸಿ ಪದ್ಧತಿ, ಬೆತ್ತಲೆ ಸೇವೆ ವಿರುದ್ಧ ಹಲವು ಹೋರಾಟಗಳನ್ನು ಕೈಗೊಂಡಿದ್ದು ಗಮನಾರ್ಹವಾಗಿದೆ.

ಕೊಲೆ ಪ್ರಕರಣಗಳ ವಿರುದ್ಧದ ಹೋರಾಟಗಳಲ್ಲಿ ಅತಿ ಮುಖ್ಯವಾದವುಗಳೆಂದರೆ ಕೋಲಾರ ಜಿಲ್ಲೆಯ ಹುಣಸೇಕೋಟೆ ಶೇಷಗಿರಿಯಪ್ಪನ ಕೊಲೆ ಪ್ರಕರಣ ೧೯೮೦.[೬] ದಲಿತ ಬಾಲಕ ಸ್ವಾಮಿ ಕಗ್ಗೊಲೆ ಪ್ರಕರಣ,[೭] ಅರಕೇರಿ ಪತ್ರಸಂಗಪ್ಪನ ಕೊಲೆ ಪ್ರಕರಣ, ಹೇರೂರು ಕಂಟೆಪ್ಪನ ಕೊಲೆ ಪ್ರಕರಣ, ಹಾರೋಬನ ಹಳ್ಳಿ ದುರುಗಪ್ಪನ ಕೊಲೆ ಪ್ರಕರಣ,[೮] ಇಂಥ ಇನ್ನೂ ಹಲವಾರು ಕೊಲೆ ಪ್ರಕರಣಗಳ ವಿರುದ್ಧ ಕೃಷ್ಣಪ್ಪನವರು ಹೋರಾಟಗಳನ್ನು

ಪ್ರಾರಂಭಿಸಿ ಆರೋಪಿಗಳಿಗೆ ಶಿಕ್ಷೆ ಆಗುವಂತೆ ನೋಡಿಕೊಂಡರು. ಇನ್ನು ಮುಂದೆ ಯಾರೂ ಕೂಡ ದಲಿತರ ಮೇಲೆ ಹಲ್ಲೆ, ಕೊಲೆಗಳನ್ನು, ದೌರ್ಜನ್ಯಗಳನ್ನು ನಡೆಸಲು ಹಿಂದೇಟು ಹಾಕುವ ಹಾಗೆ ಮಾಡಿದ್ದು ಕೃಷ್ಣಪ್ಪನವರ ಹೋರಟಾಗಳು ಎಂದರೆ ತಪ್ಪಾಗಲಾರದು. ದಲಿತರ ನೋವು, ರೋಷ, ಕೆಚ್ಚು, ಆಕ್ರೋಶಗಳ ಹಿಂದಿನ ಕಾರಣಗಳನ್ನು ಸುವರ್ಣೀಯ ಮತ್ತು ಸುವರ್ಣೀಯರ ತಂತ್ರಗಾರಿಕೆಗೆ ಬಲಿಯಾದ ಹಿಂದುಳಿದ ವರ್ಗಗಳಿಗೆ ಮನವರಿಕೆ ಮಾಡಿಕೊಡುವ ಮೂಲಕ ಶೋಷಣೆಯ ವಿರುದ್ಧ ಜಾಗೃತಿ ಮೂಡಿಸಲು ಕೃಷ್ಣಪ್ಪನವರ ಹೋರಾಟ ಮತ್ತು ಚಿಂತನೆಗಳು ಅಡಿಪಾಯವಾದವು.

ಕೃಷ್ಣಪ್ಪನವರ ನೇತೃತ್ವದಲ್ಲಿ ದ.ಸಂ.ಸ. ಕೈಗೊಂಡ ಅಸ್ಪೃಶ್ಯತೆ ಮತ್ತು ಸಾಮಾಜಿಕ ಬಹಿಷ್ಕಾರಗಳ ವಿರುದ್ಧ ಸಂಘಟಿಸಿದ ಹೋರಾಟಗಳು ಅಸಂಖ್ಯವಾಗಿವೆ. ಅವುಗಳಲ್ಲಿ ಮುಖ್ಯವಾಗಿ ಅರಬಿಳಚಿ ಗ್ರಾಮ, ಬೀದರ ಜಿಲ್ಲೆಯ ಅಲಗೂಡಿನ ಗ್ರಾಮ, ಟೆಂಗಳಿಗ್ರಾಮ, ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನ ಬಟ್ಟರ ಗ್ರಾಮ (೧೯೮೩) ಮೊದಲಾದ ಗ್ರಾಮಗಳ ಸಾಮಾಜಿಕ ಬಹಿಷ್ಕಾರಗಳ ವಿರುದ್ಧ ಹೋರಾಡಿದ್ದು ಗಮನಾರ್ಹವಾಗಿದೆ. ಇಂಥ ಹೋರಾಟಗಳಿಂದಾಗಿ ದಲಿತರು ನೆಮ್ಮದಿ ಜೀವನ ನಡೆಸುವಂತೆ ಮಾಡಿದರು. ಅಲ್ಲದೆ ಬಹಿಷ್ಕಾರಗಳಂಥ ಹೇಯ ಪದ್ಧತಿಯನ್ನು ಹೇರಿದವರು ಅಪರಾಧಿಗಳೆಂದು ಪರಿಗಣಿಸಿ ಶಿಸ್ತಿನ ಕ್ರಮಕ್ಕೆ ಗುರಿಪಡಿಸಬೇಕೆಂದು ಕೃಷ್ಣಪ್ಪನವರು ಪ್ರತಿಭಟನಾ ಮೆರವಣಿಗೆ, ಧರಣಿ ಸತ್ಯಾಗ್ರಹ, ಪಿಕೆಟಿಂಗ್ ಮೊದಲಾದ ಅಹಿಂಸಾ ಅಸ್ತ್ರಗಳನ್ನು ಬಳಸಿ ಯಶಸ್ಸು ಪಡೆದರು.

೧೯೮೭ ರಲ್ಲಿ ನಡೆದ ಬೆಂಡಿಗೇರಿ ಪ್ರಕರಣದಿಂದ ಇಡೀ ದೇಶವೇ ನಾಚಿಕೆಪಟ್ಟುಕೊಳ್ಳುವ ಪರಿಸ್ಥಿತಿ ಉಂಟಾದುದನ್ನ ಗಮನಿಸಬಹುದು. ಇಲ್ಲಿ ಯಾವುದೋ ಸಣ್ಣ ತಪ್ಪಿಗಾಗಿ ಐವರು ದಲಿತ ವ್ಯಕ್ತಿಗಳಿಗೆ ಬಲವಂತವಾಗಿ ಮಲ ತಿನ್ನುವ ಶಿಕ್ಷೆ ವಿಧಿಸಲಾಯಿತು. ದಲಿತರ ಮೇಲಿನ ದೌರ್ಜನ್ಯಗಳು ಎಂದೂ ಇಷ್ಟು ಬೀಕರವಾಗಿರಲಿಲ್ಲ. ಕೃಷ್ಣಪ್ಪನವರ ನೇತೃತ್ವದಲ್ಲಿ ದ.ಸಂ.ಸ. ಈ ಪ್ರಕರಣದ ವಿರುದ್ಧ ಪ್ರತಿಭಟನೆ ಕೈಗೊಂಡಿತ್ತು. ಕೃಷ್ಣಪ್ಪನವರು ಬೆಂಡಿಗೇರಿ ಪ್ರಕರಣ ವಿರುದ್ಧ ಹೋರಾಡಿದ್ದು ಕೇವಲ ದಲಿತರಿಗಾಗಿ ಅಲ್ಲ. 'ಮಾನವ ಕುಲದ ಮನುಷ್ಯತ್ವದ ಅಳಿವು ಉಳಿವಿನ' ಕುರಿತಾಗಿ ಹೋರಾಟ ನಡೆಸಿದ್ದಾಗಿದೆ.'

ಸಮಾಜದ ಅನಿಷ್ಟ ಆಚರಣೆಗಳಿಗೆ, ಜಾತಿ, ಕ್ರೌರ್ಯಗಳಿಗೆ ಮೊದಲು ಬಲಿಯಾಗುವವರು ಮಹಿಳೆಯರು. ಅವರಲ್ಲೂ ದಲಿತ ಮಹಿಳೆಯರು ಮಾತ್ರ ಎಂದರೆ ತಪ್ಪಾಗಲಾರದು. ಅತ್ಯಾಚಾರ, ದೈವದ ಹೆಸರಿನಲ್ಲಿ ನಡೆಸುವ ಲೈಂಗಿಕ ದೌರ್ಜನ್ಯಗಳಾದ ಮುತ್ತು ಕಟ್ಟುವ, ದೇವದಾಸಿ ಪದ್ಧತಿ, ಬಸವಿ ಬಿಡುವಿಕೆ, ಬೆತ್ತಲೆ ಸೇವೆ ಇವು ಶ್ರೀಮಂತ ಭೂ ಮಾಲೀಕರು ನಡೆಸುವಂಥ ಭೀಕರ ಕೃತ್ಯಗಳಾಗಿವೆ. ದಲಿತರ ಅಜ್ಞಾನ, ಬಡತನಗಳನ್ನು ಶ್ರೀಮಂತರು ತುಂಬಾ ಚಾಣಾಕ್ಷತೆಯಿಂದ ಶೋಷಣೆ ಮಾಡಿ ಧಾರ್ಮಿಕತೆ, ಕಂದಾಚಾರಗಳ ಲೇಪನದೊಂದಿಗೆ ಲೈಂಗಿಕ ವ್ಯಭಿಚಾರ ನಡೆಸಿದ್ದಾರೆ. ಇವುಗಳ ವಿರುದ್ಧ ಕೃಷ್ಣಪ್ಪನವರು ಹಲವಾರು ಹೋರಾಟಗಳನ್ನು ನಡೆಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ೧೯೮೦ ರಲ್ಲಿ ಹುಣಸೇಕೋಟೆ ಅನಸೂಯಮ್ಮಳ ಮೇಲಿನ ಅತ್ಯಾಚಾರ ವಿರುದ್ಧ,[೧೦] ಶಿವಮೊಗ್ಗದ ಯಶೋದಮ್ಮ ಅತ್ಯಾಚಾರ ಪ್ರಕರಣದ ವಿರುದ್ಧ,[೧೧] ೧೯೮೫ ರಲ್ಲಿ ದೇವದಾಸಿ ಪದ್ಧತಿ ವಿರುದ್ಧ, ೧೯೮೫ ರಲ್ಲಿ ಬೆತ್ತಲೆ ಸೇವೆ ವಿರುದ್ಧ ಹೋರಾಡಿದ್ದು ಐತಿಹಾಸಿಕ ಮಹತ್ವ ಪಡೆದಿದೆ.

೪.೫ ಬೆತ್ತಲೆ ಸೇವೆಯ ವಿರುದ್ಧ ಹೋರಾಟ

ಕರ್ನಾಟಕದಲ್ಲಿ ಬೆತ್ತಲೆ ಸೇವೆಯ ವಿರುದ್ಧ ಹೋರಾಟ ಮಾಡಿದ ಮೊದಲಿಗರೆಂದರೆ ಪ್ರೊ. ಬಿ. ಕೃಷ್ಣಪ್ಪ ಅವರು. ಮೇಲ್ಜಾತಿಯ ಜನರು ಶತಮಾನಗಳಿಂದಲೂ ದಲಿತರಲ್ಲಿ ಮೌಢ್ಯತೆ ಪ್ರಜ್ಞೆಯನ್ನು ತುಂಬಿ, ಶೋಷಣೆ ಮಾಡುತ್ತಲೇ ಬಂದಿದ್ದಾರೆ. ಅಂಥ ಶೋಷಣೆಗಳಲ್ಲಿ ಬೆತ್ತಲೆ ಸೇವೆಯೂ ಒಂದು. ಪುರೋಹಿತಶಾಹಿ ವರ್ಗದವರು ದೈವದ ಹೆಸರಿನಲ್ಲಿ ಇಂಥ ಸಾಮಾಜಿಕ ಅನಿಷ್ಟ ಪದ್ಧತಿಯನ್ನು ಆಚರಿಸುವಂತೆ ಪ್ರೇರಣೆ ನೀಡಿದ್ದಾರೆ. ಬೆತ್ತಲೆ ಸೇವೆಯನ್ನು ಜಾತಿ ತಾರತಮ್ಯ, ಲಿಂಗ ತಾರತಮ್ಯ, ಹಿಂಸೆ, ಲೈಂಗಿಕತೆಯ ಆಧಾರದ ಮೇಲೆ ಹೇರಲ್ಪಟ್ಟ ಒಂದು

ಧಾರ್ಮಿಕ ಆಚರಣೆ ಎನ್ನಬಹುದು. ಇಂಥ ಅನಿಷ್ಟ ಆಚರಣೆಯ ವಿರುದ್ಧ ಮೊತ್ತಮೊದಲು ಧ್ವನಿ ಎತ್ತಿದವರು ಕೃಷ್ಣಪ್ಪನವರಾಗಿದ್ದಾರೆ.

ಬೆತ್ತಲೆ ಸೇವೆ ಅನಾಗರಿಕ, ಅಮಾನುಷ, ಮೃಗೀಯ ಆಚರಣೆ ಎಂದಿರುವ ಅವರು ದ.ಸಂ.ಸ. ನೇತೃತ್ವ ವಹಿಸಿಕೊಂಡು ಇದನ್ನು ತೊಡೆದುಹಾಕಲು ಹೋರಾಟ ಆರಂಭಿಸಿದರು. ಇವರ ಹೋರಾಟವು 'ಜನಜಾಗೃತಿ ಮೂಡಿಸುವ ಆಂದೋಲನವಾಗಿತ್ತು.' ಇದನ್ನು ಬಸವಣ್ಣ ಅವರ ಜಾತಿ ವಿನಾಶ ಚಳವಳಿಯ ಮುಂದುವರೆದ ಭಾಗವೆಂದೇ ಹೇಳಿದರೆ ಅತಿಶಯೋಕ್ತಿಯಾಗಲಾರದು.

ಮಹಿಳೆಯರ ಮೇಲೆ ಆಗುತ್ತಿರುವ ಅಮಾನವೀಯ ಲೈಂಗಿಕ ಶೋಷಣೆಯನ್ನು ಮುಂದುವರೆಸಬಾರದೆಂಬ ಉದ್ದೇಶದಿಂದ ಕೃಷ್ಣಪ್ಪನವರು ಈ ಹೋರಾಟವನ್ನು ಕೈಗೊಂಡರು.

ಬೆತ್ತಲೆ ಸೇವೆಯಲ್ಲಿ ಎರಡು ವಿಧ. ಮೊದಲನೆಯದಾಗಿ ಬೇವಿನ ಉಡುಗೆ, ಎರಡನೆಯದು ಗಂಧದ ಉಡುಗೆ. ದೇವರಿಗೆ ಹರಕೆ ಕಟ್ಟಿಕೊಂಡ ಸ್ತ್ರೀಯರು ತಮ್ಮ ಗುಪ್ತಾಂಗಗಳಿಗೆ ಬೇವಿನ ಸೊಪ್ಪನ್ನು ಮುಚ್ಚಿಕೊಂಡು ಮೆರವಣಿಗೆ ಹೋಗುವ ವಿಧಾನಕ್ಕೆ ಬೇವಿನ ಉಡುಗೆ ಎನ್ನಲಾಗುವುದು. ಇಂಥ ಉಡುಗೆಯನ್ನು ಒಕ್ಕಲಿಗ, ಲಿಂಗಾಯಿತ ಮೊದಲಾದ ಸುವರ್ಣೀಯರು ಧರಿಸುತ್ತಾರೆ. ಆದರೆ ಗಂಧದ ಉಡುಗೆ ಎಂದರೆ ಬೆತ್ತಲೆ ಮೆರವಣಿಗೆಯಾಗಿದೆ. ಈ ಉಡುಗೆಯನ್ನು ದಲಿತರ ಸ್ತ್ರೀಯರಿಗೆ ಮಾತ್ರ ಮೀಸಲು. ಇಂಥ ಸ್ತ್ರೀಯರು ಮುಂದೆ ದೇವದಾಸಿಯರಾಗಿ, ಜೋಗತಿಯರಾಗಿ ಪರಿವರ್ತನೆಯಾಗುತ್ತಾರೆ. ಇಂಥ ಪದ್ಧತಿಯನ್ನು ಮೇಲ್ಜಾತಿಯವರು ತಮ್ಮ ಲೈಂಗಿಕ ತೃಪ್ತಿಗಾಗಿ ಆಚರಣೆಗೆ ತಂದಿದ್ದಾರೆ ಎನ್ನುವ ತೀರ್ಮಾನಕ್ಕೆ ಬರಬಹುದು.[೨]

ಬೆತ್ತಲೆ ಸೇವೆಗೆ ವಯಸ್ಸಿನ ಮಿತಿ ಇಲ್ಲ. ಬೆತ್ತಲೆ ಸೇವೆಯನ್ನು ಗಂಡಸರೂ ಮಾಡುತ್ತಾರೆ. ಆದರೆ ಶೇಕಡಾ ತೊಂಬತ್ತು ಭಾಗ ಹೆಂಗಸರೇ ಆಗಿರುವುದು ಪುರುಷರ ಕ್ರೌರ್ಯಕ್ಕೆ ಸಾಕ್ಷಿಯಾಗಿದೆ. ಕೃಷ್ಣಪ್ಪನವರು ಚಂದ್ರಗುತ್ತಿಯಲ್ಲಿ ನಡೆಯುವ ಬೆತ್ತಲೆ ಸೇವೆಯನ್ನು ನೋಡಿ ತಮ್ಮ ಸ್ವತಃ ಅನುಭವಕ್ಕೆ ಬಂದಿರುವ ಅನಿಸಿಕೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ. 'ಬೆತ್ತಲೆ ಸೇವೆಯ ಮೆರವಣಿಗೆಯನ್ನು ನೋಡಿದರೆ ನಾವು ಇತಿಹಾಸದಲ್ಲಿ ಓದುವ ಕಾಡು ಮನುಷ್ಯರ ಅನಾಗರೀಕ ಬದುಕು ನೆನಪಿಗೆ ಬರುತ್ತದೆ' ಎಂದಿರುವುದರಲ್ಲಿ ಸತ್ಯಾಂಶವಿದೆ.

ಬೆತ್ತಲೆ ಸೇವೆ ಕೇವಲ ಚಂದ್ರಗುತ್ತಿಗೆ ಮಾತ್ರ ಸೀಮಿತವಾಗಿಲ್ಲ. ಕರ್ನಾಟಕದ ವಿಜಾಪುರ, ರಾಯಚೂರು, ಗುಲ್ಬರ್ಗಾ, ಬೆಳಗಾಂ ಮುಂತಾದ ಜಿಲ್ಲೆಗಳಲ್ಲಿ ಇಂದಿಗೂ ಆಚರಣೆಯಲ್ಲಿರುವುದು ವಿಷಾದದ ಸಂಗತಿಯಾಗಿದೆ. ಒಂದು ಪಕ್ಷ ಬೆತ್ತಲೆ ಹೋಗುವ ಹೆಣ್ಣು ಮಕ್ಕಳು ಬ್ರಾಹ್ಮಣರೋ, ಲಿಂಗಾಯಿತರೋ, ಗೌಡರೋ ಆಗಿದ್ದಿದ್ದರೆ ಇಂಥ ಪದ್ಧತಿ ಎಂದೋ ನಿಂತು ಹೋಗುತ್ತಿತ್ತು. ಆದರೆ ಅವರೆಲ್ಲ ಹೊಲೆ-ಮಾದಿಗರ ಹೆಣ್ಣುಮಕ್ಕಳಲ್ಲವೆ ಎನ್ನುವ ಅಭಿಪ್ರಾಯವೂ ವ್ಯಕ್ತವಾಗಿದೆ.

ಬೆತ್ತಲೆ ಸೇವೆಯ ವಿರುದ್ಧ ಕೃಷ್ಣಪ್ಪನವರ ಹೋರಾಟದಿಂದ ೧೯೮೬ ರಲ್ಲಿ 'ಬೆತ್ತಲೆ ಸೇವೆ ನಿಷೇಧ ಕಾಯ್ದೆ' ಜಾರಿಗೊಂಡಿತು. ಕಾನೂನುಗಳು ಯಶಸ್ವಿ ಆಗುವುದು ಜನರು ಪಾಲಿಸಿದಾಗ ಮಾತ್ರ. ಸರ್ಕಾರವು ಬೆತ್ತಲೆ ಸೇವೆ ನಿಷೇಧ ತಂದರೂ ಕೂಡ ಈ ಸೇವೆಯು ಆಚರಣೆಯಲ್ಲಿರುವುದು ನಾಗರಿಕ ಸಮಾಜವು ತಲೆತಗ್ಗಿಸುವ ಮಾತಾಗಿದೆ. ಕಾನೂನುಗಳ ಹೊರತಾಗಿ ಧಾರ್ಮಿಕ ಅಂಧಶ್ರದ್ಧೆ ಬಂಧಗಳಿಂದ ದಲಿತ ಸ್ತ್ರೀ ಮುಕ್ತಿ ಹೊಂದಲು, ಸ್ವಾಭಿಮಾನ, ಶಿಕ್ಷಣ ಇಂದು ಈ ವರ್ಗಗಳ ಮೂಲ ಉದ್ದೇಶಗಳಾಗಬೇಕು. ಈ ವರ್ಗಗಳ ಹೊಸ ಪೀಳಿಗೆಯ ತರುಣ-ತರುಣಿಯನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ರಾಂತಿಗೆ ಸಜ್ಜುಗೊಳಿಸಬೇಕು. ಹಿಂದಿನ ತಲೆಮಾರಿನ ಜೋಭದ್ರ, ಹೊಣೆಗೇಡಿತನ ಶ್ರದ್ಧೆ ನಂಬಿಕೆಗಳನ್ನು ನಾಶಮಾಡುವ ಅಗತ್ಯವಿದೆ. ಆಗ ಮಾತ್ರ ದಲಿತರು-ಹಿಂದುಳಿದವರು ಪುರೋಹಿತಶಾಹಿ ವರ್ಗವು ನಡೆಸುವ ಸಾಮಾಜಿಕ ಅಪಮಾನ ಹಾಗೂ ಆರ್ಥಿಕ ಅವಲಂಬನೆಯಿಂದ ಮುಕ್ತರಾಗಲು ಸಾಧ್ಯ. ಇದು ಇಂದಿನ ಸಾಮಾಜಿಕ ಅವಶ್ಯಕತೆ ಕೂಡಾ ಆಗಿದೆ.

ಪುಟ. ೩೨

ಹೀಗೆ ಕೃಷ್ಣಪ್ಪನವರು ರೂಪಿಸಿದ ಸಂಘಟನೆಯು ಅವರ ನಾಯಕತ್ವದಲ್ಲಿ ಸುಮಾರು ಮೂರು ದಶಕಗಳ ಕಾಲ ಕರ್ನಾಟಕದಲ್ಲಿ ಶೋಷಿತ ದಲಿತರ ಧ್ವನಿಯಾಗಿತ್ತು. ಸಂಘಟನಕಾರರಾಗಿ ಕೃಷ್ಣಪ್ಪನವರು ಕೈಗೊಂಡ ಹೋರಾಟಗಳಿಂದ ಜಾರಿಗೆ ಬಂದ ಅನೇಕ ಬದಲಾವಣೆಗಳು, ಕಾನೂನುಗಳು ಇಂದಿಗೂ ಪ್ರಸ್ತುತವಾಗಿವೆ. ಅವುಗಳಲ್ಲಿ ಮುಖ್ಯವಾಗಿ ಭೂಮಿ ಪರಭಾರೆ ನಿಷೇಧ ಕಾನೂನು(೧೯೭೭), ಬೆತ್ತಲೆ ಸೇವೆ ನಿಷೇಧ ಕಾನೂನು (೧೯೮೬). ಕೃಷ್ಣಪ್ಪ ಅವರ ಹೋರಾಟಗಳು 'ಪ್ರಜಾಪ್ರಭುತ್ವದ' ಚೌಕಟ್ಟಿನ ಒಳಗೆ ಇದ್ದವು. ಅಂದರೆ 'ಅಹಿಂಸಾತ್ಮಕ'ವಾದ ಹೋರಾಟಗಳಾಗಿವೆ. ಅವರ ಹೋರಾಟಗಳು ಜಾತಿ ವ್ಯವಸ್ಥೆ, ಬಂಡವಾಳಶಾಹಿ, ಭೂಮಾಲೀಕರ ವಿರುದ್ಧವಾಗಿದ್ದು, ಜಾತಿವ್ಯವಸ್ಥೆಯಿಂದ ನೊಂದ, ಶೋಷಣೆಗೆ ಒಳಗಾದ ದಲಿತರ ಪರವಾಗಿದ್ದವು. ದಲಿತರು ತಮ್ಮ ಏಳಿಗೆಗಾಗಿ ತಾವೇ ವಿಚಾರವಂತರಾಗಿ ಹೋರಾಟದ ಹಾದಿ ಹಿಡಿಯಬೇಕೆಂದಿರುವುದು ಅವರ ಚಿಂತನೆಗಳಿಂದ ತಿಳಿದುಬರುತ್ತದೆ. ಅಂಬೇಡ್ಕರ್ ಅವರು ದಲಿತ ಉದ್ಧಾರಕ್ಕಾಗಿ ಹಾಕಿಕೊಟ್ಟ ಸ್ವಾಭಿಮಾನ, ಆತ್ಮಗೌರವ, ಶಿಕ್ಷಣ, ಸಂಘಟನೆ, ಸಂಘರ್ಷ ತತ್ವಗಳ ಮಾರ್ಗದಲ್ಲಿಯೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಕ್ರಿಯಾಶೀಲಗೊಳ್ಳುವಂತೆ ಕೃಷ್ಣಪ್ಪನವರು ಮಾಡಿದ್ದು ಗಮನಾರ್ಹ.

ಇಡೀ ಸಮಾಜದ ಕುಹಕ, ಪ್ರತಿಪಕ್ಷದ ಭೀತಿ, ಹಣಕಾಸಿನ ತೀವ್ರ ರೀತಿಯ ಬಿಕ್ಕಟ್ಟು, ವ್ಯಕ್ತಿಗತವಾದ ನೋವು, ಸಮಸ್ಯೆಗಳ ನಡುವೆಯೂ ಕೃಷ್ಣಪ್ಪನವರ ಹೋರಾಟದ ಚೈತನ್ಯ ಕಿಂಚಿತ್ತೂ ಕಡಿಮೆಯಾಗಿರಲಿಲ್ಲ. ದ.ಸಂ.ಸ. ಅಸಮಾನತೆ, ದಬ್ಬಾಳಿಕೆ, ಅನ್ಯಾಯ, ದೌರ್ಜನ್ಯಗಳಿಲ್ಲದ ಸಮಾಜಕ್ಕಾಗಿ ಹೋರಾಟ ನಡೆಸಿದೆ. ನ್ಯಾಯ ಕೇಳುವ ದಲಿತರ ಮೇಲೆ ಗೋಲಿಬಾರ್, ಸಮಾನತೆ ಬಯಸಿದವರನ್ನು ಕೊಲೆ ಮಾಡುವುದು ಇವು ಈ ದೇಶದ ನಗ್ನ ಸತ್ಯಗಳಾಗಿವೆ. ಇವುಗಳ ಬಗ್ಗೆ ಗಂಭೀರವಾಗಿ ಆಲೋಚಿಸಿ, ಸುಸಂಘಟಿತವಾದ ಹೋರಾಟವನ್ನು ನಡೆಸುವ ಅಗತ್ಯವಿದೆ. ಈ ದಿಸೆಯಲ್ಲಿ ಕೃಷ್ಣಪ್ಪನವರ ನೇತೃತ್ವದ ದ.ಸಂ.ಸ. ಸಕ್ರಿಯವಾಗಿ ಕಾರ್ಯನಿರ್ವಹಿಸಿದೆ.

೧೯೭೪-೭೫ ರ ಕಾಲಾವಧಿಯು ದ.ಸಂ.ಸ. ಯ ಯುದ್ಧದ ಅವಧಿ ಎನ್ನಬಹುದು. ಆಗ ಕೃಷ್ಣಪ್ಪನವರು ದ.ಸಂ.ಸ. ಸಾರಥಿಯಾಗಿ ರಾಜ್ಯಾದ್ಯಂತ ದಲಿತರ ಪರವಾಗಿ ಹೋರಾಡಿ ಅವರಲ್ಲಿ ಜಾಗೃತಿ ಮೂಡಿಸಿದರು. ದ.ಸಂ.ಸ. ಹುಟ್ಟಿ ಹತ್ತುವರ್ಷಗಳ ತನಕ ಯಾವುದೇ ಗೊಂದಲ, ಒಡಕುಗಳಿರಲಿಲ್ಲ. ನಂತರ ಸಂಘಟನೆಯಲ್ಲಿ ಸಣ್ಣದಾಗಿ ಗುಮಾನಿ, ಮನಸ್ತಾಪ, ಒಳಜಗಳ ಆರಂಭವಾದವು. ಇದರಿಂದ ಸಂಘಟನೆಯು ತನ್ನ ಮಹತ್ವ ಮತ್ತು ಕ್ರಿಯಾಶೀಲತೆಗಳನ್ನು ಕಳೆದುಕೊಂಡಿತ್ತು ಎಂಬುವ ತೀರ್ಮಾನಕ್ಕೆ ಬರಬಹುದು. ರಾಜಕಾರಣ ಪ್ರವೇಶಿಸಿದ ದ.ಸಂ.ಸ. ಮುಖಂಡರು ತಮ್ಮ ಮೂಲ ಉದ್ದೇಶವನ್ನು ಗಾಳಿಗೆ ತೂರಿ, ಸ್ವಹಿತಾಸಕ್ತಿಗೆ ಮುಂದಾಗಿದ್ದು ವಿಷಾದದ ಸಂಗತಿಯಾಗಿದೆ.

ದ.ಸಂ.ಸ.ಯಲ್ಲಿ ಒಡಕು ಉಂಟಾಗಿದ್ದರಿಂದ ಅದು ಒಡೆದು ಹಲವಾರು ಶಾಖೆಗಳಾಗುವುದಕ್ಕೆ ಕಾರಣವಾಯಿತು. ಪ್ರತಿಯೊಬ್ಬ ಕಾರ್ಯಕರ್ತರು ನಾಯಕರಂತೆ ವರ್ತಿಸತೊಡಗಿದ್ದರು. ಇಂದು ದ.ಸಂ.ಸ. ನಾಯಕರು ರೋಲ್‌ಕಾಲ್ ಪ್ರಾರಂಭಿಸಿದ್ದಾರೆ. ಅಥವಾ ಅವರ ಕಾರ್ಯ ಕೇವಲ ಸರ್ಕಾರಿ ಸವಲತ್ತುಗಳನ್ನು ಪಡೆಯುವುದೊಂದೇ ಆಗಿದೆ. ದ.ಸಂ.ಸ.ಯ ಕುರಿತಾಗಿ ಟೀಕೆ-ಟಿಪ್ಪಣಿಗಳು ಏನೇ ಇರಲಿ ಕರ್ನಾಟಕದಲ್ಲಿ ದಲಿತರ ಉದ್ಧಾರಕ್ಕಾಗಿ ಅದು ಕೃಷ್ಣಪ್ಪನವರ ನೇತೃತ್ವದಲ್ಲಿ ಹೋರಾಡಿದ್ದು ಮಾತ್ರ ಗಮನಾರ್ಹವಾಗಿತ್ತು ಎಂಬ ತೀರ್ಮಾನಕ್ಕೆ ಬರಬಹುದು.

ಟಿಪ್ಪಣಿಗಳು

೧. ವಿರೂಪಾಕ್ಷಿ ಪೂಜಾರಹಳ್ಳಿ, (ಸಂ.), ದಲಿತರು ಮತ್ತು ಚರಿತ್ರೆ, ಪು. ೧೫೫,

೨. ಲಕ್ಷ್ಮಣ್ ತೆಲಗಾವಿ, ಹಿಂದುಳಿದ ವರ್ಗಗಳು ಮತ್ತು ದಲಿತ ಚಳವಳಿಗಳು, ಪು.೯೯, ಅದೇ, ೧೦೫

೩. ಅರ್ಜುನ ಗೊಳಸಂಗಿ, (ಸಂ.), ಕನ್ನಡ ದಲಿತ ಸಾಹಿತ್ಯ ಸಮಾಲೋಕನ, ಪು. ೧೧೧

೪. ಗಂಗಾರಾಂ ಚಾಂಡಾಳ, ಕರ್ನಾಟಕ ದಲಿತ ಚಳವಳಿ ಮತ್ತು ಡಾ. ಬಿ. ಆರ್. ಅಂಬೇಡ್ಕರ್, ಪು. ೪೬

೫. ಕೃಷ್ಣಪ್ಪ ಬಿ., ಪ್ರೊಫೆಸರ್ ಬಿ.ಕೆ. ಬಿಚ್ಚುನುಡಿ, ಪು. ೧೩

೬. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕರಪತ್ರ, ರಾಜ್ಯಶಾಖೆ, ಬೆಂಗಳೂರು, ೦೯.೦೨.೧೯೮೦

೭. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕರಪತ್ರ, ಮೈಸೂರು ಶಾಖೆ, ೧೫.೦೬.೧೯೮೫

೮. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕರಪತ್ರ, ಶಿವಮೊಗ್ಗ ಜಿಲ್ಲೆ ಶಾಖೆ, ೧೮.೦೬.೧೯೮೪

೯. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕರಪತ್ರ, ರಾಜ್ಯ ಸಮಿತಿ, ಬೆಂಗಳೂರು, ೨೫.೦೧.೧೯೮೮

೧೦. ರುದ್ರಪ್ಪ ಹನಗವಾಡಿ, (ಸಂ.), ಸಂಘರ್ಷ ರೂವಾರಿ ಪ್ರೊ. ಬಿ. ಕೆ., ಪು. ೭

೧೧. ಚಂದ್ರಶೇಖರ್ ಟಿ.ಆರ್., (ಸಂ.), ದಲಿತ ಅಧ್ಯಯನ, ಪು. ೪೦೩

೧೨. ಕೃಷ್ಣಪ್ಪ ಬಿ., ಚಳುವಳಿಗಳು ಮತ್ತು ಬರಹಗಳು, ಪು. ೩೫

೧೩. ಇಂದಿರಾ ಕೃಷ್ಣಪ್ಪ, (ಸಂ.), ಬಯಲು ಬಿತ್ತರೆ ಚಂದ್ರಗುತ್ತಿ, ಪು. ೪, ಅದೇ, ೭

ಅಧ್ಯಾಯ ಐದು

ರಾಜಕಾರಣ ಹಾಗೂ ಕೃಷ್ಣಪ್ಪ

೫.೧ ಬಿ.ಎಸ್.ಪಿ. ಹುಟ್ಟಿನ ಹಿನ್ನೆಲೆ

೫.೨ ಕರ್ನಾಟಕದಲ್ಲಿ ಬಿ.ಎಸ್.ಪಿ. ನೆಲೆಗೊಂಡಿದ್ದು

ದಲಿತ ಸಂಘರ್ಷ ಸಮಿತಿಯು ಅಂಬೇಡ್ಕರ್ ವಾದವನ್ನೇ ತನ್ನ ಸಿದ್ಧಾಂತವನ್ನಾಗಿ ಮಾಡಿಕೊಂಡಿದೆ. 'ದಲಿತ ಸಂಘರ್ಷ ಸಮಿತಿ' ಸ್ಥಾಪಿಸಿ ಬೆಳೆಸಿದ ಕೃಷ್ಣಪ್ಪನವರು ಅಂಬೇಡ್ಕರ್ ವಾದಿಗಳಾಗಿದ್ದು, ಅವರ ತತ್ವಸಿದ್ಧಾಂತಗಳ ಹಾದಿಯಲ್ಲಿ ನಡೆಯುವವರಾಗಿದ್ದರು. ಅಂಬೇಡ್ಕರ್ ಹೇಳುವಂತೆ, ದಲಿತರು ಬರೀ ಹೋರಾಟ ಮಾಡುವುದರಿಂದ ತಮ್ಮ ಬಿಡುಗಡೆ ಸಾಧ್ಯವಿಲ್ಲ. 'ನೀವು ರಾಜಕೀಯ ಅಧಿಕಾರವನ್ನು ಪಡೆಯಬೇಕು. ಯಾವತ್ತು ನೀವು ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳುತ್ತೀರೋ ಆವತ್ತು ನೀವು ಪರಿವರ್ತನೆಯನ್ನು ಸುಲಭವಾಗಿ ಮಾಡಬಹುದು' ಎಂದಿದ್ದಾರೆ. ಇಂಥ ಸಿದ್ಧಾಂತದಲ್ಲಿ ನಂಬಿಕೆ ಹೊಂದಿದ ಕೃಷ್ಣಪ್ಪನವರು ರಾಜಕೀಯ ಕ್ಷೇತ್ರವನ್ನು ಪ್ರವೇಶಮಾಡಲು ಕಾರಣವಾಯಿತು ಎನ್ನುವ ಅನಿಸಿಕೆ ವ್ಯಕ್ತವಾಗುತ್ತದೆ.

ದಲಿತರಲ್ಲಿ ಆತ್ಮವಿಶ್ವಾಸ ತುಂಬಿ, ದಲಿತರ ಬದುಕಿನಲ್ಲಿ ಹೊಸ ಅರ್ಥ, ಆಶಯಗಳನ್ನು ಮೂಡಿಸಿದ್ದ ಪ್ರೊ. ಬಿ. ಕೃಷ್ಣಪ್ಪನವರು, ದಲಿತರ ವಿಮೋಚನೆಗಾಗಿ ಎಪ್ಪತ್ತರ ದಶಕದಲ್ಲಿ 'ದಲಿತ ಸಂಘರ್ಷ ಸಮಿತಿ'ಯನ್ನು ಸ್ಥಾಪಿಸಿದರು. ಈ ಸಂಘಟನೆಯು ದಲಿತರ ಮತ್ತು ಶೋಷಿತರ ಹಕ್ಕುಗಳಿಗಾಗಿ ಹಲವು ಹೋರಾಟಗಳನ್ನು ಮಾಡಿದೆ. ದ.ಸಂ.ಸ. ಹೋರಾಟದ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡು 'ಒತ್ತಡ ಗುಂಪಾಗಿ'(Pressure Group) ಕಾರ್ಯನಿರ್ವಹಿಸಿತು. ಇದರಿಂದ ಅದು ಪ್ರಾರಂಭದ ದಿನಗಳಲ್ಲಿ ರಾಜಕೀಯ ರಂಗದಿಂದ ದೂರ ಉಳಿದಿದೆ. ದ.ಸಂ.ಸ. ರಾಜಕಾರಣದಿಂದ ದೂರವಿರಲು ಮುಖ್ಯಕಾರಣವೆಂದರೆ ರಾಜಕೀಯ ಪಕ್ಷಗಳು ದಲಿತರ ಏಳಿಗೆಗಾಗಿ ಶ್ರಮಿಸದೆ, ಕೇವಲ ಓಟುಗಳನ್ನು ಮಾತ್ರ ಬಯಸುತ್ತವೆ ಎಂಬುದಾಗಿದೆ. ನಂತರ ಸಂಘಟನೆಯು ಪ್ರಬಲವಾದಂತೆ ರಾಜಕೀಯ ಧುರೀಣರು ದ.ಸಂ.ಸ. ಮುಖಂಡರನ್ನು ತಮ್ಮ ಕಡೆ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾದರು ಎಂದರೆ ತಪ್ಪಾಗಲಾರದು.

ದ.ಸಂ.ಸ.ಯಲ್ಲಿ ರಾಜಕೀಯ ಪ್ರವೇಶದ ಕುರಿತು ಚರ್ಚೆಗಳು ಆರಂಭವಾದಾಗ, ಯಾವ ಪಕ್ಷದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬುದನ್ನು ನಿರ್ಧರಿಸಲು ದಂ.ಸಂ.ಸ. ರಾಜ್ಯ ಸಮಿತಿಯು ಮೂರು ಜನರನ್ನು ಒಳಗೊಂಡ ಸಮಿತಿಯನ್ನು ಆಯ್ಕೆಮಾಡಿತ್ತು. ಅದರಲ್ಲಿ ಕೃಷ್ಣಪ್ಪನವರು ಅಧ್ಯಕ್ಷರಾಗಿ, ಶ್ರೀಧರ್ ಕಲಿವೀರ, ಸಿ. ಕೆ. ಮಹೇಶ್ ಸದಸ್ಯರಾಗಿದ್ದರು. ಈ ಸಮಿತಿಯು ಅಂಬೇಡ್ಕರ್ ರಾಜಕೀಯ ಸಿದ್ಧಾಂತವನ್ನು ಮತ್ತು ದಲಿತರ ಹಿತವನ್ನು ಹೊಂದಿರುವ ಪಕ್ಷಗಳೊಂದಿಗೆ ಹೊಂದಾಣಿಕೆಗೆ ಮುಂದಾಯಿತು. ಅಂಬೇಡ್ಕರ್ ಅವರ ಸಿದ್ಧಾಂತವನ್ನು ಮೂಲವನ್ನಾಗಿಸಿಕೊಂಡಿರುವ ಎರಡು ಪಕ್ಷಗಳು ಭಾರತದಲ್ಲಿವೆ. ಒಂದು 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' (ಆರ್.ಪಿ.ಐ.) ಇನ್ನೊಂದು 'ಬಹುಜನ ಸಮಾಜ ಪಕ್ಷ' (ಬಿ.ಎಸ್.ಪಿ.) ಇವೆರಡು ಮಾತ್ರ ದಂ.ಸಂ.ಸ. ರಾಜಕೀಯ ವೇದಿಕೆ ಆಗಲಿಕ್ಕೆ ಸಾಧ್ಯ ಎನ್ನುವ ತೀರ್ಮಾನ ತೆಗೆದುಕೊಂಡರು.

ಆರ್. ಪಿ. ಐ. ಪಕ್ಷವು ದಲಿತರ ಸಮಸ್ಯೆಗಳಿಗೆ ಸ್ಪಂದಿಸದೆ ಹೆಸರು ಕೆಡಿಸಿಕೊಂಡು ಹಾಳಾಗಿಬಿಟ್ಟಿತ್ತು. ಆದರೆ ಬಿ.ಎಸ್.ಪಿ.ಯು ದೇಶದ ದೊಡ್ಡದಾದ ರಾಜ್ಯದಲ್ಲಿ ಅಧಿಕಾರ ವಹಿಸಿಕೊಂಡು ದಲಿತರ ಹಿತವನ್ನು ಹೊಂದಿದ್ದ ಪಕ್ಷವಾಗಿತ್ತು. ಹಾಗಾಗಿ ಆ ಸಮಿತಿಯವರು ಬಿ.ಎಸ್.ಪಿ. ಪಕ್ಷದಲ್ಲಿ ದಲಿತರ ಹಿತವಿದೆ ಎಂದು ಒಪ್ಪಿಕೊಂಡರು

ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ. ದಲಿತರ ಹಿತರಕ್ಷಣೆಯಿರುವ ಬಿ.ಎಸ್.ಪಿ. ಯೊಂದಿಗೆ ದ.ಸಂ.ಸ. ಹೊಂದಾಣಿಕೆ ಮಾಡಿಕೊಂಡಿತ್ತು. ಆದರೆ ದ.ಸಂ.ಸ. ಯ ಕೆಲವು ಮುಖಂಡರು ಪ್ರಾರಂಭದಲ್ಲಿ ಕೃಷ್ಣಪ್ಪನವರು ಬಿ.ಎಸ್.ಪಿ. ಜೊತೆಗಿನ ಹೊಂದಾಣಿಕೆಯನ್ನು ಒಪ್ಪಿದರೂ ಕೂಡ ನಂತರ ವಿರೋಧಿಸಿದ್ದು ಕುತೂಹಲಕರ ಸಂಗತಿ ಎನ್ನಬಹುದು.

ಕರ್ನಾಟಕದಲ್ಲಿ ಬಿ.ಎಸ್.ಪಿ. ಯ ಸ್ಥಿತಿ ಈ ರೀತಿ ಇದ್ದರೆ ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ., ದ.ಸಂ.ಸ.ಯ ಬೆಂಬಲದಿಂದ ಅಧಿಕಾರಕ್ಕೆ ಬಂತು. ಆದರೆ ಕೆಲವೇ ದಿನಗಳಲ್ಲಿ ಬಿ.ಎಸ್.ಪಿ. ಮುಲಾಯಂಸಿಂಗ್ ಅವರಿಗೆ ಕೊಟ್ಟ ಬೆಂಬಲವನ್ನು ದ.ಸಂ.ಸ. ವಾಪಾಸ್ ತೆಗೆದುಕೊಂಡಿತು. ಇದನ್ನು ಕರ್ನಾಟಕ ಪ್ರಗತಿಪಾದಿಗಳು, ಹಿಂದುಳಿದ ವರ್ಗಗಳ ನಾಯಕರು ವಿರೋಧಿಸಿದ್ದುಂಟು. ಇಂಥ ಸಂದರ್ಭದಲ್ಲಿ ಬಿ.ಎಸ್.ಪಿ. ನಾಯಕಿ ಮಾಯಾವತಿಯವರು ಉತ್ತರ ಪ್ರದೇಶದಲ್ಲಿ ಬಿ.ಜೆ.ಪಿ. ಯ ಹೊರಗಿನ ಬೆಂಬಲ ಪಡೆದು ಅಧಿಕಾರ ವಹಿಸಿಕೊಂಡರು. ಈ ಘಟನೆಯನ್ನು ಉಪಯೋಗಿಸಿಕೊಂಡ ಬಿ.ಎಸ್.ಪಿ. ವಿರೋಧದ ದ.ಸಂ.ಸ. ಮುಖಂಡರು ಬಿ.ಎಸ್.ಪಿ. ಮತೀಯ ಶಕ್ತಿಗಳೊಂದಿಗೆ ಶಾಮೀಲಾಗಿರುವುದಾಗಿ ಹೇಳುತ್ತಾ ಅಪಪ್ರಚಾರ ನಡೆಸಿದರು. ಇವರ ಉದ್ದೇಶ ಬಿ.ಎಸ್.ಪಿ. ಹೆಸರಿಗೆ ಕಳಂಕ ತರುವ ಪ್ರಯತ್ನವಾಗಿತ್ತು. ಈ ಅಪಪ್ರಚಾರವನ್ನು ನಿಜವೆಂದು ಕೆಲವು ದ.ಸಂ.ಸ. ನಾಯಕರು ಅಧಿಕೃತ ಸ್ಥಿತಿಯಲ್ಲಿ ಚರ್ಚಿಸದೆ, ವೈಯಕ್ತಿಕ ತೀರ್ಮಾನ ಕೈಗೊಂಡು ಬಿ.ಎಸ್.ಪಿ. ಜೊತೆಗಿನ ಹೊಂದಾಣಿಕೆಯನ್ನು ಕೈಬಿಟ್ಟು ಜನತಾ ಪಕ್ಷಕ್ಕೆ ಮರಳಿದ್ದರು. ಇದನ್ನು ಕೃಷ್ಣಪ್ಪನವರು ವಿರೋಧಿಸಿದ್ದು ಕಂಡುಬರುತ್ತದೆ.

ಏಕೆಂದರೆ ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆ, ಕೇಂದ್ರದಲ್ಲಿ ವಿ.ಪಿ.ಸಿಂಗ್ ಬಿ.ಜೆ.ಪಿ. ಬೆಂಬಲ ಪಡೆದು ಅಧಿಕಾರಕ್ಕೆ ಬಂದಿದ್ದರು. ದ.ಸಂ.ಸ. ನಾಯಕರು ಮಾಯಾವತಿ ಬಿ.ಜೆ.ಪಿ. ಬೆಂಬಲ ಪಡೆದು ಸರ್ಕಾರ ರಚನೆ ಮಾಡಿದ್ದು ತಪ್ಪು ಎನ್ನುವುದಾದರೆ, ಹೆಗಡೆ, ವಿ.ಪಿ.ಸಿಂಗ್ ಮಾಡಿದ್ದು ತಪ್ಪು ಎಂಬುದು ಅವರ ಚಿಂತನೆಗಳಿಂದ ತಿಳಿದುಬರುತ್ತದೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿಯು ರಾಜಕೀಯ ನಿಲುವು ತೆಗೆದುಕೊಂಡಾಗ ಕೃಷ್ಣಪ್ಪನವರು ಕಾನ್ಷೀರಾಮ್ ಅವರ ಬಿ.ಎಸ್.ಪಿ. ಯೊಡನೆ ಗುರುತಿಸಿಕೊಂಡರು. ದ.ಸಂ.ಸ. ಯಲ್ಲಿ ಎರಡು ಗುಂಪುಗಳಾಗಲು, ದ.ಸಂ.ಸ. ಒಡಕಿಗೆ ಇದು ಕಾರಣವಾಗಿದ್ದು ಈಗ ಇದು ಚರಿತ್ರೆಯಾಗಿದೆ. ೧೯೭೪ ರಲ್ಲಿ ಭದ್ರಾವತಿಯಲ್ಲಿ ಜನಿಸಿದ ದ.ಸಂ.ಸ. ಸರಿಯಾಗಿ ಇಪ್ಪತ್ತು ವರ್ಷಗಳ ನಂತರ ಅಂದರೆ ೧೯೯೪ ರಲ್ಲಿ ಬಿ.ಎಸ್.ಪಿ. ಯನ್ನು ತನ್ನ ರಾಜಕೀಯ ಪಕ್ಷವಾಗಿ ಒಪ್ಪಿಕೊಂಡಿತು. ಅನಂತರವೇ ಕಾನ್ಷೀರಾಮ್ ಕರ್ನಾಟಕದಲ್ಲಿ ಬಿ.ಎಸ್.ಪಿ.ಯನ್ನು ಅಧಿಕೃತವಾಗಿ ಸ್ಥಾಪಿಸಿದರು. ಕಾನ್ಷೀರಾಮ್ ಅವರು ಕೃಷ್ಣಪ್ಪನವರಲ್ಲಿ ರಾಷ್ಟ್ರೀಯ ನಾಯಕತ್ವದ ಗುಣಲಕ್ಷಣಗಳನ್ನು ಗುರುತಿಸಿದ್ದು ಗಮನಾರ್ಹವಾಗಿದೆ. ಅಲ್ಲದೆ ಬಿ.ಎಸ್.ಪಿ.ಯ ರಾಷ್ಟ್ರೀಯ ಸಮಿತಿ ಸದಸ್ಯರನ್ನಾಗಿ ಅವರನ್ನು ಆಯ್ಕೆ ಮಾಡಿದರು.[೬]

೫.೧ ಬಿ.ಎಸ್.ಪಿ. ಹುಟ್ಟಿನ ಹಿನ್ನೆಲೆ

ಕರ್ನಾಟಕದಲ್ಲಿ ದ.ಸಂ.ಸ. ಹುಟ್ಟಿದ ಕಾಲದಲ್ಲಿ ದೇಶದ ಇತರ ರಾಜ್ಯಗಳಲ್ಲಿ ದಲಿತ ಚಳವಳಿಗಳು ಹುಟ್ಟಿಕೊಂಡಿದ್ದವು. ೧೯೭೮ ರಲ್ಲಿ ಬಾಂಸೆಫ್ ಎಂಬ ಧರ್ಮಾತೀತ ರಾಜಕೀಯೇತರ ದಲಿತರ, ಹಿಂದುಳಿದ, ಅಲ್ಪಸಂಖ್ಯಾತ, ನೌಕರರಿಂದ ಒಕ್ಕೂಟವನ್ನು ಉತ್ತರ ಭಾರತದಲ್ಲಿ ರಚಿಸಲಾಯಿತು. ಬಹುಜನ ಸಮಾಜ ಪಕ್ಷದ ಅಂದಿನ ಅಧ್ಯಕ್ಷರಾದ ಕಾನ್ಷೀರಾಮ್ ಅವರು ೧೯೬೪ ರಲ್ಲಿ ತಮ್ಮ ಸರ್ಕಾರಿ ನೌಕರಿಯನ್ನು ಬಿಟ್ಟು, ನಂತರ ಕಟ್ಟಿದ ಆ ಒಕ್ಕೂಟವು ಅಂಬೇಡ್ಕರ್ ವಾದದ ನೆಲೆಯಲ್ಲಿ ದೇಶದೆಲ್ಲೆಡೆ ಹರಡುತ್ತ ಬಂದಿತ್ತು. 'ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿ' (ಡಿ.ಎಸ್. ೪) ನ್ನು ಕಾನ್ಷೀರಾಮ್ ರಚಿಸಿದರು. 'ಡಿ.ಎಸ್.೪'ನಲ್ಲಿ ದಲಿತರು ಶೋಷಿತರು ಮಾತ್ರ ಸದಸ್ಯರು ಮತ್ತು ನಾಯಕರಾಗಲು ಅವಕಾಶವಿತ್ತು. ಈ ಸಂಘಟನೆಯು ದಲಿತರು ಮತ್ತು

ಶೋಷಣೆಗಳ ವಿರುದ್ಧ ಹಲವಾರು ಚಳವಳಿಗಳನ್ನು ಹಮ್ಮಿಕೊಂಡಿದೆ. ಹೆಂಡ ಮತ್ತು ಸಾರಾಯಿ ವಿರೋಧಿ ಆಂದೋಲನವನ್ನು ಹಮ್ಮಿಕೊಂಡು ಭೂ ಚಳವಳಿಗೆ ಆದ್ಯತೆಯನ್ನು ನೀಡಿತು. ಗಾಂಧಿ ಮತ್ತು ಅಂಬೇಡ್ಕರ್ ನಡುವೆ ಅಂಬೇಡ್ಕರ್ ಅವರ ಆಶಯಕ್ಕೆ ವಿರುದ್ಧವಾಗಿ ದಲಿತರಿಗೆ ಮಾರಕವಾಗಿ ಜರುಗಿದ ೧೯೩೨ರ ಪೂನಾ ಒಪ್ಪಂದವನ್ನು ಡಿ.ಎಸ್.೪ ವಿರೋಧಿಸಿದೆ. ಡಿ.ಎಸ್.೪ ತನ್ನದೇ ಆದ ಪ್ರಜಾಸಂಸತ್ತು ರಚಿಸಿಕೊಂಡಿತ್ತು. ಮತ್ತು ತನ್ನ ಸರ್ಕಾರವನ್ನು ರಚಿಸುವ ಉದ್ದೇಶವನ್ನು ಜನತೆಯ ಮುಂದೆ ಪ್ರಕಟಿಸಿ, ನಂತರ ಡಿ.ಎಸ್.೪ ದೇಶದಾದ್ಯಂತ ಸೈಕಲ್ ಜಾಥಾ ಹಮ್ಮಿಕೊಂಡು ದೆಹಲಿಯಲ್ಲಿ ರಾಷ್ಟ್ರಮಟ್ಟದ ಸಮ್ಮೇಳನವನ್ನು ೧೯೪೮ ರಲ್ಲಿ ನಡೆಸಿದೆ. ತಾರೀಖು ೧೪.೪.೧೯೮೪ ರಲ್ಲಿ ಕಾನ್ಷೀರಾಮ್ ತಮ್ಮ 'ಬಹುಜನ ಸಮಾಜ ಪಕ್ಷ' ರಚಿಸಿ ಕಾಂಗ್ರೆಸ್, ಬಿ.ಜೆ.ಪಿ., ಜನತಾಪಕ್ಷ, ಕಮ್ಯುನಿಸ್ಟ್ ಪಕ್ಷಗಳಿಗೆ ಪರ್ಯಾಯವಾದ ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸಿದರು. ಕಾನ್ಷೀರಾಮ್ ಅವರ ಪ್ರಕಾರ ಬಿ.ಎಸ್.ಪಿ.ಯನ್ನು ಬಿಟ್ಟು ಉಳಿದೆಲ್ಲಾ ರಾಜಕೀಯ ಪಕ್ಷಗಳು ಹುಟ್ಟಿನಿಂದ ಬ್ರಾಹ್ಮಣರಾದವರ ಹಿಡಿತದಲ್ಲಿವೆ. ಆ ಪಕ್ಷಗಳು ಬ್ರಾಹ್ಮಣಶಾಹಿ ಸಾಮಾಜಿಕ ಪದ್ಧತಿಯನ್ನು ಬದಲಾಯಿಸುವ ಹೋರಾಟವನ್ನು ಮಾಡುವುದಿಲ್ಲ. ಈ ಹೋರಾಟವಾಗದಿದ್ದಲ್ಲಿ ದಲಿತರು ಮತ್ತು ಶೋಷಿತರಿಗೆ ಅಧಿಕಾರವೂ ಸಿಗದೆ ಹೋಗುತ್ತದೆ. ಭಾರತದಲ್ಲಿ ದಲಿತರು ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಓಟ್ ಬ್ಯಾಂಕ್ ಆಗಿದ್ದಾರೆ. ಅಲ್ಪಸಂಖ್ಯಾತರಾದ ಪುರೋಹಿತಶಾಹಿಗಳು ಬಹುಸಂಖ್ಯಾತರ ಓಟಿನಿಂದ ಗೆದ್ದು, ಅಧಿಕಾರಕ್ಕೆ ಬಂದು ಬಹುಸಂಖ್ಯಾತರ ವಿರುದ್ಧವೇ ಶಾಸನಗಳನ್ನು ಮಾಡುತ್ತವೆ. ಕಾನ್ಷೀರಾಮ್ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ಓಟುಗಳನ್ನು ಶೇಕಡಾ ಐದರಿಂದ ಪ್ರಾರಂಭಿಸಿ ಶೇಕಡಾ ಹತ್ತನ್ನು ದಾಟಿ ಓಟುಗಳನ್ನು ಬಿ.ಎಸ್.ಪಿ. ಕಡೆಗೆ ಸೆಳೆದಿದ್ದಾರೆ. ಹೀಗಾಗಿ ಅವರ ಪಕ್ಷವು ಕಾಂಗ್ರೆಸ್, ಬಿ.ಜೆ.ಪಿ.ಯನ್ನು ಧ್ವಂಸಗೊಳಿಸಿತು. ಅಂದು ಉತ್ತರ ಪ್ರದೇಶದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಮೂಲೆಗುಂಪಾಗಿ ಬಿ.ಎಸ್.ಪಿ. ಮತ್ತು ಎಸ್.ಪಿ. ಪಕ್ಷಗಳು ಸರ್ಕಾರ ರಚಿಸಿದ್ದು ಈ ದೇಶದಲ್ಲಿ 'ಜಾತ್ಯಾತೀತ' ನಿಲುವಿಗೆ ಸಿಕ್ಕಿದ ಜಯವೇ ಆಗಿದೆ ಎನ್ನುವ ಅನಿಸಿಕೆ ವ್ಯಕ್ತವಾಯಿತು.

ಉತ್ತರ ಪ್ರದೇಶದಲ್ಲಿ ಬ್ರಾಹ್ಮಣಶಾಹಿ ಸರ್ಕಾರವನ್ನು ಕೆಡವಲು ಬಿ.ಎಸ್.ಪಿ. ಯು ದಲಿತರು ಮತ್ತು ಹಿಂದುಳಿದ ಅಲ್ಪಸಂಖ್ಯಾತರ ಸಂಘಟನೆಯನ್ನು ಮಾಡಿ ಆ ಸಂಘಟನೆಯನ್ನು ಚುನಾವಣೆಯಲ್ಲಿ ಓಟುಗಳಾಗಿ ಪರಿವರ್ತಿಸಿ ಜಯಗಳಿಸಿತ್ತು. ಇಡೀ ದೇಶಕ್ಕೂ ಇದೇ ಸಂಘಟನಾ ನೀತಿಯನ್ನು, ಚುನಾವಣಾ ವಿಧಾನವನ್ನು ಅನುಸರಿಸಿ ಜಾತ್ಯಾತೀತವಾದ ಬಿ.ಎಸ್.ಪಿ. ಸರ್ಕಾರವನ್ನು ರಚಿಸುವ ಉದ್ದೇಶವನ್ನು ಹೊಂದಿದ್ದರು.

ಕರ್ನಾಟಕದಲ್ಲಿ ದ.ಸಂ.ಸ. ಆಗ ತನ್ನ ಚಳವಳಿಯನ್ನು ಸರ್ಕಾರವನ್ನಾಗಿ ರಚಿಸುವ ಜನಶಕ್ತಿಯನ್ನಾಗಿ ಪರಿವರ್ತಿಸಿಕೊಂಡು ತನ್ನದೇ ಆದ ರಾಜಕೀಯ ನಿಲುವನ್ನು ತೆಗೆದುಕೊಳ್ಳಲು ಪಕ್ವಗೊಂಡಿತ್ತು. "ಸಾಮಾಜಿಕ ನ್ಯಾಯಕ್ಕಿಂತ ನಮಗೆ ಸಾಮಾಜಿಕ ಬದಲಾವಣೆ ಮತ್ತು ಸಮಾನತೆ ಹೆಚ್ಚು ಪ್ರಸ್ತುತ" ಎಂದಿದ್ದಾರೆ ಕೃಷ್ಣಪ್ಪನವರು. ವರ್ಗನಾಶವು ಬ್ರಾಹ್ಮಣಶಾಹಿ ಸಾಮಾಜಿಕ ಪದ್ಧತಿಯ ನಾಶದಿಂದ ಮತ್ತು ದಲಿತರಿಗೆ ಶೋಷಿತರಿಗೆ ಸಿಗುವ ರಾಜಕೀಯ ಅಧಿಕಾರದಿಂದ ಆರಂಭಗೊಂಡು, ಶೋಷಣೆ ಮುಕ್ತ ಸಮಾಜವು ರಚನೆಯಾಗಬೇಕು ಎಂಬುದು ಕೃಷ್ಣಪ್ಪನವರ ವಿಚಾರಧಾರೆಯಾಗಿತ್ತು.

ಈ ಹಿನ್ನೆಲೆಯಲ್ಲಿ ದಲಿತರಿಗೆ ಇಂದಿನ ಸಂದರ್ಭದಲ್ಲಿ ಭಾರತದಲ್ಲಿ ಮತ್ತೊಂದು ಹೊಸ ಪಕ್ಷ ಕಟ್ಟುವ ವಿಚಾರವು ಒಂದು ರೀತಿಯ ಕಷ್ಟಕರವೂ, ಶ್ರಮವ್ಯಯವೂ ಆದಂಥ ಕೆಲಸವೇ ಆಗಿದೆ ಎಂದಿದ್ದಾರೆ. ಆದ್ದರಿಂದ ದ.ಸಂ.ಸ.ಯು ರಾಷ್ಟ್ರಮಟ್ಟದಲ್ಲಿ ಸ್ವತಂತ್ರವಾದ ಮತ್ತು ಅಂಬೇಡ್ಕರ್‌ವಾದದ ಗುರಿಯನ್ನು ಹೊಂದಿದ ಪಕ್ಷವಾದ ಬಿ.ಎಸ್.ಪಿ. ಯೊಂದಿಗೆ ಹೊಂದಾಣಿಕೆಯ ಅಗತ್ಯತೆಯನ್ನು ಒತ್ತಾಯಿಸಿರುವುದು ಕೃಷ್ಣಪ್ಪನವರ ಚಿಂತನೆಗಳಿಂದ ತಿಳಿದುಬರುತ್ತದೆ.

೫.೨ ಕರ್ನಾಟಕದಲ್ಲಿ ಬಿ.ಎಸ್.ಪಿ. ನೆಲೆಗೊಂಡಿದ್ದು

೧೯೯೪ ಜೂನ್‌ನಲ್ಲಿ ಕಾನ್ಷೀರಾಮ್ ಅವರು ಬಿ.ಎಸ್.ಪಿ. ರಾಜ್ಯಕಛೇರಿಯನ್ನು ಬೆಂಗಳೂರಿನಲ್ಲಿ ಉದ್ಘಾಟಿಸಿದರು. ಕೃಷ್ಣಪ್ಪ ಅವರು ಕಾನ್ಷೀರಾಮ್‌ರಿಗೆ ದ.ಸಂ.ಸ. ಹೊಂದಿರುವ ಆಶಯಗಳನ್ನು ವಿವರಿಸಿದಾಗ, ಕಾನ್ಷೀರಾಮ್ ಕೃಷ್ಣಪ್ಪ ಅವರೊಂದಿಗೆ ಚರ್ಚಿಸಿ ಕರ್ನಾಟಕದಲ್ಲಿ ಬಿ.ಎಸ್.ಪಿ. ನೆಲೆಗೊಳಿಸಿದರು. ೧೯೯೪ ಜುಲೈ ೩ ರಂದು ಬೆಂಗಳೂರಿನಲ್ಲಿ ದ.ಸಂ.ಸ. ಮತ್ತಿತರ ಸಂಘಟನೆಗಳಿಂದ ನಿಯೋಜಿಸಲ್ಪಟ್ಟ, ಬಹುಜನ ಸಮಾಜವು ಕರ್ನಾಟಕದ ರಾಜಕೀಯದಲ್ಲಿ ಹೊಸ ದಿಸೆ ತೋರುವ ನಿರೀಕ್ಷೆ ಮೂಡಿಸಿತ್ತು. ರಾಜ್ಯದ ಹಲವಾರು ಹಿಂದುಳಿದ ಜಾತಿಗಳ ಸಂಘ, ಸಂಸ್ಥೆಗಳು, ಧಾರ್ಮಿಕ ಅಲ್ಪಸಂಖ್ಯಾತ ಸಂಘ-ಸಂಸ್ಥೆಗಳು, ಜಾತ್ಯಾತೀತ ಒಲವುಳ್ಳ ಪ್ರಗತಿಪರರು ಸಾಮಾಜಿಕ ಪರಿವರ್ತನೆಯ ಈ ಆಂದೋಲನವನ್ನು ಬೆಂಬಲಿಸಿದರು. ಕರ್ನಾಟಕದಲ್ಲಿ ದೇವರಾಜ ಅರಸರ ಕಾಲದಿಂದ ಹಿಂದುಳಿದ ವರ್ಗಗಳಿಗೆ ರಾಜಕೀಯ ಅಧಿಕಾರ ಮತ್ತು ಹಾವನೂರು ಆಯೋಗದ ಮೂಲಕ ಮೀಸಲಾತಿ ಲಭಿಸಿದೆ. ಆದರೂ ಇಲ್ಲಿಯ ಹಿಂದುಳಿದ ನಾಯಕತ್ವವು ವ್ಯವಸ್ಥೆಯನ್ನು ಸಮಗ್ರವಾಗಿ ಬದಲಾಯಿಸಲು ವಿಫಲವಾಗಿದೆ. 'ಮೇಲ್ಮಟ್ಟದಲ್ಲಿ ಬಹುಜನರಿಂದಲೇ ಶಾಸಿತವಾದ ಮತ್ತು ಬದಲಾವಣೆಯ ಗುರಿಯನ್ನು ಹೊಂದಿರುವ ನಾಯಕತ್ವದಿಂದಲೇ ಮಾತ್ರ ವ್ಯವಸ್ಥೆಯಲ್ಲಿ ಬದಲಾವಣೆ ತರಬಹುದು' ಎನ್ನುವುದು ಕೃಷ್ಣಪ್ಪನವರ ಚಿಂತನೆಗಳಿಂದ ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ಬಿ.ಎಸ್.ಪಿ. ಪ್ರಭಾವ ವಿಶೇಷವಾಗಿ ಉತ್ತರ ಕರ್ನಾಟಕ, ಗುಲ್ಬರ್ಗಾ, ಬೀದರ, ರಾಯಚೂರು, ಚಿತ್ರದುರ್ಗ, ಮಂಡ್ಯ, ಕೋಲಾರ, ಶಿವಮೊಗ್ಗ ಮೊದಲಾದ ಕಡೆಗಳಲ್ಲಿದೆ. ಬಿ.ಎಸ್.ಪಿ. ಇತರ ಯಾವ ರಾಜಕೀಯ ಪಕ್ಷಗಳು ಗಮನ ನೀಡದ ಹೋರಾಟಗಳತ್ತ ಗಮನ ಹರಿಸಿತ್ತು. ಉದಾಹರಣೆಗೆ ಅಸ್ಪೃಶ್ಯತೆ, ಅನ್ಯಾಯ, ಸರಕಾರದ ದಮನಕಾರಿ ಪ್ರವೃತ್ತಿಗಳ ವಿರುದ್ಧ, ಜಾತಿನಾಶ, ಅವಕಾಶದಿಂದ ವಂಚಿತರಾದ ದಲಿತರು, ಹಿಂದುಳಿದ ಜಾತಿಗಳು ಮತ್ತು ಅಲ್ಪಸಂಖ್ಯಾತರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಅವರ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯಕ್ಕಾಗಿ ಆಂದೋಲನ ಮೊದಲಾದವು. ಇಂಥ ಸಾಮಾಜಿಕ ಪರಿವರ್ತನ ಆಂದೋಲನಗಳನ್ನು ಒಳಗೊಂಡಿತ್ತು.' ಬಿ.ಎಸ್.ಪಿ. ಯ ಈ ಆಂದೋಲನಗಳ ಮುಖ್ಯ ಉದ್ದೇಶವೇನೆಂದರೆ ದಲಿತರ ಉದ್ಧಾರವಾಗಿತ್ತು ಎನ್ನುವ ತೀರ್ಮಾನಕ್ಕೆ ಬರಬಹುದು.

ಕೃಷ್ಣಪ್ಪನವರು ಬಿ.ಎಸ್.ಪಿ. ಸಿದ್ಧಾಂತ ಮತ್ತು ಕಾರ್ಯಕ್ರಮಗಳುಳ್ಳ ಕೈಪಿಡಿಗೆ ಬರೆದ ಮುನ್ನುಡಿಯಲ್ಲಿ ವ್ಯಕ್ತಪಡಿಸಿದಂತೆ ಭಾರತೀಯ ರಾಜಕೀಯ ಇತಿಹಾಸದಲ್ಲಿ ಬಿ.ಎಸ್.ಪಿ. ಸಿದ್ಧಾಂತ ತುಳಿತಕ್ಕೊಳಗಾದ ಜನ ಸಮೂಹಕ್ಕೆ ಹೊಸ ಆಯಾಮವನ್ನು ಒದಗಿಸಿಕೊಟ್ಟಿದೆ ಎಂದಿದ್ದಾರೆ. ೧೯೯೭ರ ಮಾರ್ಚ್‌ನಲ್ಲಿ ಮೈಸೂರಿನ ಸಭೆಯೊಂದರ ಭಾಷಣದಲ್ಲಿ

> **"ಇಪ್ಪತ್ತು ವರ್ಷಗಳ ಹಿಂದೆ ನಾನು ಆರಂಭಿಸಿದ ದಲಿತ ಚಳವಳಿಯ ನಾಯಕರು ಇಂದು ಆಳುವ ಪಕ್ಷಗಳ ಮನೆ ಬಾಗಿಲಿನಲ್ಲಿ ಭಿಕ್ಷೆ ಬೇಡುತ್ತಾ ನಿಂತಿದ್ದಾರೆ. ಆದರೆ ಹದಿಮೂರು ವರ್ಷಗಳ ಹಿಂದೆ ಬಿ.ಎಸ್.ಪಿ. ಪಕ್ಷವನ್ನು ಕಟ್ಟಿದ ಕಾನ್ಷೀರಾಮ್ ಅವರು ಭಾರತದ ಅತಿ ದೊಡ್ಡ ರಾಜ್ಯದಲ್ಲಿ ಸರ್ಕಾರ ರಚಿಸಿ ಮತ್ತು ಇಡೀ ದಲಿತ ಸಮೂಹದ ನಡುವೆ ಸ್ವಾಭಿಮಾನವನ್ನು ತುಂಬಿದರು. ಮತ್ತು ನಾಳೆ ಈ ನಾಡನ್ನು ಆಳುವ ಕನಸುಗಳನ್ನು ನಮಗೆ ಕೊಟ್ಟಿದ್ದಾರೆ".**

ಎನ್ನುವ ಅನಿಸಿಕೆಯನ್ನು ವ್ಯಕ್ತಪಡಿಸಿರುವುದು ಗಮನಾರ್ಹ. ಕೃಷ್ಣಪ್ಪನವರಿಗೆ ಬಿ.ಎಸ್.ಪಿ. ಪಕ್ಷದ ಬಗೆಗೆ ಇರುವಂಥ ಒಲವು ಇದರಿಂದ ವ್ಯಕ್ತವಾಗುತ್ತದೆ.

ಕೃಷ್ಣಪ್ಪ ಅವರು ೧೯೯೭ ಏಪ್ರಿಲ್ ೨೭ ರಂದು ದಲಿತ ಸಂಘಟನೆಗಳು ಮತ್ತು ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳು ರಾಜಕೀಯವಾಗಿ ಒಂದಾಗಿ, ಸ್ವತಂತ್ರ ರಾಜಕೀಯ ಶಕ್ತಿಯಾಗಿ ಅಧಿಕಾರವನ್ನು ಹಿಡಿಯಬೇಕೆಂದು ಕರೆನೀಡಿದರು. ಈ ಕರೆಯ ಪಾಠವನ್ನು ಇಲ್ಲಿ ಗಮನಿಸುವ ಜರೂರು ಇದೆ.

> "ಕಳೆದ ೨೫ ವರ್ಷಗಳಿಂದ ಕರ್ನಾಟಕದ ನೆಲದಲ್ಲಿ ಚಳವಳಿಯನ್ನು ಮಾಡುತ್ತ ನಾವು ಸಾಧಿಸಿದ್ದು ಅತ್ಯಲ್ಪ. ನಮ್ಮ ಸಮಸ್ಯೆಗಳು ಹೆಚ್ಚು ರಾಜಕೀಯ ಅಧಿಕಾರ ಮೂಲವಾಗಿದ್ದು, ನಾವು ಸ್ವತಂತ್ರ ರಾಜಕೀಯ ಶಕ್ತಿಯಾಗಬೇಕಾದ ಅನಿವಾರ್ಯತೆ ಇದೆ. ಅದಕ್ಕಾಗಿ ನಾವು ಈಗಾಗಲೆ ಬಿ.ಎಸ್.ಪಿ. ಯನ್ನು ರಾಜಕೀಯ ಶಕ್ತಿಯನ್ನಾಗಿ ಒಪ್ಪಿಕೊಂಡಿರುತ್ತೇವೆ. ಇದರ ಮೇಲೆ ಚರ್ಚೆ ಮಾಡುವ ಅಗತ್ಯವಿಲ್ಲ. ನಮ್ಮ ಸಂಘಟನೆಗೆ ಮತ್ತು ಅವು ಪ್ರತಿಬಿಂಬಿಸುತ್ತಿರುವ ಆಶಯಗಳು ಅಂಬೇಡ್ಕರ್ ವಿಚಾರಗಳೇ ಆಗಿರುವುದರಿಂದ ನನಗೆ ಇಂದು ಅಂಬೇಡ್ಕರ್ ವಾದ, ವಿಚಾರಗಳು ಅತ್ಯಂತ ಜರೂರು, ಅನಿವಾರ್ಯವೂ ಆಗಿರುತ್ತದೆ. ಈ ಹಾದಿಯಲ್ಲಿ ನಾವು ಹೋಗಬೇಕಾಗಿದೆ. ಇದುವರೆಗೂ ಮಾರ್ಕ್ಸ್, ಲೋಹಿಯಾ, ಗಾಂಧಿ, ಮೊದಲಾದವರ ವಿಚಾರ ಮಾಡುತ್ತಾ ನಾವು ಗೊಂದಲದಲ್ಲಿ ಬಿದ್ದು, ನಮ್ಮ ಜನರನ್ನು ಗೊಂದಲಕ್ಕೆ ತಳ್ಳಿದ್ದೇವೆ. ಆದ್ದರಿಂದ ಅಂಬೇಡ್ಕರ್ ವಿಚಾರದ ಅಡಿಯಲ್ಲಿ ಸಂಘಟಿತರಾಗಿ ರಾಜಕೀಯ ಶಕ್ತಿಯಾಗಬೇಕಾಗಿದೆ. ಇದನ್ನು ನಾವು ಒಪ್ಪಿ ಆ ಹಾದಿಯಲ್ಲಿ ಸಂಘಟನೆಯನ್ನು ಮಾಡುತ್ತಿದ್ದೇವೆ. ದಲಿತರ ಬಿಡುಗಡೆಗೆ ಇದು ಹೊರತು ಮತ್ತಾವ ಮಾರ್ಗವಿಲ್ಲ. ಇದು ಎರಡೂವರೆ ದಶಕಗಳ ನಮ್ಮ ಅನುಭವದ ಮಾತಾಗಿದೆ."

ಕೃಷ್ಣಪ್ಪ ಅವರು ಬಿ.ಎಸ್.ಪಿ.ಯನ್ನು ದಲಿತರ ರಾಜಕೀಯ ಸಂಘಟನೆಯಾಗಿಸಲು ಸಂಕಲ್ಪಿಸಿದ್ದು ಅವರ ಈ ಮೇಲಿನ ಮಾತುಗಳಿಂದ ಸ್ಪಷ್ಟಗೊಳ್ಳುತ್ತದೆ.

ಅಂಬೇಡ್ಕರ್ ಚಿಂತನೆಗಳ ಬೆಳಕಿನಲ್ಲಿ ದ.ಸಂ.ಸ. ಮತ್ತು ಬಿ.ಎಸ್.ಪಿ. ಗಳ ನಡುವಣ ಸಂಬಂಧವನ್ನು ಕುರಿತು ವಿಶ್ಲೇಷಿಸುವ ಜರೂರು ಇದೆ. ದ.ಸಂ.ಸ. ತನ್ನ ರಾಜಕೀಯ ಆಯ್ಕೆಯನ್ನಾಗಿ ಒಪ್ಪಿಕೊಂಡಿರುವುದು ಸರಿಯಾಗಿದೆ ಎನ್ನಬಹುದು. ಬಿ.ಎಸ್.ಪಿ.ಯು ದ.ಸಂ.ಸ.ದ ಸ್ವಾಭಾವಿಕ ಆಯ್ಕೆಯೇ ಆಗಿದೆ. ಏಕೆಂದರೆ ಅಂಬೇಡ್ಕರ್ ಹೇಳಿದ ಸಂಘರ್ಷ ಮತ್ತು ರಾಜಕೀಯ ಅಧಿಕಾರ ಹಿಡಿಯಲು ಮಾರ್ಗಗಳೆರಡನ್ನು ಬಿ.ಎಸ್.ಪಿ. ಹೊಂದಿದೆ ಎನ್ನುವ ತೀರ್ಮಾನಕ್ಕೆ ಬರಬಹುದು.

ಕರ್ನಾಟಕದಲ್ಲಿ ಬಹುಜನ ಸಮಾಜ ಪಕ್ಷವನ್ನು ಬೆಳೆಸಿದಂಥ ಕೀರ್ತಿ ಕೃಷ್ಣಪ್ಪ ಅವರಿಗೆ ಸಲ್ಲುತ್ತದೆ. ದ.ಸಂ.ಸ. ಯನ್ನು ಉಳಿಸಿಕೊಂಡೇ ಬಿ.ಎಸ್.ಪಿ.ಯನ್ನು ರಾಜ್ಯದಲ್ಲಿ ಕಟ್ಟುವ ಬಗೆಗೆ ಕೃಷ್ಣಪ್ಪನವರು ಹೇಳಿರುವುದುಂಟು. ಉತ್ತರ ಭಾರತದಲ್ಲಿ ೧೯೮೪ ರಲ್ಲಿ ಆರಂಭವಾದ ಬಿ.ಎಸ್.ಪಿ. ಅಲ್ಲಿ ಬೇಗನೆ ಬೆಳೆದು ನಿಂತಿತು. ಆದರೆ ಕರ್ನಾಟಕದಲ್ಲಿ ಅಷ್ಟೊಂದು ಯಶಸ್ವಿಯಾಗಲಿಲ್ಲ. ಆದರೂ ಬೆಳೆಯುವ ರೀತಿಯಲ್ಲಿ ಕೃಷ್ಣಪ್ಪನವರು ಶ್ರಮಿಸಿದ್ದು ಗಮನಾರ್ಹ.

ಕರ್ನಾಟಕದಲ್ಲಿ ಬಿ.ಎಸ್.ಪಿ. ದಲಿತರ ರಾಜಕೀಯ ಆಯ್ಕೆಯಾಗಿರುವುದೇ ಎಂಬುದಿನ್ನೂ ಇತ್ಯರ್ಥವಾಗಬೇಕಿದೆ. ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಗಳ ಫಲಿತಾಂಶಗಳನ್ನು ಗಮನಿಸಿದರೆ ಬಿ.ಎಸ್.ಪಿ. ಎಲ್ಲಾ ದಲಿತರನ್ನು ಮತ್ತು ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ ಪಕ್ಷವಾಗಿ ಬೆಳೆದಿಲ್ಲದಿರುವುದು ಸ್ಪಷ್ಟ. ಈ ಪಕ್ಷವು ಕರ್ನಾಟಕದಲ್ಲಿ ಯಶಸ್ಸು ಕಾಣದೆ ಇರಲು ಕಾರಣಗಳನ್ನು ಪಟ್ಟಿ ಮಾಡಬಹುದಾದರೆ ದ.ಸಂ.ಸ. ಸುಮಾರು ಇಪ್ಪತ್ತು ವರ್ಷಗಳಿಂದ ಮೇಲ್ಜಾತಿಯವರ ವಿರುದ್ಧ ಹೋರಾಟ ಮಾಡಿದ್ದು, ರಾಜ್ಯಮಟ್ಟದಲ್ಲಿ ಬಿ.ಎಸ್.ಪಿ.ಯು ಇನ್ನೂ ಸರಿಯಾಗಿ ಸಂಘಟನೆಗೊಂಡಿಲ್ಲ. ಪರಿಶಿಷ್ಟ ಜಾತಿ, ಉಪಜಾತಿಗಳ ಮಧ್ಯೆ ಸಮೀಕರಣ ಇಲ್ಲದಿರುವುದು, ಸಾಕಷ್ಟು ಹಣದ ಕೊರತೆ, ನಿರೀಕ್ಷೆ ಮೀರಿ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸಿದ್ದು ಇತ್ಯಾದಿ. ಮುಖ್ಯವಾಗಿ ಇಂಥ ಕಾರಣಗಳಿಂದಾಗಿ ಕೃಷ್ಣಪ್ಪನವರು ಸಹ ಬಿ.ಎಸ್.ಪಿ. ಯಿಂದ ಸ್ಪರ್ಧಿಸಿ ಸೋತರು ಎನ್ನುವ ತೀರ್ಮಾನಕ್ಕೆ

ಬರಬಹುದು. ನಂತರ ಕೃಷ್ಣಪ್ಪನವರು ೧೯೯೧ ರಲ್ಲಿ 'ಜನತಾದಳ'ದೊಂದಿಗೆ ಹೊಂದಾಣಿಕೆ ಮಾಡಿಕೊಂಡರು. ಜನತಾದಳ, ಸಮಾಜವಾದಿ ಜನತಾ ಪಕ್ಷ, ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಮಿತ್ರ ಪಕ್ಷಗಳು ಅವರಿಗೆ ಬೆಂಬಲ ನೀಡಿದ್ದುಂಟು. ಜನತಾ ಪಕ್ಷ ಅಥವಾ ಜನತಾದಳದವರು ಹಲವು ಸಂದರ್ಭದಲ್ಲಿ ಕೃಷ್ಣಪ್ಪನವರನ್ನು ವಿರೋಧಿಸಿದ್ದರು. ಈಗ ಹಳೆಯದನ್ನು ಮರೆತು ಕೃಷ್ಣಪ್ಪನವರಿಗೆ ಬೆಂಬಲ ನೀಡಲಾಗಿತ್ತು. ಈ ಬೆಂಬಲದಿಂದಾಗಿ ಕೃಷ್ಣಪ್ಪನವರು ಕೋಲಾರ ಮೀಸಲು ಕ್ಷೇತ್ರದ ಜನತಾದಳ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು (೧೯೯೧). ಚುನಾವಣಾ ಚಿಹ್ನೆಯಾಗಿ 'ಚಕ್ರ'ವನ್ನು ಹೊಂದಿದ್ದರು. ಕೃಷ್ಣಪ್ಪ ಅವರಿಗೆ ಬೆಂಬಲಿಸುವುದಕ್ಕಾಗಿ ಜನತಾದಳ ಅಧ್ಯಕ್ಷ ಕೃಷ್ಣಾರೆಡ್ಡಿ, ಜನತಾಪಕ್ಷದ ಸಿ. ಬೈರೇಗೌಡ, ಪರಿಷತ್ ಸದಸ್ಯ ವಿ.ಆರ್. ಸುದರ್ಶನ್ ಇವರೆಲ್ಲರು ಪತ್ರಿಕಾಗೋಷ್ಠಿಯನ್ನು ಕರೆದು, ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಬೆಂಬಲ ನೀಡಲು ಜನತಾದಳ ಅಭ್ಯರ್ಥಿ ಕೃಷ್ಣಪ್ಪನವರಿಗೆ ಮತ ನೀಡಿ ಎಂದು ಕೋರಿರುವುದನ್ನು ನಾವು ಗಮನಿಸಬಹುದು. ಆದರೆ ಭಾಜಪ, ಕಾಂಗ್ರೆಸ್ ವ್ಯಾಪಕ ಮತಪ್ರಚಾರ ಮಾಡಿ ಕೃಷ್ಣಪ್ಪನವರನ್ನು ಸೋಲಿಸಬೇಕೆಂದು ಪ್ರಯತ್ನ ನಡೆಸಿದವು. ಕೃಷ್ಣಪ್ಪ ಅವರಿಗೆ ಕೋಲಾರ ಕ್ಷೇತ್ರದ ಬಹುಸಂಖ್ಯೆಯ ದಲಿತರ ಬೆಂಬಲ ದೊರಕಬಹುದೆಂಬ ಅನುಮಾನ ಇದ್ದುದರಿಂದ ಭಾಜಪ, ಕಾಂಗ್ರೆಸ್ ವ್ಯಾಪಕ ಮತಪ್ರಚಾರ ನಡೆಸಿತ್ತು ಎನ್ನುವ ಅನಿಸಿಕೆ ವ್ಯಕ್ತವಾಗುತ್ತದೆ.

ಕೃಷ್ಣಪ್ಪನವರು ಕೋಲಾರ ಮೀಸಲು ಕ್ಷೇತ್ರದ ಜನತಾದಳ ಅಭ್ಯರ್ಥಿಯಾಗಿ ಸ್ಪರ್ಧಿಸುವಾಗ 'ಪ್ರಜಾವಾಣಿ' ಸಂದರ್ಶನ ಮಾಡಿತ್ತು. ಈ ಸಂದರ್ಶನದಲ್ಲಿ ಕೃಷ್ಣಪ್ಪನವರು ಯಾವ ಕಾರಣಕ್ಕಾಗಿ ಜನತಾದಳದೊಂದಿಗೆ ಹೊಂದಾಣಿಕೆ ಮಾಡಿಕೊಂಡರು ಎಂಬುದನ್ನು ಸ್ಪಷ್ಟಪಡಿಸಿದ್ದರು. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚಳವಳಿ, ಹೋರಾಟಗಳಿಂದ ಕ್ರಾಂತಿ ಮಾಡುವುದು ಸಾಧ್ಯವಿಲ್ಲ. ರಾಜಕೀಯ ಅಧಿಕಾರದಿಂದ ಮಾತ್ರ ಬದಲಾವಣೆ ಸಾಧ್ಯ ಎಂದಿದ್ದಾರೆ. ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿರುವಂತೆ ಹಲವಾರು ದಲಿತ ಮುಖಂಡರು ಅಧಿಕಾರ ಪಡೆಸಿಕೊಂಡರೂ ಕೂಡ ದಲಿತರ ಸಾಮಾಜಿಕ ಆರ್ಥಿಕ ಸ್ಥಿತಿಗಳಲ್ಲಿ ನಿರೀಕ್ಷಿಸಿದಷ್ಟು ಬದಲಾವಣೆಯಾಗಿಲ್ಲ ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ದ.ಸಂ.ಸ. ಈಗ ಚುನಾವಣೆಯಲ್ಲಿ ಭಾಗವಹಿಸಲು ನಿರ್ಧರಿಸಿದೆ. ದ.ಸಂ.ಸ. ಜನತಾದಳದೊಂದಿಗೆ ಚುನಾವಣೆ ಹೊಂದಾಣಿಕೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಕೋಲಾರ ಕ್ಷೇತ್ರದಲ್ಲಿ ಜನತಾದಳ ಹೆಸರು ಮತ್ತು ಚಿಹ್ನೆಯ ಮೇಲೆ ಸ್ಪರ್ಧಿಸಲಾಗುತ್ತಿದೆ ಎಂದಿದ್ದಾರೆ. ದ.ಸಂ.ಸ. ರಾಜಕೀಯ ಪ್ರವೇಶಿಸಿದ್ದು ದಿಢೀರ್ ನಿರ್ಧಾರವಲ್ಲ. ಅದು ೧೯೮೫ ರ ವಿಧಾನಸಭಾ ಚುನಾವಣೆಯ ಸಂದರ್ಭದಿಂದಲೆ ಜನತಾಪಕ್ಷಕ್ಕೆ ಬೆಂಬಲ ನೀಡಿದೆ. ೧೯೮೯ ರ ಲೋಕಸಭಾ, ವಿಧಾನಸಭಾ ಚುನಾವಣೆಯಲ್ಲಿ ಜನತಾದಳದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಯತ್ನಿಸಿ ದ.ಸಂ.ಸ. ವಿಫಲವಾಯಿತು. ಕೆಲವು ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿ ಪರಾಭವಗೊಂಡಿತು. ಇದಕ್ಕೆ ಮುಖ್ಯ ಕಾರಣ ನಾವು ರಾಷ್ಟ್ರರಾಜಕಾರಣದ ಮುಖ್ಯವಾಹಿನಿಯಲ್ಲಿ ಸೇರದೆ, ಪ್ರತ್ಯೇಕ ಗುಂಪಾಗಿ ಸ್ಪರ್ಧಿಸಿದ್ದೇ ಕಾರಣವೆಂದು ವಿವರಿಸಿದ್ದಾರೆ.[೪] ಈ ಕಾರಣಕ್ಕಾಗಿ ಕೃಷ್ಣಪ್ಪನವರು ಜನತಾದಳದೊಂದಿಗೆ ಹೊಂದಾಣಿಕೆ ಮಾಡಿದ್ದರು ಎನ್ನುವ ತೀರ್ಮಾನಕ್ಕೆ ಬರಬಹುದು. ಕೃಷ್ಣಪ್ಪನವರು ಜನತಾದಳದ ಅಭ್ಯರ್ಥಿಯಾಗಿ ಹತ್ತನೆಯ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದನ್ನು ಅಂದಿನ ದ.ಸಂ.ಸ. ಸಂಯೋಜಕ ಆರ್. ಅಶ್ವತ್ಥ್ ಅಂತ್ಯಜ ಅವರು ಟೀಕಿಸಿದರು. ಸಾಮಾಜಿಕ ಆಂದೋಲನದ ಸ್ಫೂರ್ತಿಯಡಿ ದಲಿತರು ಸಂಘಟಿತರಾಗಬೇಕು. ಹೋರಾಟದಿಂದಲೇ ಸಮಾನತೆಯನ್ನು ಪಡೆಯಬೇಕು ಎನ್ನುವುದು ಅಂಬೇಡ್ಕರ್ ಅವರ ನಿಲುವಾಗಿತ್ತು. ಇದನ್ನು ತಳ್ಳಿಹಾಕಿ ಚುನಾವಣೆಯಲ್ಲಿ ಜನತಾದಳ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಬಿ. ಕೆ. ಅವರ ತೀರ್ಮಾನವನ್ನು ಟೀಕಿಸಲಾಯಿತು. 'ರಾಜಕಾರಣಕ್ಕೂ, ಹೋರಾಟಕ್ಕೂ ಬಹಳ ದೂರ. ದ.ಸಂ.ಸ. ಮೂಲತಃ ಒಂದು ಚಳವಳಿ ಮತ್ತು ಹೋರಾಟವಾಗಿದೆ. ರಾಜಕಾರಣಿಗಳು ಚಳವಳಿ, ಹೋರಾಟಗಳನ್ನು ಕೊಂದಿದ್ದಾರೆಂದು ೧೯೮೭ ರಲ್ಲಿ ಪತ್ರಿಕೆಗಳಲ್ಲಿ ಬಿ. ಕೆ. ಅವರೇ ಹೇಳಿಕೆ ನೀಡಿದ್ದರು. ಕೃಷ್ಣಪ್ಪ ಅವರು ಇಂದು ಚುನಾವಣೆಯಲ್ಲಿ ಸ್ಪರ್ಧಿಸಿರುವುದು ಹಾಸ್ಯಾಸ್ಪದ'ವೆಂದು ಅಶ್ವತ್ಥ್ ಟೀಕಿಸಿದ್ದಾರೆ.[೫] ಕೃಷ್ಣಪ್ಪನವರು 'ದಲಿತ ಸಂಘರ್ಷ ಸಮಿತಿಯ ಬೆಂಬಲವಿಲ್ಲದೆ ಜನತಾದಳದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದರು. ಆದರೆ ಕೆಲವು ಕಡೆಗಳಲ್ಲಿ ಕೃಷ್ಣಪ್ಪ ಅವರು ದ.ಸಂ.ಸ.

ತಮಗೆ ಬೆಂಬಲ ನೀಡಿದೆ ಎಂದು ಹೇಳಿಕೆಯನ್ನು ನೀಡಿದ್ದರು. ಇದರಿಂದ ಅಂದಿನ ದ.ಸಂ.ಸ. ಜಿಲ್ಲಾ ಸಂಘಟನಾ ಸಂಯೋಜಕ ನಾರಾಯಣ ಸ್ವಾಮಿ ಅವರು ದ.ಸಂ.ಸ. ಕೃಷ್ಣಪ್ಪ ಅವರಿಗೆ ಬೆಂಬಲಿಸಿಲ್ಲ, ಯಾವುದೇ ಕಾರಣಕ್ಕೂ ಕೃಷ್ಣಪ್ಪ ಅವರು ದ.ಸಂ.ಸ. ಹೆಸರನ್ನು ಬಳಸಿಕೊಳ್ಳಬಾರದು' ಎಂದು ಸ್ಪಷ್ಟಪಡಿಸಿದರು. ಕೃಷ್ಣಪ್ಪನವರು ದ.ಸಂ.ಸ. ಬಿಟ್ಟು ಪ್ರತ್ಯೇಕವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದು ಅಸಾಧ್ಯವೆಂದು ತಿಳಿದು ಈ ರೀತಿಯ ತಪ್ಪು ಹೇಳಿಕೆಗಳನ್ನು ನೀಡಿದ್ದರು ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ.

ಚುನಾವಣಾ ಕಣದಲ್ಲಿ ಮೂವತ್ತೆರಡು ಅಭ್ಯರ್ಥಿಗಳಿದ್ದರು. ಕೋಲಾರ ಮೀಸಲು ಕ್ಷೇತ್ರದಲ್ಲಿ ೧೬ ಮಂದಿ, ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ೧೨ ಉಮೇದುವಾರರು ಚುನಾವಣೆಗೆ ಸ್ಪರ್ಧಿಸಿದ್ದರು. ಕೋಲಾರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಕೆ. ಹೆಚ್. ಮುನಿಯಪ್ಪ, ಬಿ.ಜೆ.ಪಿ.ಯ ವಿ. ಹನುಮಪ್ಪ, ಜನತಾದಳದ ಬಿ. ಕೃಷ್ಣಪ್ಪ ಹಾಗೂ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಹನುಮಾನ್‌ಸಿಂಗ್ ಪ್ರಮುಖ ಸ್ಪರ್ಧಿಗಳಾಗಿದ್ದರು.[೬] ಹತ್ತನೆಯ ಲೋಕಸಭಾ ಚುನಾವಣೆಯ ಮತದಾನ ೧೯೯೧ ಜೂನ್ ೧೫ ರಂದು ಆರಂಭವಾಯಿತು. ಚುನಾವಣೆಯಲ್ಲಿ ಕೃಷ್ಣಪ್ಪನವರು ಸೋತರು. ಕಾರಣ ರಾಜೀವ್‌ಗಾಂಧಿಯ ಹತ್ಯೆಯ ಕಾರಣವಾಗಿ ಕಾಣಿಸಿಕೊಂಡ ಸಹಾನುಭೂತಿ ಅಲೆಯಲ್ಲಿ ಕೋಲಾರ ಕ್ಷೇತ್ರವು ಕೃಷ್ಣಪ್ಪನವರ ಕೈ ತಪ್ಪಿತು. ಹಾಗೂ ದ.ಸಂ.ಸ. ಯನ್ನು ಬಿಟ್ಟು ಸ್ವತಂತ್ರವಾಗಿ ಸ್ಪರ್ಧಿಸಿದ್ದು ಕೂಡ ಅವರ ಸೋಲಿಗೆ ಕಾರಣವಾಯಿತು. ತಮ್ಮವರೇ ಆದ ದಲಿತರು ಅವರ ವಿರುದ್ಧ ಕೆಲಸ ಮಾಡಿದರು. ಚುನಾವಣೆಯ ಪರಾಭವಕ್ಕೆ ಹಣದ ಕೊರತೆಯೂ ಒಂದು ಕಾರಣವೆಂದು ವಿಶ್ಲೇಷಿಸಲಾಗಿದೆ.

ಸತ್ಯಸಂಗತಿಯೇನೆಂದರೆ ಕರ್ನಾಟಕದ ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ದಲಿತರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುವುದು ಕೋಲಾರ ಜಿಲ್ಲೆಯಲ್ಲಿಯೇ. ಆದರೆ ಕೃಷ್ಣಪ್ಪನವರು ಎಷ್ಟು ಹೀನಾಯವಾಗಿ ಸೋತರು ಎಂದರೆ ಬಹುಸಂಖ್ಯಾತ ದಲಿತರು ಅವರ ಜೊತೆ ನಿಲ್ಲಲಿಲ್ಲ. ಈ ಕುರಿತು ದೇವಯ್ಯ ಹರವೆಯವರು ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. 'ಕೋಲಾರದಲ್ಲಿ ದಲಿತರ ಮತಗಳು ಈ ಪ್ರಮಾಣದಲ್ಲಿದ್ದರೂ ಕೃಷ್ಣಪ್ಪನವರು ಸೋತದ್ದು ಯಾಕೆ ಅಂದರೆ ಬಲಗೈನವರು ಎಡಗೈನ ಕೃಷ್ಣಪ್ಪ ಅವರನ್ನು ನಾಯಕ ಅಂತ ಪರಿಗಣಿಸುವ ಸ್ಥಿತಿಯಲ್ಲಿಲ್ಲ.'

ಎಂದು ಅವರು ವಿವರಿಸಿದರು. ಇದರ ಒಳ ಅರ್ಥವು ಬಲಗೈನವರಾದ ಮಿತ್ರಪಕ್ಷಗಳು ಕೃಷ್ಣಪ್ಪನವರಿಗೆ ದಲಿತರ ಬೆಂಬಲ ಬೃಹತ್ತಾಗಿದೆ ಎಂದು ತಿಳಿದು ಅದರ ಲಾಭ ಪಡೆಯಲು ಕೃಷ್ಣಪ್ಪನವರನ್ನು ನಾಮಮಾತ್ರ ಅಭ್ಯರ್ಥಿಯನ್ನಾಗಿ ನಿಲ್ಲಿಸಿ ಅವರ ಅಪಜಯಕ್ಕೆ ಕಾರಣರಾದರು ಎನ್ನುವ ತೀರ್ಮಾನಕ್ಕೆ ಬರಲಾಗಿದೆ.[೭]

ಸ್ವತಃ ಕೃಷ್ಣಪ್ಪನವರ ವಿಚಾರದಲ್ಲಿ ಅವರ ಸೋಲಿಗೆ ದಲಿತ ಚಳವಳಿಯೇ ಕಾರಣ ಎಡಗೈ-ಬಲಗೈ ಕಾರಣವಲ್ಲ ಎಂದಿದ್ದಾರೆ. ಕೃಷ್ಣಪ್ಪನವರ ಸೋಲಿಗೆ ಮತ್ತೊಂದು ಕಾರಣ ದಲಿತ ಮುಖಂಡರು. ದಲಿತರನ್ನೂ ಸೇರಿ ಈ ಮುಖಂಡರು ಸುಲಿಗೆ ಮಾಡಿದ್ದಾರೆ. ಒಬ್ಬ ಮತದಾರನ ಮಾತು ಈ ರೀತಿ ಇದೆ. 'ನಮಗೆ ಸಮಸ್ಯೆ ಇದ್ದಾಗ ಸಂಘದವರಲ್ಲಿಗೆ ಹೋದಾಗ, ಸಂಘದವರು ಹಣಪಡೆದು ಕೆಲಸ ಮಾಡಿಕೊಟ್ಟರು. ಅವರಿಗೆ, ಅವರು ಹೇಳುವವರಿಗೆ ಯಾಕೆ ಮತ ನೀಡಬೇಕು?' ಇದು ಈ ಕರ್ನಾಟಕದ ಎಲ್ಲಾ ಜಿಲ್ಲೆಯಲ್ಲಿರುವ ವಸ್ತುಸ್ಥಿತಿ. ಹಾಗಾಗಿ ಚುನಾವಣೆಗೆ ನಿಂತ ಎಲ್ಲಾ ದಲಿತ ಚಳವಳಿಯ ಮುಖಂಡರು ಠೇವಣಿ ಕಳೆದುಕೊಂಡರು ಎಂಬುದು ಸತ್ಯಸಂಗತಿ.

ಈ ರೀತಿ ಕೃಷ್ಣಪ್ಪನವರು ತಮ್ಮ ರಾಜಕೀಯ ಜೀವನದಲ್ಲಿ ಪರಿಮಿತಗಳನ್ನು ಕಂಡಿದ್ದಾರೆ. ಅಂಬೇಡ್ಕರ್ ವಾದಿಗಳಾದ ಕೃಷ್ಣಪ್ಪನವರು ದಲಿತರು ಮುಖ್ಯವಾಹಿನಿಗೆ ಬರಲು ಸಂಘರ್ಷದ ಜೊತೆಗೆ ರಾಜಕೀಯ ಅಧಿಕಾರವನ್ನು ಪಡೆಯಬೇಕು ಎಂದಿರುವುದು ಅವರ ಚಿಂತನೆಗಳಿಂದ ತಿಳಿದುಬರುತ್ತದೆ.

ಅಧಿಕಾರ ರಾಜಕಾರಣದ ಹೊರಗೆ ಸ್ವಾರ್ಥವಿಲ್ಲದೆ ಜನರ ಸೇವೆ ಮಾಡಿದ ವ್ಯಕ್ತಿ ಎಂದರೆ ಕೃಷ್ಣಪ್ಪನವರು. ಇವರು ಪ್ರಬುದ್ಧ ಭಾರತದ, ಸ್ವಾತಂತ್ರ್ಯದ ಸಮಬಾಳ್ವೆಯ ರಾಜಕಾರಣದ ಕನಸನ್ನು ಕಂಡಿದ್ದರು. ಇಂಥ ಸ್ವಾತಂತ್ರ್ಯದ ಸಮಬಾಳ್ವೆಯ ರಾಜಕಾರಣ ಇಂದು ಹೆಚ್ಚು ಪ್ರಸ್ತುತ.

ಕರ್ನಾಟಕದ ಯಾವುದೇ ಪಾರ್ಟಿಯ ಮುಖಂಡನಿಗೂ ಕಡಿಮೆಯಿಲ್ಲದ ಧೀಮಂತ ವ್ಯಕ್ತಿತ್ವದ ಕೃಷ್ಣಪ್ಪನವರನ್ನು ಯಾರು ಮುಖಂಡರನ್ನಾಗಿ ಮಾಡದೆ, ಹಿಂಬಾಲಕರನ್ನಾಗಿ ಗುರುತಿಸಲು ಹೊರಟಿದ್ದರಿಂದ ಅವರು ಬಿ.ಎಸ್.ಪಿ. ಯನ್ನು ಆಹ್ವಾನಿಸಬೇಕಾಯಿತು. ಕೃಷ್ಣಪ್ಪ ಅವರು ತಾತ್ಸಾರ ಮಾಡುವ ವ್ಯಕ್ತಿಯಾಗಿರದೆ, ಗಂಭೀರ ಚಿಂತನೆ ಮಾಡುವ ವ್ಯಕ್ತಿಯಾಗಿದ್ದರು. ವ್ಯವಸ್ಥೆಯ ಎಲ್ಲ ಸ್ತರಗಳನ್ನು ಬಲ್ಲ, ಅದಕ್ಕೆ ಸೂಕ್ತ ಚಿಕಿತ್ಸೆ ನೀಡುವ ಚಿಂತಕರಾಗಿದ್ದರು ಎಂಬುದು ಅವರ ಚಿಂತನೆಗಳಿಂದ ತಿಳಿದು ಬರುತ್ತದೆ.[೮] ಅವರ ಚಿಂತನೆಗಳೆಲ್ಲವು ದಲಿತೋದ್ಧಾರದ ಉದ್ದೇಶವನ್ನು ಹೊಂದಿದ್ದವು. ಇಂಥ ದಲಿತ ಚಿಂತಕರನ್ನು ದಲಿತರು ಪ್ರಧಾನಧಾರೆಗೆ ತರದೇಹೋದದ್ದು ವಿಪರ್ಯಾಸದ ಸಂಗತಿಯಾಗಿದೆ. ಉಪಜಾತಿಗಳ ತಾರತಮ್ಯಗಳಿಂದಾಗಿ ಅವರು ಪ್ರಧಾನಧಾರೆಗೆ ಬರಲಿಲ್ಲ ಎನ್ನುವ ಅಭಿಪ್ರಾಯವೂ ಸಹ ವ್ಯಕ್ತವಾಗುತ್ತದೆ.

ಟಿಪ್ಪಣಿಗಳು

೧. ಕೃಷ್ಣಪ್ಪ ಬಿ., ಪ್ರೊಫೆಸರ್ ಬಿ. ಕೆ. ಬಿಚ್ಚುನುಡಿ, ಪು. ೨೯, ಅದೇ, ೩೧

೨. ಲಕ್ಷ್ಮಣ್ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು, ಪು. ೧೦೯, ಅದೇ, ೧೧೨

೩. ಮುನಿವೆಂಕಟಪ್ಪ ವಿ., ದಲಿತ ಚಳವಳಿ ಒಂದು ಅವಲೋಕನ, ಪು. ೧೫೧

೪. ಕೃಷ್ಣಪ್ಪನವರ ಸಂದರ್ಶನ, ಪ್ರಜಾವಾಣಿ, ೧೨.೦೫.೧೯೯೧

೫. ಪ್ರಭಾಕರ್ ಎಂ.ಜಿ., (ಸಂ.), ಹೊಸ್ನುಡಿ, ಸಂಪುಟ-೧೩, ಸಂಚಿಕೆ-೧೨, ೫.೦೬.೧೯೯೧, ಬುಧವಾರ

೬. ಮಂಜುನಾಥ ಕೋ. ನಾ., (ಸಂ.), ಸುದ್ದಿ ಸಂಚಯ, ಸಂಪುಟ-೧, ಸಂಚಿಕೆ-೧೫೪, ೨೯.೦೪.೧೯೯೧

೭. ಅರ್ಜುನ ಗೊಳಸಂಗಿ, (ಸಂ.), ಕನ್ನಡ ದಲಿತ ಸಾಹಿತ್ಯ ಸಮಾಲೋಕನ, ಪು. ೧೩೪, ಅದೇ, ೧೩೫

೮. ಹಾಲಪ್ಪ ಎಚ್., (ಸಂ.), ಜನಹಿತ ಬಹುಮತ, ಪು. ೧೧

ಅಧ್ಯಾಯ ಆರು

ಕೃಷ್ಣಪ್ಪ ಅವರ ಕನಸುಗಳು ಮತ್ತು ಆಶಯಗಳು

ಎಪ್ಪತ್ತರ ದಶಕದ ದಲಿತ ಚಳವಳಿಯ ಹರಿಕಾರರಾದ ಪ್ರೊ. ಬಿ. ಕೃಷ್ಣಪ್ಪ ಅವರು ತಮ್ಮ ಜೀವನವನ್ನೇ ಆ ಸಮುದಾಯದ ಉದ್ಧಾರಕ್ಕಾಗಿ ಮುಡುಪಾಗಿ ಇಟ್ಟಿದ್ದರು. ಕೃಷ್ಣಪ್ಪನವರು ಸೃಜನಶೀಲ ಚಿಂತಕರೂ ಹೌದು. ದಲಿತರ ಉದ್ಧಾರದ ಕನಸುಗಳನ್ನು ಕಂಡ ಈ ಚೇತನವು ಅವುಗಳ ಸಾಫಲ್ಯಕ್ಕಾಗಿ ಪಟ್ಟಶ್ರಮ ಅಷ್ಟಿಷ್ಟಲ್ಲ. ಇವರ ಆ ಕನಸುಗಳು ಎಷ್ಟರ ಮಟ್ಟಿಗೆ ಸಫಲವಾಗಿವೆ ಎಂಬುದನ್ನು ವಿಶ್ಲೇಷಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ.

ಕೃಷ್ಣಪ್ಪನವರು ಕಂಡ ಕನಸುಗಳಲ್ಲಿ ಮುಖ್ಯವಾಗಿ ಭೂ ರಹಿತರಿಗೆ ಭೂಮಿ, ನಿವೇಶನ ರಹಿತರಿಗೆ ನಿವೇಶನ, ಅಸ್ಪೃಶ್ಯತೆಯ ನಿರ್ಮೂಲನೆ, ಅಂತರ್‌ಜಾತೀಯ, ಅಂತರ್‌ಮತೀಯ ವಿವಾಹ, ಸಮಾನತೆಯ ಸಮಾಜ ನಿರ್ಮಾಣ, ಅಂಬೇಡ್ಕರ್ ರಥಯಾತ್ರೆಯನ್ನು ಮುಂದುವರಿಸುವುದು, ವರ್ಗ, ವರ್ಣರಹಿತ ಸಮಾಜ ನಿರ್ಮಾಣ, ಶಿಕ್ಷಣ, ಸಂಘಟನೆ, ಸಂಘರ್ಷದ ಮೂಲಕ ದಲಿತರಲ್ಲಿ ಜಾಗೃತಿ, ಹೊಟ್ಟೆಗಿಲ್ಲದವರ ಸಾಹಿತ್ಯ ಸೃಷ್ಟಿ, ಇಂಥ ಹಲವು ಕನಸುಗಳು ಕೃಷ್ಣಪ್ಪ ಅವರನ್ನು ಕಾಡುತ್ತಿದ್ದವು. ಕನಸಿಗೂ ವಾಸ್ತವದ ಬದುಕಿಗೂ ಅಂತರವಿದೆಯಾದ್ದರಿಂದ ಅವರ ಹಲವು ಕನಸುಗಳು ಯಶಸ್ಸು ಕಾಣದೆ ವಿಫಲವಾಗಿವೆ. ಆದರೂ ಕೂಡ ಅವರ ಕನಸುಗಳು ಪ್ರಗತಿಪರವಾದ ದಲಿತರ ವಿಚಾರಗಳಾಗಿ ಹೋರಾಟಗಳಿಗೆ, ಸಂಘರ್ಷಕ್ಕೆ, ಪ್ರಗತಿಗೆ ಪ್ರೇರಕಶಕ್ತಿಗಳಾಗಿವೆಯೆಂದರೆ ತಪ್ಪಾಗಲಾರದು.

ವರ್ಗರಹಿತ, ವರ್ಣರಹಿತ ಸಮಾಜದ ರಚನೆಯಾದಾಗ ಮಾತ್ರ ದಲಿತರ ಸಮಸ್ಯೆಗಳಿಗೆ ಪರಿಹಾರ, ಆ ಮೂಲಕ ದಲಿತರ ಉದ್ಧಾರ ಸಾಧ್ಯ ಎಂಬುದು ಕೃಷ್ಣಪ್ಪನವರ ನಿಲುವು. ಈ ದೇಶದ ಸಂಪತ್ತಿನ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸುವ ದಲಿತನಿಗೆ ಸಂಪತ್ತಿನಲ್ಲಿ ಇನ್ನೂ ಸಮಪಾಲು ದೊರಕದೆ ಹೋಗಿದೆ. ಈ ದುಸ್ಥಿತಿಯು ಶತಮಾನಗಳಿಂದಲೂ ಇದೆ. ಆದರೆ ಕೃಷ್ಣಪ್ಪನವರು ಭೂಮಿ, ಸಂಪತ್ತು, ಸ್ಥಾನಮಾನ ಈ ಸಮಾಜದ ಕಟ್ಟ ಕಡೆಯ ಮನುಷ್ಯನಿಗೂ ಸಮಾನವಾಗಿ ದಕ್ಕಬೇಕೆಂಬ ಕನಸುಗಳನ್ನು ಕಂಡವರು. ಜಾತಿವ್ಯವಸ್ಥೆ ಇರುವ ಭಾರತದಂಥ ದೇಶದಲ್ಲಿ ಸಮಾನ ಸಮಾಜ ನಿರ್ಮಾಣವು ಸಾಧ್ಯವೇ? ಸಾಧ್ಯ ಎನ್ನುವುದಾದರೆ ಅಷ್ಟೇ ವಿಳಂಬ ಎನ್ನುವ ಅನಿಸಿಕೆ ವ್ಯಕ್ತವಾಗುತ್ತದೆ. ಅಸ್ಪೃಶ್ಯತೆಯು ಭಾರತ ಸಮಾಜದ ವರ್ಣವ್ಯವಸ್ಥೆಯ ಒಂದು ಅನಿಷ್ಟ ಆಚರಣೆಯಾಗಿದೆ. ಇದರ ನಿರ್ಮೂಲನೆ ಮಾಡಲು ಫುಲೆ, ನಾರಾಯಣಗುರು, ಅಂಬೇಡ್ಕರ್, ಜಯಪ್ರಕಾಶ್‌ನಾರಾಯಣರಂಥವರು ಈ ಮೊದಲೆ ಪ್ರಯತ್ನ ನಡೆಸಿದ್ದಾರೆ. ಇವರ ಪ್ರಭಾವವಿರುವ ಕೃಷ್ಣಪ್ಪನವರು ಕೂಡ ಅಸ್ಪೃಶ್ಯತೆಯ ನಿರ್ಮೂಲನೆಯ ಕನಸನ್ನು ಕಂಡಿದ್ದಾರೆ. ಆದರೆ ಅಸ್ಪೃಶ್ಯತೆ ನಿರ್ಮೂಲನೆಯ ಅವರ ಕನಸು ಕನಸಾಗಿಯೇ ಉಳಿದಿದೆ ಎನ್ನುವ ಅನಿಸಿಕೆ ವ್ಯಕ್ತವಾಗುತ್ತದೆ.

ಶಿಕ್ಷಣದ ಬಗೆಗಿನ ಶತಮಾನದ ದಾರಿದ್ರ್ಯವನ್ನು ನೀಗಿಸಿಕೊಂಡವರು ಅಂಬೇಡ್ಕರ್ ಅವರು ಮಾತ್ರ. ಅಂಬೇಡ್ಕರ್ ಅವರ ತತ್ವ, ಸಿದ್ಧಾಂತಗಳಲ್ಲಿ ನಂಬಿಕೆಯನ್ನು ಹೊಂದಿದ್ದ ಕೃಷ್ಣಪ್ಪನವರು ದಲಿತರ ಉದ್ಧಾರದ ಮೂಲ ಮಂತ್ರವೆಂದರೆ 'ಶಿಕ್ಷಣ'. ಆದ್ದರಿಂದ ದಲಿತರು ಶಿಕ್ಷಿತರಾಗಿ ವಿಚಾರವಂತರಾಗಿ ಶೋಷಣೆಯ ವಿರುದ್ಧ ಹೋರಾಡಿ 'ಸಮಾನತೆ'ಯನ್ನು ಪಡೆಯಬೇಕೆಂಬ ಆಶಯವನ್ನು ಹೊಂದಿದ್ದರು. ದಲಿತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಹೋಬಳಿಗೊಂದು ಪ್ರಾಥಮಿಕ ಶಾಲೆಯನ್ನು ತೆರೆಯಬೇಕು, ಪ್ರತಿಯೊಂದು ಜಿಲ್ಲೆ ತಾಲೂಕುಗಳಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ವಸತಿನಿಲಯಗಳನ್ನು ಸ್ಥಾಪಿಸಿಸುವುದು, ಶಿಷ್ಯವೇತನ, ಗ್ರಂಥಾಲಯ

ಮೊದಲಾದ ಸೌಲಭ್ಯಗಳನ್ನು ಒದಗಿಸುವುದರಿಂದ ದಲಿತರ ಶಿಕ್ಷಣ ಮಟ್ಟವು ಹೆಚ್ಚುತ್ತದೆ ಎಂಬ ಕನಸು ಕಂಡಿದ್ದರು.[೧] ಕೃಷ್ಣಪ್ಪನವರ ಈ ಆಶಯವು ದೇವರಾಜ ಅರಸು ಅವರ ಆಳ್ವಿಕೆಯ ಕಾಲದಲ್ಲಿ ಸಂಪೂರ್ಣವಾಗಿ ಅಲ್ಲದಿದ್ದರೂ ಕೂಡ ತಕ್ಕಮಟ್ಟಿಗೆ ಈಡೇರಿತ್ತು ಎನ್ನುವ ತೀರ್ಮಾನಕ್ಕೆ ಬರಬಹುದು.

ಹೊಟ್ಟೆಗಿಲ್ಲದವರ ಬದುಕಿನ ಬಗ್ಗೆ ಕಾಳಜಿ ವಹಿಸುವ ಸಾಹಿತ್ಯ ಸೃಷ್ಟಿ ಆಗಬೇಕೆಂಬ ಕನಸನ್ನು ಕಂಡಿದ್ದರು. ಅವರ ಈ ಕನಸು ವಿಫಲವಾಗಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಇಂದು ಹೆಚ್ಚಾಗಿ ಹಣಕ್ಕಾಗಿ, ಹೆಸರಿಗಾಗಿ, ಪ್ರಚಾರಕ್ಕಾಗಿ ಸಾಹಿತ್ಯವು ಸೃಷ್ಟಿಗೊಳ್ಳುತ್ತಿರುವುದನ್ನು ನಾವು ಗಮನಿಸಬಹುದು.[೨]

ಅಂಬೇಡ್ಕರ್ ವಾದಿಯಾದ ಕೃಷ್ಣಪ್ಪನವರು ಅಂಬೇಡ್ಕರ್ ದಲಿತರ ಉದ್ಧಾರಕ್ಕಾಗಿ ರಚಿಸಿದಂಥ ತತ್ವ ಸಿದ್ಧಾಂತಗಳ ರಥಯಾತ್ರೆಯನ್ನು ಮುಂದುವರಿಸುವಂಥ ಕನಸು ಕಂಡವರಾಗಿದ್ದಾರೆ.[೩] ಅಂಬೇಡ್ಕರ್ ಹೇಳುವಂತೆ ದಲಿತರು ತಮ್ಮ ಹಕ್ಕುಗಳನ್ನು ಪಡೆಯಲು ಸ್ವಾಭಿಮಾನ ಚಳವಳಿಯನ್ನು ಮಾಡಿ ಸಂಘರ್ಷದಲ್ಲಿ ತೊಡಗಬೇಕೆಂದಿದ್ದಾರೆ. ಅಂಬೇಡ್ಕರ್ ಪ್ರಕಾರ ಅಸ್ಪೃಶ್ಯರು ಗುಲಾಮಗಿರಿಯ ಸ್ಥಿತಿಯಲ್ಲಿದ್ದಾರೆ. ಆದರೆ ಅದರ ಅರಿವು ಅವರಿಗಿಲ್ಲ. ಆದ್ದರಿಂದ "ಒಬ್ಬ ಗುಲಾಮನಿಗೆ ಅವನು ಗುಲಾಮ ಎಂಬ ಅರಿವನ್ನು ಹೇಳಿಕೊಡಿ. ಅವನು ಗುಲಾಮಗಿರಿಯ ವಿರುದ್ಧ ಹೋರಾಡುತ್ತಾನೆ." ಗುಲಾಮಗಿರಿಯನ್ನು ಮಾಡುತ್ತಿರುವ ದಲಿತರಿಗೆ ಶಿಕ್ಷಣವನ್ನು ನೀಡುವುದರ ಮೂಲಕ ಅರಿವು ಮೂಡಿಸಿದರೆ ಆತನು ಅವರ ವಿರುದ್ಧ ಹೋರಾಡಲು ಮುಂದಾಗುತ್ತಾನೆ. ನಂತರ ದಲಿತರೆಲ್ಲರೂ ಸಂಘಟಿತರಾಗಿ ಸಂಘರ್ಷಕ್ಕೆ ಮುಂದಾಗಬೇಕು. ಈ ರೀತಿ ಅಂಬೇಡ್ಕರ್ 'ಸ್ವಾಭಿಮಾನ, ಶಿಕ್ಷಣ, ಸಂಘಟನೆ, ಹೋರಾಟದ' ತತ್ವಗಳನ್ನು ಹಾಕಿಕೊಟ್ಟು ದಲಿತರ ಉದ್ಧಾರಕ್ಕೆ ನಾಂದಿಹಾಡಿದ್ದಾರೆ.

ಇಡೀ ವಿಶ್ವವು ಸಾಮ್ರಾಜ್ಯಶಾಹಿ, ವರ್ಣಭೇದ, ಬಡತನ-ದಾರಿದ್ರ್ಯ ಎಂಬ ಮೂರು ಬಗೆಯ ಅನ್ಯಾಯಗಳಿಂದ ತತ್ತರಿಸಿ ಹೋಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಸಮಾನತೆಗೆ ಅರ್ಥ ಬರಬೇಕಾದರೆ ಜಾತಿ ನಾಶವಾಗಬೇಕು. ಬಡತನ ನಿರ್ಮೂಲನೆಯಾಗಬೇಕಾದಲ್ಲಿ ಸಂಪತ್ತಿನ ಸಮಾನ ಹಂಚಿಕೆಯಾಗಬೇಕು. ಕೈಗಾರಿಕೆಗಳು ಮತ್ತು ಭೂಮಿ ಎರಡೂ ರಾಷ್ಟ್ರೀಕರಣವಾಗಬೇಕು. ರಾಷ್ಟ್ರೀಕರಣ ಮತ್ತು ಸಹಕಾರಿ ಕ್ಷೇತ್ರಗಳ ಮೂಲಕ ಸರ್ವಕಲ್ಯಾಣ ಸಾಧ್ಯವಾಗುತ್ತದೆ ಮತ್ತು ಸಮಾನತೆಯ ಸಮಾಜ ನಿರ್ಮಾಣವಾಗುತ್ತದೆ ಎನ್ನುವ ಬಹುದೊಡ್ಡ ಆಶಯವನ್ನು ಕೃಷ್ಣಪ್ಪ ಅವರು ಹೊಂದಿದ್ದರು. ಆದರೆ ವಾಸ್ತವವಾಗಿ ಇದು ಸಾಧ್ಯವೇ ಎನ್ನುವ ಪ್ರಶ್ನೆ ಎದುರಾಗುತ್ತದೆ. ದೇಶದ ಅಸಂಖ್ಯಾತ ದಲಿತರು ಭೂರಹಿತರಾಗಿದ್ದಾರೆ. ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಇಂದು ಭೂಮಿ ಎಲ್ಲರಿಗೂ ದೊರೆಯುವುದು ಕಷ್ಟಕರ ಸಂಗತಿಯಾಗಿದೆ. ರೈತಾಪಿಯಂಥ ಕೃಷಿ ಚಟುವಟಿಕೆಗಳನ್ನು ಸಹಕಾರಿ ತತ್ವದ ಮೇಲೆ ನಿರ್ವಹಿಸುವುದಂತೂ ಕಷ್ಟದ ಮಾತು. ಇಂದು ರಷ್ಯಾ ಮತ್ತು ಚೈನಾದಂಥ ಕಮ್ಯುನಿಸ್ಟ್ ರಾಷ್ಟ್ರಗಳು ಖಾಸಗಿ ಬಂಡವಾಳಕ್ಕೆ ಅವಕಾಶ ಕಲ್ಪಿಸುತ್ತಿರುವ ಸಮಯದಲ್ಲಿ ರಾಷ್ಟ್ರೀಕರಣಗೊಳಿಸುವ ಪ್ರಕ್ರಿಯೆಯಂತೂ ಭಾರತದಂಥ ಬಂಡವಾಳಶಾಹಿ ರಾಷ್ಟ್ರಗಳಿಗೆ ಮತ್ತಷ್ಟು ಕಷ್ಟದ ಸಂಗತಿ. ಇದೇನೆ ಇದ್ದರೂ ಸರ್ವಸಮಾನತೆಯನ್ನು ಬಯಸುತ್ತಿದ್ದ ಕೃಷ್ಣಪ್ಪನವರ ಆಶಯವು ಅವರ ನಿಷ್ಕಲ್ಮಷ ಮತ್ತು ಪ್ರಾಮಾಣಿಕತೆಯ, ಪಾರದರ್ಶಕತೆಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸಿದೆ.

ಸಮಾಜದ ಸಮಗ್ರ ಬದಲಾವಣೆಗೆ ಸಂಘರ್ಷ, ಹೋರಾಟದ ಜೊತೆಗೆ ರಾಜಕೀಯ ಅಧಿಕಾರ ಶಕ್ತಿಯನ್ನು ಪಡೆದು ಆ ಮೂಲಕ ಸಮಗ್ರ ಸಮಾಜ ಪರಿವರ್ತನೆ ಸಾಧ್ಯವಾಗುತ್ತದೆ. ಅಂಬೇಡ್ಕರ್ ದಲಿತರ ಜೀವನದಲ್ಲಿ ಬದಲಾವಣೆಯನ್ನು ಎರಡು ಮಾರ್ಗಗಳಿಂದ ತರಬಹುದು ಎಂದಿದ್ದಾರೆ. ಒಂದು ಬುಲೆಟ್ಟಿನಿಂದ ಇನ್ನೊಂದು ಬ್ಯಾಲೆಟ್ಟಿನಿಂದ. ಬುಲೆಟ್ಟಿಗಿಂತ ಬ್ಯಾಲೆಟ್ಟೇ ಹೆಚ್ಚು ಪರಿಣಾಮಕಾರಿ ಆದ್ದರಿಂದ ಕೆಳಜಾತಿಗಳು ತಮ್ಮ ಮತಶಕ್ತಿಯಿಂದ ಬದಲಾವಣೆಯನ್ನು ತರಬೇಕೆಂದು ಕರೆನೀಡಿದ್ದಾರೆ. ಈ ದೇಶದ ಅಜ್ಞಾನ, ಕೆಟ್ಟಸಂಪ್ರದಾಯ,

ಶೋಷಣೆಗಳಿಗೆ ಪ್ರಜಾಪ್ರಭುತ್ವದ ಬಲವಾದ ಅಸ್ತ್ರ `ಮತದಾನ'ವೆಂದು ಅವರು ಭಾವಿಸಿದ್ದರು. ರಾಜಕೀಯ ಅಧಿಕಾರ ಎನ್ನುವುದು ಮಾಸ್ಟರ್ ಕೀಲಿ ಕೈ ಇದ್ದ ಹಾಗೆ. ಈ ಮಾಸ್ಟರ್ ಕೀಲಿ ಕೈಯಿಂದ ದಲಿತರು ಬದಲಾವಣೆಯ ಕಪಾಟುಗಳನ್ನು ತೆರೆಯಬಹುದು ಎಂದರು. ಇಂಥ ವಿಚಾರಗಳನ್ನು ಮೈಗೂಡಿಸಿಕೊಂಡು ದಲಿತರು ತಮ್ಮ ಅಭಿವೃದ್ಧಿಗೆ ಸಂಘರ್ಷದ, ಹೋರಾಟದ ಹಾದಿ ತುಳಿಯತೊಡಗಿರುವುದು ಗಮನಾರ್ಹ ಸಂಗತಿಯಾಗಿದೆ. ಆದ್ದರಿಂದ ದಲಿತರು ತಮ್ಮ ಸ್ಥಾನಮಾನಗಳನ್ನು ಸುಧಾರಿಸಿಕೊಳ್ಳಲು ಅಂಬೇಡ್ಕರ್ ತತ್ವ, ಸಿದ್ಧಾಂತಗಳ ರಥವನ್ನು ಮುಂದುವರಿಸುವ ಆಶಯವನ್ನು ಕೃಷ್ಣಪ್ಪನವರು ಹೊಂದಿದ್ದರು.[೪]

ಟಿಪ್ಪಣಿಗಳು

೧. ರುದ್ರಪ್ಪ ಹನಗವಾಡಿ. (ಸಂ.), ಸಂಘರ್ಷದ ರೂವಾರಿ ಪ್ರೊಫೆಸರ್ ಬಿ. ಕೆ., ಪು. ೯೮, ಅದೇ, ೯೯, ಅದೇ, ೧೦೧

೨. ಕೃಷ್ಣಪ್ಪ ಬಿ., ಚಳವಳಿಗಳು ಮತ್ತು ಬರಹಗಳು, ಪು. ೯೯

೩. ಹಾರೋಗದ್ದೆ ಉಷಾ ರಮೇಶ್‌ನಾಯಕ್. ಶಿವಮೊಗ್ಗ ಜಿಲ್ಲೆಯ ಶತಮಾನದ ಮಹಾನ್ ಪ್ರತಿಭೆಗಳು ಭಾಗ ಒಂದು, ಪು. ೧೬೬

೪. ಕೃಷ್ಣಪ್ಪ ಬಿ., ಪ್ರೊ. ಬಿ. ಕೃಷ್ಣಪ್ಪ ಚಿಂತನೆಗಳು ಮತ್ತು ಬರಹಗಳು, ಪು. ೫

ಅಧ್ಯಾಯ ಏಳು

ತಳೆದ ನಿಲುವು

ಪ್ರಸ್ತುತ ಅಧ್ಯಯನವು ಪ್ರೊ. ಬಿ. ಕೃಷ್ಣಪ್ಪ ಅವರ ದಲಿತ ಚಿಂತನೆಗಳ ವಿಶ್ಲೇಷಣೆ ಕುರಿತದ್ದಾಗಿದೆ. ಅಂದರೆ ಕೃಷ್ಣಪ್ಪ ಅವರ ಜೀವನ-ಪರಿಚಯ-ಪರಿಸರ-ಪ್ರಭಾವ ಹಾಗೂ ದಲಿತ ಚಿಂತನೆ, ಸಂಘಟನೆ, ರಾಜಕೀಯ ಚಿಂತನೆಗಳನ್ನು ಕುರಿತು ವಿಶ್ಲೇಷಿಸುವಂಥದ್ದು. ದಲಿತ ಕುಟುಂಬದಲ್ಲಿ ಜನಿಸಿ, ಸಮಾಜದಲ್ಲಿ ಕ್ರಾಂತಿಕಾರಿ ಹೋರಾಟಗಳನ್ನು ಕೈಗೊಂಡು, ಆ ಮೂಲಕ ದಲಿತರಲ್ಲಿ ಹೊಸತನದ ಅಲೆಯೆನ್ನೆಬ್ಬಿಸಿ, ಸಮಾಜದಲ್ಲಿರುವ ದಲಿತರಲ್ಲಿ ಜಾಗೃತಿ ಮೂಡಿಸಿದ ರಾಜ್ಯದ ಅಪರೂಪದ ದಲಿತ ಚಿಂತಕ ಪ್ರೊ. ಬಿ. ಕೃಷ್ಣಪ್ಪ.

ಎಪ್ಪತ್ತರ ದಶಕದವರೆಗೆ ದಲಿತರಿಗಾಗಿ ಯಾವುದೇ ಒಂದು ಸಾಂಸ್ಕೃತಿಕ ವೇದಿಕೆ ಇರಲಿಲ್ಲ, ದಲಿತರಿಗಾಗಿ ಹೋರಾಡುವಂಥ ಪ್ರಬಲವಾದ ಸಂಘಟನೆಯೂ ಇರಲಿಲ್ಲ. ಅಲ್ಲದೆ ಸಮಾಜದ ಅಸ್ಪೃಶ್ಯರು, ಹಿಂದುಳಿದವರಲ್ಲಿ ಜಾಗೃತಿ ಮೂಡಿಸಲು ಹಾಗೂ ಆ ಮೂಲಕ ಶೋಷಣೆಯ ವಿರುದ್ಧ ಹೋರಾಡಲು ಶ್ರಮಿಸಿದ ಕೀರ್ತಿ ಕೃಷ್ಣಪ್ಪ ಅವರಿಗೆ ಸಲ್ಲುತ್ತದೆ. "ಜಾತಿ ವ್ಯವಸ್ಥೆಯನ್ನು ನಾಶಗೊಳಿಸದೆ ದಲಿತರ ಉದ್ಧಾರ ಸಾಧ್ಯವಿಲ್ಲ" ಎಂಬ ನಂಬಿಕೆ ಅವರದು. ಚದುರಿ ಹೋಗಿದ್ದ ದಲಿತರನ್ನು, ಕೆಳವರ್ಗದವರನ್ನು ಒಗ್ಗೂಡಿಸಿ, ಸಂಘಟಿಸಿ, ದಬ್ಬಾಳಿಕೆ ನಡೆಸುವವರಿಗೆ ದೊಡ್ಡ ಸವಾಲೆಸೆದು, ದಲಿತ ವರ್ಗಗಳಲ್ಲಿ ಶಿಕ್ಷಣ, ಸಂಘಟನೆ, ಹೋರಾಟದ ಪ್ರಜ್ಞೆಯನ್ನು ಬೆಳೆಸಿ ಆ ಮೂಲಕ ದಲಿತರ ಉದ್ಧಾರಕ್ಕೆ ಕರೆ ನೀಡಿದವರು. ಸಮಾಜದ ಪರಿವರ್ತನೆ, ದಲಿತ ಸಮಸ್ಯೆಗಳ ಪರಿಹಾರಕ್ಕೆ ಶಿಕ್ಷಣ, ಹೋರಾಟ, ಸಂಘರ್ಷದ ಜೊತೆಗೆ ರಾಜಕೀಯ ಅಧಿಕಾರವು ಅವಶ್ಯಕ. ದಲಿತರ ಹಕ್ಕುಗಳಿಗಾಗಿ ಹೋರಾಡಲು ೧೯೭೪ ಭದ್ರಾವತಿಯಲ್ಲಿ 'ದಲಿತ ಸಂಘರ್ಷ ಸಮಿತಿ'ಯನ್ನು ಸ್ಥಾಪಿಸಿ ಅದರ ನಾಯಕತ್ವವನ್ನು ವಹಿಸಿಕೊಂಡರು. ಇದು ಅವರ ದಲಿತರ ಪರ ಕಾಳಜಿಗೆ ನಿದರ್ಶನವಾಗಿದೆ.

ಕೃಷ್ಣಪ್ಪನವರ ವಿಶೇಷತೆಯೇನೆಂದರೆ ದಲಿತರ ಉದ್ಧಾರಕ್ಕಾಗಿ ತಮ್ಮ ತನು, ಮನ, ಧನವನ್ನು ಅರ್ಪಿಸಿದ್ದು. ಅದರ ಪ್ರತಿಫಲವಾಗಿ ೧೯೭೭ ರಲ್ಲಿ 'ಭೂ ಪರಭಾರೆ ಕಾಯ್ದೆ' ಜಾರಿ, ೧೯೮೭ ಲ್ಲಿ 'ಬೆತ್ತಲೆ ಸೇವೆ' ನಿಷೇಧವಾಗಿದೆ. ಪ್ರಥಮಬಾರಿಗೆ ಕರ್ನಾಟಕದಲ್ಲಿ ಬೆತ್ತಲೆ ಸೇವೆ ವಿರುದ್ಧ ಹೋರಾಡಿದ ವ್ಯಕ್ತಿ ಕೃಷ್ಣಪ್ಪನವರಾಗಿದ್ದಾರೆ.

ಅಂಬೇಡ್ಕರರ ನಂತರ ಅವರ ತತ್ವಗಳ ಫಲಾನುಭವಿಗಳು ಲಕ್ಷೋಪಲಕ್ಷ ಜನರಿದ್ದಾರೆ. ೧೫೦೦ ಕ್ಕೂ ಹೆಚ್ಚು ಸಂಸದರೆ ಬಂದಿದ್ದಾರೆ. 'ಸಾಮಾಜಿಕ ನ್ಯಾಯ'ದ ಎಲ್ಲ ಕಾರ್ಯಕ್ರಮಗಳಿಗೂ, ಸಮರ್ಥನೆ ನೀಡುತ್ತಿರುವುದು, ಅನುದಿನವೂ ಕೊಲೆ, ಹಲ್ಲೆ, ಮಲ ತಿನ್ನಿಸುವುದು, ಮೂತ್ರ ಕುಡಿಸುವುದು, ಅತ್ಯಾಚಾರ, ಅಸ್ಪೃಶ್ಯತೆಗಳಿಗೆ ತುತ್ತಾಗುತ್ತಿರುವವರು, ಜಮೀನಿಲ್ಲದ ಕೂಲಿಕಾರರು, ಸದರಿ ಫಲಾನುಭವಿಗಳು ಇದುವರೆಗೆ ಈ ಕೂಲಿ ಕಾರ್ಮಿಕರಿಗೆ ಕನಿಷ್ಠ ಭತ್ಯೆ, ಗರಿಷ್ಠ ಕಾರ್ಯಸಮಯ, ನಿರಂತರ ಉದ್ಯೋಗ ಭರವಸೆ, ಆರೋಗ್ಯ, ವಿದ್ಯಾಭ್ಯಾಸ ಇತ್ಯಾದಿ ಹಕ್ಕುಗಳಿಗೆ ಸಂಸತ್ತಿನಲ್ಲಿ ಒಂದು ಕಾನೂನನ್ನು ರಚಿಸಿಲ್ಲ. ಅಂತಹ ದೀನ ದಲಿತರ ಬದುಕಿಗೆ ಹೊಸ ಅರ್ಥ ಕೊಟ್ಟು ಮನೆಮನೆಯಲ್ಲೂ ದಾರಿದೀಪವಾದವರು ಕೃಷ್ಣಪ್ಪನವರು.

ಸುಮಾರು ಮೂರು ದಶಕಗಳ ಕಾಲ ಕರ್ನಾಟಕದಲ್ಲಿ ದಲಿತರ, ಬಡವರ, ಹಿಂದುಳಿದವರ ಧ್ವನಿಯಾಗಿದ್ದರು. ಕರ್ನಾಟಕದಲ್ಲಿ ಎಷ್ಟೋ ಜನ ದಲಿತರು ಉನ್ನತ ಹುದ್ದೆಗಳಲ್ಲಿದ್ದು, ರಾಜಕಾರಣದ ಮುಂಚೂಣಿಯಲ್ಲಿದ್ದು

ನಿರ್ಗಮಿಸಿದ್ದಾರೆ. ಆದರೆ ದಲಿತ ಜನಾಂಗವೆಲ್ಲಾ ಒಗ್ಗೂಡುವಂತಾಗಿ ಚಳವಳಿ ರೂಪಿಸಿ ಶೋಷಕರು ಅಧೈರ್ಯಗೊಳ್ಳುವಂತೆ ಮಾಡಿದ್ದು ಕೃಷ್ಣಪ್ಪ ಅವರು ಎಂದರೆ ತಪ್ಪಲ್ಲ. ಎಚ್ಚೆತ್ತ ದಲಿತ ಕೇರಿಗಳ ಯುವ ಮನಸ್ಸಿಗೆ ದಿಕ್ಕು ತೋರಲು ಕೃಷ್ಣಪ್ಪ ತಯಾರಾಗಿ ನಿಂತಿದ್ದರು.

ಸಾಮಾಜಿಕ ಕಳಕಳಿ ಹೊಂದಿದವರು, ಪ್ರಗತಿಪರ ಚಿಂತನಶೀಲರು ಆದ ಕೃಷ್ಣಪ್ಪ ಅವರು ಸತತ ಮೂರು ದಶಕಗಳ ಕಾಲ ಕತ್ತಲು ತುಂಬಿದ ದಲಿತರ ಬಾಳಿನಲ್ಲಿ ಬೆಳಕನ್ನು ಮೂಡಿಸಿದವರು. ೭೦ ರ ದಶಕದಲ್ಲಿ ರಾಜ್ಯದಲ್ಲಿ ದಲಿತ ಸಂಘರ್ಷ ಸಮಿತಿಯನ್ನು ಹುಟ್ಟು ಹಾಕುವ ಮೂಲಕ ದಲಿತರ ಬಾಳಿನ ಗುರಿಗೆ ಚಾಲನೆಯನ್ನು ನೀಡಿ ಕರ್ನಾಟಕದ ದಲಿತ ಚಳವಳಿಯ ಹರಿಕಾರರೆನಿಸಿದರು.

ದಲಿತರಲ್ಲಿ ತಾಂಡವಾಡುತ್ತಿದ್ದ ಬಡತನವೇ ಅವರ ದುಸ್ಥಿತಿಗೆ ಕಾರಣ ಎಂದು ಅವರು ಮನಗಂಡಿದ್ದರು. ಇದರಿಂದ ಜೀತ-ಕೃಷಿಕೂಲಿ ದಲಿತರಿಗಾಗಿ, ಭೂ ರಹಿತರಿಗಾಗಿ ಭೂಮಿ ಇತ್ಯಾದಿ ಆರ್ಥಿಕ ಹೋರಾಟದ ಕಡೆ ಹೆಚ್ಚು ಗಮನ ಹರಿಸಿದರು.

ಜಾತಿ ಹೋರಾಟದೊಂದಿಗೆ ಆರ್ಥಿಕ ಚಳವಳಿಯನ್ನು ಒಂದು ಭಾಗವಾಗಿ ಸ್ವೀಕರಿಸಿದ ಕೃಷ್ಣಪ್ಪ ಅಸ್ಪೃಶ್ಯರಲ್ಲೇ ಮಾತ್ರವಲ್ಲ, ಬಡತನ ಎಲ್ಲ ಜಾತಿಯಲ್ಲೂ ಇದೆ ಎಂದು ಕಂಡುಕೊಂಡರು. ಇದರಿಂದ ದಲಿತ ಶಬ್ದದ ಪುನರ್ ವ್ಯಾಖ್ಯಾನ ಮಾಡಿ 'ದಲಿತರು' ಎಂದರೆ 'ಎಲ್ಲಾ ಶೋಷಿತರ ವರ್ಗದವರು' ಎಂದು ಹೇಳಿದರು. ಇದರಿಂದ ದಲಿತ ಚಳವಳಿಯನ್ನು ಎಲ್ಲ ಬಡವರ ಚಳವಳಿಯಾಗಿ ಪರಿವರ್ತಿಸಲಾಯಿತು. ಆದರೆ ಚಳವಳಿಯ ನಾಯಕತ್ವ ಮಾತ್ರ ಕೆಳ ಜಾತಿಗಳಿಗೆ ಸಿಗಬೇಕೆಂಬುದು ಅವರ ನಿಲುವಾಗಿತ್ತು. ಅಷ್ಟೇ ಅಲ್ಲದೆ ಜಾತಿಗಳು ವರ್ಗ ಹೋರಾಟದ ಮೂಲಕ ಹೆಚ್ಚು ಸಡಿಲವಾಗುತ್ತವೆ ಎಂದು ಮನವರಿಕೆ ಮಾಡಿಕೊಟ್ಟಿದ್ದು ಗಮನಾರ್ಹವಾಗಿದೆ.

ಅಸ್ಪೃಶ್ಯತೆ ಹಿಂದೂ ಸಮಾಜದ ವರ್ಣವ್ಯವಸ್ಥೆಯಲ್ಲಿ ಒಂದು ಅನಿಷ್ಟ ಪದ್ಧತಿಯಾಗಿದೆ. ಒಂದೇ ಸಮಾಜದ ಒಂದು ಜಾತಿಯು ಮತ್ತೊಂದು ಜಾತಿಯ ಮೇಲೆ ನಡೆಸಿಕೊಂಡು ಬಂದ ಕ್ರೂರತನವು ಸಾಮಾಜಿಕ ಅಸಹನೆಯಾಗಿದೆ. ಮನುಷ್ಯ ಮನುಷ್ಯನನ್ನೇ ಹಿಂಸಿಸುವ ಈ ಕಾರ್ಯಕ್ಕೆ ಅಸಹನೆಗೆ, ಅಸಹ್ಯ ಪದ್ಧತಿಗೆ ಸಮಾನವಾದದ್ದು ವಿಶ್ವ ಇತಿಹಾಸದಲ್ಲಿ ಇಲ್ಲವೇ ಇಲ್ಲವೆಂಬುದನ್ನು ಗಮನಿಸಬಹುದಾಗಿದೆ. ಅಸ್ಪೃಶ್ಯತೆ ಇಂದು ಸಂಪೂರ್ಣವಾಗಿ ನಾಶವಾಗದಿದ್ದರೂ ಇಂಥ ಅನಿಷ್ಟ ಪದ್ಧತಿಯನ್ನು ನಿರ್ಮೂಲ ಮಾಡುವಲ್ಲಿ ಕೃಷ್ಣಪ್ಪ ಅವರು ಪ್ರಾಮಾಣಿಕ ಪ್ರಯತ್ನ ಮಾಡಿದರು ಎನ್ನುವುದರಲ್ಲಿ ಸಂದೇಹವಿಲ್ಲ. ಜೊತೆಗೆ ಅವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಟ್ಟದ್ದು ಸಣ್ಣ ಸಾಧನೆಯೇನಲ್ಲ. ಜಾತಿಯಲ್ಲಿ ನಂಬಿಕೆಯಿಲ್ಲದ ಕೀಳರಿಮೆ, ಬೆತ್ತಲೆ ಸೇವೆ, ದೈವದ ಹೆಸರಿನಲ್ಲಿ ನಡೆಯುವ ಪ್ರಾಣಿ ಬಲಿ, ದೇವದಾಸಿ ಪದ್ಧತಿಗಳನ್ನು ತೊಡೆದು ಹಾಕಲು ಶ್ರಮಿಸಿದರು. ಇಂಥ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡುವಾಗ ಪಟ್ಟಭದ್ರ ಹಿತಾಸಕ್ತಿಗಳನ್ನು ವಿರೋಧ ಕಟ್ಟಿಕೊಳ್ಳುವಲ್ಲಿ ಎಂದೂ ಹಿಂದೇಟು ಹಾಕಿದವರಲ್ಲ. ಇಂಥ ದಿಟ್ಟ ನಿಲುವಳಿಗಳಿಗೆ ಕೃಷ್ಣಪ್ಪ ಅವರಲ್ಲಿದ್ದ ದಿಟ್ಟವಾದ ತಾತ್ವಿಕ ನಿಲುವುಗಳೇ ಕಾರಣ.

ಕೃಷ್ಣಪ್ಪನವರ ನೇತೃತ್ವದಲ್ಲಿ ಅಸ್ಪೃಶ್ಯತೆಯ ವಿರುದ್ಧ ನಡೆದ ಹೋರಾಟಗಳು ಲೆಕ್ಕವಿಲ್ಲದಷ್ಟು. ಕುಂದೂರಿನಲ್ಲಿ ಕೆರೆ ನೀರು ಮುಟ್ಟಿದ್ದಕ್ಕೆ, ಹಿರೇನಾಗನೂರಿನಲ್ಲಿ ದೇವಸ್ಥಾನದ ಪ್ರವೇಶಕ್ಕೆ, ಅಲಗೂಡಿನಲ್ಲಿ ಹೋಟೆಲ್ ಪ್ರವೇಶ, ಅಫಜಲ್‌ಪುರದಲ್ಲಿ ದಲಿತರ ಮೇಲೆ ಹಲ್ಲೆ ನಡೆದದ್ದಕ್ಕೆ, ಬಟರಗಾದಲ್ಲಿ ಸಾರ್ವಜನಿಕ ಬಹಿಷ್ಕಾರಕ್ಕೆ, ಬೆಂಡಿಗೇರಿಯಲ್ಲಿ ಮಲ ತಿನ್ನಿಸಿದ ಪ್ರಕರಣ, ಶೇಷಗಿರಿಯಪ್ಪನ ಕೊಲೆ ಪ್ರಕರಣ, ಅನಸೂಯಮ್ಮಳ ಅತ್ಯಾಚಾರ ಪ್ರಕರಣದ ವಿರುದ್ಧ ನಡೆಸಿದ ಪ್ರತಿಭಟನೆಗಳು ಅನೇಕ. ಶೋಷಿತರಲ್ಲಿ ಸ್ವಾಭಿಮಾನ, ಸಂಘರ್ಷ, ವೈಚಾರಿಕತೆಯನ್ನು ಬೆಳೆಸುವುದರಲ್ಲಿ ಪ್ರಮುಖ ಪಾತ್ರವಹಿಸಿದವರು ಕೃಷ್ಣಪ್ಪನವರು.

ದಲಿತರು ಹಾಗೂ ಕೆಳವರ್ಗದವರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ಅವರು ದಲಿತ ಕಲಾಮಂಡಳಿ, ದಲಿತ ಸಾಹಿತ್ಯ ವೇದಿಕೆ ಹಾಗೂ ದಲಿತ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸಿದರು. ಇದರಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಲಿತ ಸಾಹಿತ್ಯವೆಂಬ ಹೊಸ ಪ್ರಕಾರ ಹುಟ್ಟು ಪಡೆಯಿತು. ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ವಿಜಯ ಪಾಟೀಲ್, ಗೋವಿಂದಯ್ಯ, ಕೆ. ಎನ್. ಶಿವತೀರ್ಥನ್, ಚೆನ್ನಣ್ಣವಾಲೀಕರ, ಇಂದೂಧರ ಹೊನ್ನಾಪುರ, ಪರಶಿವ ನಡುಬೆಟ್ಟ ಮುಂತಾದ ಅಸಂಖ್ಯಾತ ಸಾಹಿತಿಗಳು, ಕವಿಗಳು ಬೆಳಕಿಗೆ ಬಂದರು. `ಪಂಚಮ ಪತ್ರಿಕೆ` ದಲಿತರ ಹೋರಾಟದ ಮುಖವಾಣಿಯಾಯಿತು. ಹೊಸ ಚಿಂತನೆಯಿಂದ ನೂರಾರು ಲೇಖಕರು-ಕಲಾವಿದರು ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದರು. ಇದರ ಕೀರ್ತಿ ಕೃಷ್ಣಪ್ಪ ಅವರಿಗೆ ಸಲ್ಲುತ್ತದೆ.

ಕೃಷ್ಣಪ್ಪ ಅವರು ಕನ್ನಡ ನುಡಿ ಹಾಗೂ ಸಾಹಿತ್ಯದ ಬಗೆಗೆ ಅಪಾರ ಒಲವುಳ್ಳವರಾಗಿದ್ದರು. ಸಾಹಿತ್ಯವೆಂಬುದು ಜನಸಾಮಾನ್ಯರಿಗೂ ಅರ್ಥವಾಗುವಂತಿರಬೇಕು ಎಂಬುದು ಅವರ ನಿಲುವಾಗಿತ್ತು. ಸಾಹಿತಿಗಳು ಪ್ರಾಮಾಣಿಕರಾಗಿರಬೇಕು, ಜನಸಾಮಾನ್ಯರ ಸುಖದುಃಖಗಳ ಬದುಕನ್ನು ಬಿಂಬಿಸುವ ಕೃತಿಗಳನ್ನು ಹೊರತರಬೇಕು ಎಂದು ಕರೆ ನೀಡಿದರು. ಪ್ರಚಾರ ಸಾಹಿತ್ಯಕ್ಕೆ ವಿರೋಧವಾಗಿದ್ದ ಅವರು ಶೋಷಿತರ, ಹೊಟ್ಟೆಗಿಲ್ಲದವರ ಸಾಹಿತ್ಯ, ವಿಚಾರ ಸಾಹಿತ್ಯ, ದಲಿತರನ್ನು ಜಾಗೃತಿಗೊಳಿಸಿ ಕ್ರಾಂತಿಗೆ ಸನ್ನದ್ಧಗೊಳಿಸುವ ಸಾಹಿತ್ಯಕ್ಕೆ ಹೆಚ್ಚು ಮಹತ್ವ ನೀಡಿದರು. ಇದು ಅವರ ಸಾಹಿತ್ಯ ಚಿಂತನೆಗೆ ಒಂದು ಸಾಕ್ಷಿಯಾಗಿದೆ.

ಪ್ರಾರಂಭದಲ್ಲಿ ಕೃಷ್ಣಪ್ಪ ಅವರು ಹೋರಾಟಕ್ಕೂ, ರಾಜಕಾರಣಕ್ಕೂ ತಳಕುಹಾಕಿದವರಲ್ಲ. ರಾಜಕಾರಣ ಮಾಡುವುದಕ್ಕೆ ಹೊರಟವರು ಚಳವಳಿಯನ್ನು ಮಾಡಲು ಸಾಧ್ಯವಿಲ್ಲ ಎಂಬ ನಿಲುವು ಹೊಂದಿದ್ದರು. ರಾಜಕಾರಣ ಪ್ರವೇಶದಿಂದ ದ.ಸಂ.ಸ. ತನ್ನ ಮೂಲ ಉದ್ದೇಶವನ್ನು ಮರೆತಂತೆ – ಎನ್ನುವ ವಿಷಯದ ಅರಿವು ಕೃಷ್ಣಪ್ಪರಿಗಿತ್ತು. ಆದರೂ ಕೂಡ ಪ್ರಾರಂಭದಲ್ಲಿ ದ.ಸಂ.ಸ. ರಾಜಕೀಯ ಪ್ರವೇಶವನ್ನು ವಿರೋಧಿಸಿದ ಕೃಷ್ಣಪ್ಪನವರು ಆ ನಂತರದಲ್ಲಿ ಬಿ.ಎಸ್.ಪಿ.ಯನ್ನು ಬೆಂಬಲಿಸಿದುದು ಮಾತ್ರವಲ್ಲದೆ ಆ ಪಕ್ಷವನ್ನು ಸೇರಿದುದು ಒಂದು ವೈರುಧ್ಯದ ಸಂಗತಿಯೆಂದು ಭಾವಿಸಲಾಗುತ್ತಿದೆ.

ಕೃಷ್ಣಪ್ಪನವರಿಗೂ ಮತ್ತು ದಲಿತ ಸಂಘರ್ಷ ಸಮಿತಿಯ ಇನ್ನಿತರ ನಾಯಕರ ಜೊತೆಗೂ ಇದ್ದ ಭಿನ್ನಾಭಿಪ್ರಾಯಗಳನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತ. ಹಗಲಿರುಳೂ ದಲಿತರ ಶ್ರೇಯಸ್ಸಿನ ಕುರಿತಾಗಿ ಯೋಚಿಸುತ್ತಿದ್ದ ಕೃಷ್ಣಪ್ಪನವರು ಅಂಬೇಡ್ಕರ್‌ವಾದವನ್ನು ರಕ್ತಗತವಾಗಿಸಿಕೊಂಡಿದ್ದವರು. ಅಸ್ಪೃಶ್ಯತೆಯ ನಿವಾರಣೆಗೆ, ದಲಿತರ ಮೇಲಿನ ದೌರ್ಜನ್ಯಗಳ ನಿರೋಧಕ್ಕೆ ಸಂವಿಧಾನ, ಕಾನೂನುಗಳಿದ್ದಾಗ್ಯೂ ಅವು ಯಾವುವೂ ಪರಿಣಾಮಕಾರಿಯಾಗದೆ ಹುಸಿಯಾಗತೊಡಗಿದ್ದು ಅವರಲ್ಲಿ ಹತಾಶೆಯನ್ನುಂಟು ಮಾಡತೊಡಗಿತ್ತು. ಈ ಹಂತದಲ್ಲಿ ತೀವ್ರಗಾಮಿತನದ ಸ್ವರೂಪ ಕೃಷ್ಣಪ್ಪನವರಲ್ಲಿ ಕಾಣಿಸಿಕೊಂಡಂತಿದೆ. ಸಮಾಜವಾದಿಗಳಾದ ದೇವನೂರು ಮಹಾದೇವರು ಮತ್ತು ಕಮ್ಯುನಿಸ್ಟ್‌ವಾದಿಯಾದ ಸಿದ್ಧಲಿಂಗಯ್ಯನವರು ಶೋಷಣೆ ಮಾಡುವವರ ವಿರುದ್ಧ ಹೋರಾಟವನ್ನು ಕೈಬಿಟ್ಟು, ಶೋಷಣೆ ಮಾಡುವ ಜನರ ಮನಸ್ಸು ಪರಿವರ್ತನೆ ಮಾಡಿ ಸಮಾಜದಲ್ಲಿ ಹೊಂದಾಣಿಕೆ ಜೀವನ ನಡೆಸುವಂತೆ ಕರೆ ನೀಡಿದುದು ಕೃಷ್ಣಪ್ಪನವರಿಗೆ ರುಚಿಸಲಿಲ್ಲ. ಮೇಲ್ಜಾತಿಯನ್ನು ಸಂತೃಪ್ತಿಗೊಳಿಸಲು ಈ ವಿಧಾನವನ್ನು ಅನುಸರಿಸಲಾಗುತ್ತಿದೆಯೆಂದೂ, ಇವರಿಂದ ದ.ಸಂ.ಸ.ಯಲ್ಲಿ ಯಥಾಸ್ಥಿತಿವಾದ ನಿಧಾನಕ್ಕೆ ನುಸುಳಿದೆಯೆಂದೂ, ಇದು ಮೊದಲ ಬಾರಿಗೆ ದ.ಸಂ.ಸ.ಯಲ್ಲಿ ಒಡಕು ಉಂಟಾಗಲು ಕಾರಣವಾಯಿತೆಂಬುದು ಕೃಷ್ಣಪ್ಪನವರ ಪ್ರತಿಕ್ರಿಯೆಯಾಗಿತ್ತು. ಆದರೆ ಬಿ.ಎಸ್.ಪಿ.ಯ ಸಂಸ್ಥಾಪಕರಾದ ಕಾನ್ಷೀರಾಮ್ ಅವರು ಮತ್ತು ಬಿ. ಕೃಷ್ಣಪ್ಪನವರ ನಿಧನಾನಂತರದ ರಾಜಕೀಯ ಬೆಳವಣಿಗೆಗಳು ಅರ್ಥಪೂರ್ಣವಾದ ಸಂಕೇತವೊಂದನ್ನು ಪ್ರಕಟಪಡಿಸುತ್ತಿರುವುದು ನಿಜಕ್ಕೂ ಸೋಜಿಗದ ಸಂಗತಿಯಾಗಿದೆ. ಕಟ್ಟಾ ಅಂಬೇಡ್ಕರ್‌ವಾದವನ್ನು ಜೀರ್ಣಿಸಿಕೊಂಡಿದ್ದ ಬಿ.ಎಸ್.ಪಿ.ಯು ಮಾಯಾವತಿ ನೇತೃತ್ವದ ಉತ್ತರ ಪ್ರದೇಶದಲ್ಲಿ ಸಮಾಜದ ಎಲ್ಲಾ ವರ್ಗ,

ಸಮುದಾಯಗಳೊಂದಿಗೆ ಹೊಂದಾಣಿಕೆ ನಡೆಸಿ ದಿಗ್ವಿಜಯ ಸಾಧಿಸಿದೆ. ದೇಶದ ರಾಜಕಾರಣದ ದೃಷ್ಟಿಯಿಂದ, ದಲಿತಪರ ಕಾಳಜಿಯಿಂದ ಯೋಚಿಸುವುದಾದರೆ ಇದು ನಿಜಕ್ಕೂ ದಿಗ್ವಿಜಯವೇ ಸರಿ. ಉತ್ತರ ಪ್ರದೇಶದಲ್ಲಿನ ಬಿ.ಎಸ್.ಪಿ. ಯ ಈ ಗೆಲುವು ಎಲ್ಲ ಹೋರಾಟಗಳ, ಮಾನವೀಯ ತುಡಿತಗಳ, ಆರೋಗ್ಯಕರ ರಾಜಕಾರಣದ ಹೊಸ ಮನ್ವಂತರದ ಉಗಮವೆಂದೇ ಹೇಳಬೇಕಾಗುತ್ತದೆ. ಅಚ್ಚರಿಯ ಸಂಗತಿಯೆಂದರೆ ದೇವನೂರು ಮಹಾದೇವ ಮತ್ತು ಸಿದ್ದಲಿಂಗಯ್ಯನವರು ದಶಕಗಳ ಹಿಂದೆ ಪ್ರತಿಪಾದಿಸುತ್ತಿದ್ದುದನ್ನು, ಈಗಲೂ ಪ್ರತಿಪಾದಿಸುತ್ತಿರುವುದನ್ನು ಆಗ ವಿರೋಧಿಸುತ್ತಿದ್ದ ಕೃಷ್ಣಪ್ಪ ಮತ್ತು(ಅಥವಾ ವಿರೋಧಿಸುತ್ತಿದ್ದರೆಂದು ಊಹಿಸಿಕೊಂಡಲ್ಲಿ) ಕಾನ್ಷೀರಾಮ್ ಅವರುಗಳು ಈಗ ಜೀವಂತವಾಗಿದ್ದಲ್ಲಿ ಬಹುಶಃ ಇದನ್ನು ನಂಬುತ್ತಿರಲಿಲ್ಲವೆನಿಸುತ್ತದೆ.

ಕೃಷ್ಣಪ್ಪನವರು ಸಮಾಜದ ಸಮಗ್ರ ಬದಲಾವಣೆಗೆ ಹೋರಾಟದ, ಸಂಘರ್ಷದ ಜೊತೆಗೆ ರಾಜಕೀಯ ಶಕ್ತಿ ಅವಶ್ಯಕವೆಂದು ಪರಿಗಣಿಸಿದ್ದು ಗಮನಾರ್ಹವಾಗಿತ್ತು. ಅಲ್ಲದೆ ಅವರಿಗೆ ರಾಜಕೀಯ ಪ್ರವೇಶವು ಅನಿವಾರ್ಯಗೊಂಡಾಗ ಅಂಬೇಡ್ಕರ್ ಅವರ ರಾಜಕೀಯ ಸಿದ್ಧಾಂತವನ್ನು ನಂಬಿದ್ದ ಬಿ.ಎಸ್.ಪಿ. ಪಕ್ಷವನ್ನು ಸೇರಿದರು. ಬಹುಜನ ಹಿತವನ್ನು ಹೊಂದಿದ್ದ ಈ ಪಕ್ಷವನ್ನು ಕರ್ನಾಟಕದಲ್ಲಿ ಪ್ರಚಾರಗೊಳಿಸಿದ ಕೀರ್ತಿ ಕೃಷ್ಣಪ್ಪನವರಿಗೆ ಸಲ್ಲುತ್ತದೆ.

ದಲಿತರ ಉದ್ಧಾರವು ಶಿಕ್ಷಣದಿಂದ ಎಂಬುದನ್ನು ಅರಿತಿದ್ದ ಅವರು ದಲಿತರ ವಿದ್ಯಾಭ್ಯಾಸಕ್ಕಾಗಿ ಅಗತ್ಯವಾಗಿ ಬೇಕಾಗಿರುವಂಥ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ಸರ್ಕಾರವನ್ನು ಒತ್ತಾಯಿಸಿದರು. ಆದ್ದರಿಂದ ಅಂದಿನ ಮುಖ್ಯಮಂತ್ರಿಗಳಾದ ದೇವರಾಜ ಅರಸು ಅವರ ಆಳ್ವಿಕೆಯ ಕಾಲದಲ್ಲಿ ದಲಿತ, ಹಿಂದುಳಿದವರ ವಿದ್ಯಾರ್ಥಿ ನಿಲಯಗಳನ್ನು ಮತ್ತು ಅಗತ್ಯ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲಾಯಿತು.

ಕೇವಲ ಸೈದ್ಧಾಂತಿಕ ನಿಲುವುಗಳಷ್ಟೇ ಕೃಷ್ಣಪ್ಪನವರ ವೈಶಿಷ್ಟ್ಯವಲ್ಲ. ಆದರೆ ಅದನ್ನು ವಿರೋಧಿಸುವ ಮೇಲ್ಜಾತಿಯವರ ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರತ್ಯೇಕಿಸಿ ಅವರ ದೌರ್ಜನ್ಯಗಳು ಇನ್ನು ಮುಂದೆ ನಡೆಯದಂತೆ ಎಚ್ಚರಿಕೆ ಮತ್ತು ಅರಿವನ್ನುಂಟುಮಾಡಿ ಮಾಡಿ, ತಾವು ನಂಬಿದ ನಿಲುವುಗಳನ್ನು ಜಾರಿಗೆ ತರಲು ಹೋರಾಡಿದ್ದು ಅವರ ವಿಶೇಷತೆ. ಏಕೆಂದರೆ ಇಂಥ ಕನಸು ಕಂಡ ಇತರ ಸಮಾಜ ಚಿಂತಕರು ಮೇಲ್ಜಾತಿಯವರ ಪಿತೂರಿಯಿಂದಾಗಿ ಮಣ್ಣುಮುಕ್ಕಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ಕೃಷ್ಣಪ್ಪ ಅವರು ಕರ್ನಾಟಕದ ದಲಿತ, ಕೆಳವರ್ಗಗಳ ಸಮಗ್ರ ಅಭಿವೃದ್ಧಿಯ ಬಗೆಗೆ ಅಪಾರ ಕಾಳಜಿ ಹೊಂದಿದ್ದರು. ಇದರಿಂದಾಗಿ ಸುಮಾರು ಮೂರು ದಶಕಗಳ ಕಾಲ ದಲಿತರ ಸ್ವಾಭಿಮಾನ ಚಳವಳಿಯನ್ನು ಸಂಘಟಿಸಿದ ಪ್ರೊ. ಬಿ. ಕೃಷ್ಣಪ್ಪನವರಿಗೆ ಕರ್ನಾಟಕ ಸರ್ಕಾರದ ಪ್ರಪ್ರಥಮ ಭಾರತರತ್ನ 'ಡಾ. ಬಾಬಾಸಾಹೇಬ್ ಅಂಬೇಡ್ಕರ್ ಪುರಸ್ಕಾರ'ವನ್ನು ೨೦೦೨ ನೆಯ ಸಾಲಿನಲ್ಲಿ ಮರಣೋತ್ತರವಾಗಿ ನೀಡಿ ಗೌರವಸಿದ್ದು ಔಚಿತ್ಯಪೂರ್ಣವಾಗಿದೆ.

ಅನುಬಂಧ ಒಂದು

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

೧. ಅನಂತ ಮೂರ್ತಿ ಯು. ಆರ್., ಬೆತ್ತಲೆ ಪೂಜೆ ಯಾಕೆ ಕೂಡದು?, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೨

೨. ಅರವಿಂದ ಮಾಲಗತ್ತಿ, (ಸಂ.), ದಲಿತಪ್ಪ, ದಲಿತ ಸಾಹಿತ್ಯ ಪರಿಷತ್ತು, ಗದಗ, ೨೦೦೦

೩. ಅರವಿಂದ ಮಾಲಗತ್ತಿ, (ಸಂ.), ದಲಿತ ಮಾರ್ಗ, ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೨

೪. ಅರ್ಜುನ್ ಗೊಳಸಂಗಿ, (ಸಂ.), ಕನ್ನಡ ದಲಿತ ಸಾಹಿತ್ಯ ಸಮಾಲೋಕನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩

೫. ಅರವಿಂದ ಮಾಲಗತ್ತಿ, ಸಾಹಿತ್ಯ ಮತ್ತು ದಲಿತ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

೬. ಅರ್ಜುನ್ ಗೊಳಸಂಗಿ, ದಲಿತ ಬದುಕು ಮತ್ತು ಸಾಂಸ್ಕೃತಿಕ ಜಾನಪದೀಯ ಅಧ್ಯಯನ, ವಿಮೋಚನ ಪ್ರಕಾಶನ, ಬೆಳಗಾವಿ, ೨೦೦೫

೭. ಆಶಾದೇವಿ ಎಂ.ಎಸ್., (ಅನು), ಉರಿ ಚಮ್ಮಾಳಿಗೆ, ವಸಂತ ಪ್ರಕಾಶನ, ಬೆಂಗಳೂರು, ೨೦೦೨

೮. ಇಂದಿರಾ ಕೃಷ್ಣಪ್ಪ, (ಸಂ.), ಸಂಘರ್ಷದ ಸುಡಿಗಳು, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು, ೨೦೦೩

೯. ಇಂದಿರಾ ಕೃಷ್ಣಪ್ಪ, (ಸಂ.), ನೆನಪುಗಳೇ ನಿಲ್ಲಿ... ನಿಲ್ಲಿ..., ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು, ೨೦೦೫

೧೦. ಇಂದಿರಾ ಕೃಷ್ಣಪ್ಪ, (ಸಂ.), ಬಯಲು ಬೆತ್ತಲೆ ಚಂದ್ರಗುತ್ತಿ, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು, ೨೦೦೬

೧೧. ಕೃಷ್ಣಪ್ಪ ಬಿ., ಪ್ರೊಫೆಸರ್ ಬಿ. ಕೆ. ಬಿಚ್ಚುನುಡಿ, ಪ್ರೊ. ಬಿ. ಕೆ. ವಿಚಾರ ವೇದಿಕೆ, ರಾಯಚೂರು, ೧೯೯೮

೧೨. ಕೃಷ್ಣಪ್ಪ ಬಿ., ಪ್ರೊ. ಬಿ. ಕೃಷ್ಣಪ್ಪ ಚಿಂತನೆಗಳು ಮತ್ತು ಬರಹಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೧೩. ಕೃಷ್ಣಪ್ಪ ಬಿ., ಚಳವಳಿಗಳು ಮತ್ತು ಬರಹಗಳು, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು, ೨೦೦೦

೧೪. ಕೃಷ್ಣಸ್ವಾಮಿ ಸಿ. ಜಿ., ಕತ್ತಾಲೆ ಬೆಳದಿಂಗಳೊಳಗ (ಆತ್ಮಕಥನ), ರಂಗ ನಿರಂತರ, ಬೆಂಗಳೂರು, ೨೦೦೨

೧೫. ಗಂಗಾರಾಂ ಚಾಂಡಾಳ, ಕರ್ನಾಟಕ ದಲಿತ ಚಳವಳಿ ಮತ್ತು ಡಾ. ಬಿ. ಆರ್. ಅಂಬೇಡ್ಕರ್, ಚೈತ್ರಾ ಪ್ರಕಾಶನ, ಚಿಕ್ಕತಿರುಪತಿ, ೧೯೯೨

೧೬. ಗಂಗಾಧರ್ ಕುಷ್ಟಗಿ, (ಸಂ.), ತಲೆಮಾರಿನ ತಳಮಳ, ಕವಿತಾ ಪ್ರಕಾಶನ, ರಾಯಚೂರು, ೨೦೦೦

೧೭. ಚಂದ್ರಿಕಾ ಪಿ., (ಸಂ.), ಯಾರ ಜಪ್ತಿಗೂ ಸಿಗದ ನವಿಲುಗಳು, ಅಭಿನವ ಪ್ರಕಾಶನ, ಬೆಂಗಳೂರು, ೧೯೯೯

೧೮. ಚೆನ್ನಣ್ಣ ವಾಲೀಕಾರ್, ಕರ್ನಾಟಕ ದೇವದಾಸಿಯರ ಸಮಾಜೋ-ಧಾರ್ಮಿಕ ಆರ್ಥಿಕ ಶೈಕ್ಷಣಿಕ ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ, ವಾಲೀಕಾರ ವಿರಸಂ, ಗುಲ್ಬರ್ಗ, ೨೦೦೧

೧೯. ಚಂದ್ರಶೇಖರ್ ಎಸ್., ಅಂಬೇಡ್ಕರ್ ಮತ್ತು ಗಾಂಧಿ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೨

೨೦. ಚೆನ್ನಣ್ಣ ವಾಲೀಕಾರ್, ಸಮಗ್ರ ಕಥಾ ಸಂಪುಟ, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲ್ಬರ್ಗಾ, ೨೦೦೩

೨೧. ಚಂದ್ರಶೇಖರ್ ಟಿ. ಆರ್., (ಸಂ.), ದಲಿತ ಅಧ್ಯಯನ, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೫

೨೨. ತಂಬಂಡ ವಿಜಯ ಪೂಣಚ್ಚ, (ಸಂ.), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೪ ಚರಿತ್ರೆ, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೧

೨೩. ದೇವಯ್ಯ ಹರವೆ, **ದಲಿತ ಸಾಹಿತ್ಯ ಮತ್ತು ಇತರೆ ಲೇಖನಗಳು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೯

೨೪. ನರೇಂದ್ರ ರೈ ದೇರ್ಲ, (ಸಂ.), **ಲಂಕೇಶರ ನೆನಪು**, ಕರ್ನಾಟಕ ಸಂಘ, ಪುತ್ತೂರು, ೨೦೦೨

೨೫. ಪುಟ್ಟಯ್ಯ ಬಿ.ಎಂ., **ಕನ್ನಡ ದಲಿತ ಸಾಹಿತ್ಯ ಮತ್ತು ಪ್ರತಿ ಸಂಸ್ಕೃತಿ**, ಡಾಕ್ಟರೇಟ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ, ೧೯೯೭

೨೬. ಬೋರಲಿಂಗಯ್ಯ ಹಿ. ಚಿ., ಮತ್ತು ಹುಚ್ಚಪ್ಪ ಮಾಸ್ತರ ಎಸ್., (ಸಂ.), **ಕಾಗೋಡು ಚಳವಳಿ ಸುವರ್ಣ ಸಂಪುಟ**, ಮಲೆನಾಡು ಜಾನಪದ ಲೋಕ, ಶಿವಮೊಗ್ಗ, ೨೦೦೨

೨೭. ಭಟ್ ಸಿ. ಆರ್., ಮತ್ತು ಗುಂಡಣ್ಣ ಸಿ. ಕೆ., (ಸಂ.), **ಸಮುದಾಯ ೨೫ ಜನ ಸಂಸ್ಕೃತಿ ಜಾಥಾ, ಉತ್ಸವಗಳು**, ಸಮುದಾಯ, ಹುಬ್ಬಳ್ಳಿ-ಧಾರವಾಡ ಘಟಕ, ೨೦೦೦

೨೮. ಮುನಿವೆಂಕಟಪ್ಪ ವಿ., **ದಲಿತ ಚಳವಳಿ ಒಂದು ಅವಲೋಕನ**, ವಿಚಾರವಾದಿ ಪ್ರಕಾಶನ, ಮೈಸೂರು, ೧೯೯೮

೨೯. ಮೊಗಳ್ಳಿಗಣೇಶ್, (ಸಂ.), **ದಲಿತ ಚಿಂತನೆ**, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೩

೩೦. ಮಹೇಶ್, **ಮೀಸಲಾತಿ ಮತ್ತು ಭವಿಷ್ಯದ ಪಥಗಳು**, ವಿಮೋಚನಾ ಪ್ರಕಾಶನ, ಚಿತ್ರದುರ್ಗ, ೨೦೦೩

೩೧. ಮಹಾದೇವಯ್ಯ ಪಿ., (ಸಂ.), **ದಲಿತ ಮತ್ತು ಪರ್ಯಾಯ ರಾಜಕಾರಣ**, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೫

೩೨. ಮಹದೇವಯ್ಯ ಪಿ., (ಸಂ.), **ದಲಿತರು ಭಾಷೆ ಮತ್ತು ಸಮಾಜ**, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೬

೩೩. ಮೊಗಳ್ಳಿಗಣೇಶ್, **ದಲಿತ ಕಥನ**, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೬

೩೪. ರಾಘವೇಂದ್ರರಾವ್ ಎಚ್.ಎಸ್., (ಸಂ.), **ಶತಮಾನದ ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

೩೫. ರುದ್ರಪ್ಪ ಹನಗವಾಡಿ, (ಸಂ.), **ಸಂಘರ್ಷದ ರೂವಾರಿ ಪ್ರೊ. ಬಿ. ಕೆ.**, ಪಂಚಮ ಸಾಂಸ್ಕೃತಿಕ ಸಂಸ್ಥೆ, ಬೆಂಗಳೂರು, ೨೦೦೧

೩೬. ರಹಮತ ತರೀಕೆರೆ, (ಸಂ.), **ಮಾತು ತಲೆಯೆತ್ತುವ ಬಗೆ**, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೫

೩೭. ಲಕ್ಕಪ್ಪಗೌಡ ಎಚ್. ಜೆ., (ಸಂ.), **ಬಂಡಾಯ ಸಾಹಿತ್ಯ ಹತ್ತು ವರ್ಷ**, ಕನ್ನಡ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಬಿ.ಆರ್.ಪ್ರಾಜೆಕ್ಟ್, ೧೯೯೦

೩೮. ಲಂಕೇಶ್ ಪಿ., **ಟೀಕೆ ಟಿಪ್ಪಣಿ**, ಸಂಪುಟ-೧, ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೭

೩೯. ಲಕ್ಷ್ಮಣ್ ತೆಲಗಾವಿ, **ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು**, ಪ್ರಸಾರಾಂಗ, ಕ.ವಿ.ವಿ.ಹಂ., ೧೯೯೯

೪೦. ವೆಂಕಟೇಶ್ ಮೂರ್ತಿ ಎಚ್.ಟಿ., **ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಕರ್ನಾಟಕ ದಲಿತ ಚಳವಳಿ ಮತ್ತು ಸಾಹಿತ್ಯ**, ಡಾಕ್ಟರೇಟ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ೨೦೦೦

೪೧. ವೀರಯ್ಯ ಡಿ. ಎಸ್., **ದಲಿತ ಚಿಂತನೆ**, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೨೦೦೫

೪೨. ವಿರೂಪಾಕ್ಷಿ ಪೂಜಾರಹಳ್ಳಿ, (ಸಂ.), **ದಲಿತರು ಮತ್ತು ಚರಿತ್ರೆ**, ಪ್ರಸಾರಾಂಗ, ಕ.ವಿ.ವಿ.ಹಂ., ೨೦೦೫

೪೩. ಶ್ರೀಧರನ್ ಓ., **ಡಾ. ಅಂಬೇಡ್ಕರ್ ಚಿಂತನೆಯ ಬೆಳಕಿನಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಬಹುಜನ ಸಮಾಜ ಪಕ್ಷ**, ಕರ್ನಾಟಕ ದಲಿತ ಸಂಘರ್ಷ ಸಮಿತಿ ರಿ., ಬೆಂಗಳೂರು, ೨೦೦೦

೪೪. ಸರಜೂ ಕಾಟ್ಕರ್, **ಕನ್ನಡ ಮರಾಠಿ ದಲಿತ ಸಾಹಿತ್ಯ**, ವಿಮೋಚನಾ ಪ್ರಕಾಶನ, ಅಥಣಿ, ೧೯೯೬

೪೫. ಸಿದ್ಧಲಿಂಗಯ್ಯ, **ಊರು ಕೇರಿ** (ಆತ್ಮಕಥನ ಭಾಗ-೧), ಅಂಕಿತ ಪುಸ್ತಕ, ಬೆಂಗಳೂರು, ೨೦೦೦

೪೬. ಸಾಣಕಾರ ಎ. ಎಂ., (ಸಂ.), **ಮೀಸಲಾತಿ ಮತ್ತು ಸಾಮಾಜಿಕ ಧ್ರುವೀಕರಣ**, ಸಂಕೇತ ಪ್ರಕಾಶನ, ವಿಜಾಪುರ, ೨೦೦೩

೪೭. ಸೋಮಣ್ಣ ಜೆ., (ಸಂ.), **ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ**, ಚೇತನ ಬುಕ್ ಹೌಸ್, ಮೈಸೂರು, ೨೦೦೩

೪೮. ಸಿದ್ದಲಿಂಗಯ್ಯ, ಊರು ಕೇರಿ (ಆತ್ಮಕಥನ ಭಾಗ-೨), ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೬

೪೯. ಹಾರೋಗದ್ದೆ ಉಷಾ ರಮೇಶ್ ನಾಯಕ, ಶಿವಮೊಗ್ಗ ಜಿಲ್ಲೆಯ ಶತಮಾನದ ಮಹಾನ್ ಪ್ರತಿಭೆಗಳು, ಭಾಗ-೧, ಭೂಮಿಕಾ ಪ್ರಕಾಶನ, ಬೆಂಗಳೂರು, ೨೦೦೨

೫೦. ಹೊನ್ನಯ್ಯ ಸಿ.ಬಿ., ಕನ್ನಡ ಸಣ್ಣ ಕಥೆಗಳಲ್ಲಿ ದಲಿತ ಸಂಸ್ಕೃತಿ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು,೨೦೦೪

ಆಯ್ದ ನಿಯತಕಾಲಿಕೆಗಳು

೧. ಅಂಕಣ

೨. ಅನ್ವೇಷಣೆ

೩. ಆಂದೋಲನ

೪. ಇಂಡಿಯನ್ ಎಕ್ಸ್‌ಪ್ರೆಸ್

೫. ಉದಯವಾಣಿ

೬. ಕನ್ನಡ ಪ್ರಭ

೭. ಕನ್ನಡ ನುಡಿ

೮. ಕೋಲಾರ ಪತ್ರಿಕೆ

೯. ದೆಕ್ಕನ್ ಹೆರಾಲ್ಡ್

೧೦. ಜನತಾ ವಾಣಿ

೧೧. ಜನವಾರ್ತೆ

೧೨. ಜನಪದ ವಿಚಾರ

೧೩. ಜನಹಿತ ಬಹುಮತ

೧೪. ಪಂಚಮ ಸಂಚಿಕೆಗಳು

೧೫. ಪ್ರಜಾವಾಣಿ

೧೬. ಪ್ರಜಾಮತ

೧೭. ಮಾರ್ದನಿ

೧೮. ಮಲ್ನಾಡ್ ವಾಣಿ

೧೯. ಮೈಸೂರು ಮಿತ್ರ

೨೦. ಲಂಕೇಶ್ ಪತ್ರಿಕೆ

೨೧. ವರ್ಗ ಸಮರ

೨೨. ಶೂದ್ರ

೨೩. ಸಂಯುಕ್ತ ಕರ್ನಾಟಕ

೨೪. ಸುದ್ದಿ ಸಂಗಾತಿ

೨೫. ಸುಧಾ

೨೬. ಸಂವಾದ

೨೭. ಸಾಧನೆ

೨೮. ಸಂಕ್ರಮಣ

೨೯. ಸಾಹಿತ್ಯ ಸಂಗಾತಿ

೩೦. ಸಂಬುದ್ಧ ಕರ್ನಾಟಕ

೩೧. ಹೊಸತು

೩೨. ಹೊನ್ನುಡಿ

೩೩. ಹೊನ್ನರ

ಅನುಬಂಧ ಎರಡು

೧೯೮೦ ರ ಅಕ್ಟೋಬರ್ ತಿಂಗಳು ದಲಿತರ ಮೇಲೆ ನಡೆದ ಹಲ್ಲೆದಬ್ಬಾಳಿಕೆ ಪ್ರಕರಣಗಳನ್ನು ಕುರಿತು ಪೋಲೀಸ್ ನಿಷ್ಕ್ರಿಯತೆ ಬಗ್ಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ವರದಿ. ಆಗ ದ.ಸಂ.ಸ.ಯ ರಾಜ್ಯ ಸಂಚಾಲಕರಾಗಿದ್ದ ಬಿ. ಕೃಷ್ಣಪ್ಪನವರು ತಮ್ಮ ಸ್ವಹಸ್ತಾಕ್ಷರದಿಂದ ಬರೆದ ವರದಿಯಾಗಿದೆ.

೧೯೮೦ ರ ಅಕ್ಟೋಬರ್ ತಿಂಗಳು ದಲಿತರ ಮೇಲೆ ನಡೆದ ಹಲ್ಲೆ ದಬ್ಬಾಳಿಕೆ ಪ್ರಕರಣಗಳನ್ನು ಕುರಿತು ಪೋಲೀಸ್ ನಿಷ್ಕ್ರಿಯತೆ ಬಗ್ಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ವರದಿ

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಹಳ್ಳಿ	ಕೇಸು
೧.	ಶಿವಮೊಗ್ಗ	ಚನ್ನಗಿರಿ	ಚಿರಡೋಣಿ	ಚಿರಡೋಣಿ ಪಿ. ಪರಮೇಶ್ವರನ ಆಡು ಕಳೆದವು. ಕದ್ದವರು ರಾಮಚಂದ್ರಪ್ಪ, ಶಂಕ್ರಪ್ಪ ಅಲ್ಲ. ಆದರೆ ಸಂತೆಬೆನ್ನೂರು ಹೋಬಳಿ ಪೋಲಿಸು ಇ. ಡಿಸೋಜ, ಎ.ಎಸ್.ಬಸವರಾಜ, ಭೀಮರಾವ್, ದಫೇದಾರ್ ಸೂರ್ಯವಂಶಿ, ಎಸ್.ಪಿ.ಪೂವಯ್ಯ ಅವರಿಗೆ ಚಿತ್ರ ಹಿಂಸೆ ಕೊಟ್ಟು, ಪೋಲೀಸ್ ಠಾಣೆಯಲ್ಲಿ ಸುಮಾರು ೭೦೦ ರೂ ವಸೂಲಿ ಮಾಡಿರುತ್ತಾರೆ. ಇದನ್ನು ಪ್ರತಿಭಟಿಸಿ ತಾ ೧೨.೧೦.೮೦ ರಂದು ಬಹಿರಂಗ ಸಭೆ ಮೆರವಣಿಗೆ ಮಾಡಲಾಗಿದೆ. **ಪೋಲೀಸು ಕ್ರಮ ಜರುಗಿಸಲಾಗಿಲ್ಲ**
೨.	ಶಿವಮೊಗ್ಗ	ಚನ್ನಗಿರಿ	ಪಾಂಡೊಮಟ್ಟಿ	ಹರಿಜನರ ಮೇಕೆ ಸವರ್ಣೀಯರ ಹೊಲ ನುಗ್ಗಿದ ಕಾರಣಕ್ಕಾಗಿ ೨೫೦ ಜನ ಲಿಂಗಾಯತರು ಕೊಡಲಿ-ಕುಡುಗೋಲು ಇತ್ಯಾದಿ ಆಯುಧಗಳಿಂದ ಹರಿಜನ ಕೇರಿಗೆ ನುಗ್ಗಿ ಹಲ್ಲೆ ನಡೆಸಿದರು. ೩೦ ಜನಕ್ಕೆ ಗಾಯಗಳಾಗಿ ಆಸ್ಪತ್ರೆ ಸೇರಿಸಲಾಗಿದೆ. ಮೂವರ ಸ್ಥಿತಿ ಚಿಂತಾಜನಕವಾಗಿದೆ. ಇದನ್ನು ಪ್ರತಿಭಟಿಸಿ ೨೪.೧೦.೮೦ ರಂದು ಚನ್ನಗಿರಿಯಲ್ಲಿ ಬಹಿರಂಗ ಸಭೆ-ಮೆರವಣಿಗೆ ಮಾಡಲಾಗಿದೆ. **ಚನ್ನಗಿರಿ ಸಿ.ಐ. ಶಿವಲಿಂಗೇಗೌಡ ಅಪರಾಧಿಗಳಿಂದ ೮೦೦೦ ರೂ ಪಡೆದು ಅವರನ್ನು ಬಿಟ್ಟಿರುತ್ತಾರೆ. ಕ್ರಮ ಇಲ್ಲ**

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಹಳ್ಳಿ	ಕೇಸು
೩.	ತುಮಕೂರು	ತಿಪಟೂರು	ಕುಂದೂರು	ಸಾರ್ವಜನಿಕ ತೊಟ್ಟಿಯಲ್ಲಿ ನೀರು ಮುಟ್ಟಿದ ಕಾರಣಕ್ಕಾಗಿ ಹರಿಜನರಿಗೆ ಸಾರ್ವಜನಿಕ ಬಹಿಷ್ಕಾರ ಹಾಕಲಾಗಿದೆ. ಅಂಗಡಿಗಳಲ್ಲಿ ದವಸ ಸಿಕ್ಕುತ್ತಿಲ್ಲ. ಕೋಳಿಗಳನ್ನು ಸಾಯಿಸಲಾಗುತ್ತಿದೆ. ಹರಿಜನ ಕೇರಿಯನ್ನು ಪೆಟ್ರೋಲ್ ಹಾಕಿ ಸುಡಲು ಗುಪ್ತವಾಗಿ ಕಾರ್ಯಾಚರಣೆ ನಡೆಯುತ್ತಿದೆ. ರಸ್ತೆಯಲ್ಲಿ ಹರಿಜನರು ತಿರುಗಾಡುವಂತಿಲ್ಲ. ಈ ಬಗ್ಗೆ ತಾ ೨೧.೧೦.೮೦ ರಂದು ಪೋಲೀಸರಿಗೆ ಮನವಿ ಸಲ್ಲಿಸಲಾಗಿದೆ. **ಪೋಲೀಸು ಕ್ರಮ ಜರುಗಿಸಲಾಗಿಲ್ಲ**
೪.	ಮಂಡ್ಯ	ಮಳವಳ್ಳಿ	ಕಾಡುಕೊತ್ತನ ಹಳ್ಳಿ	ಸ್ಮಶಾನ ಭೂಮಿಗಾಗಿ ಹರಿಜನರಿಗೂ ಸವರ್ಣೀಯರಿಗೂ ತಗಾದೆ. ಸವರ್ಣೀಯರ ಪರವಾಗಿ ಮಳವಳ್ಳಿ ಸಿ.ಐ.ರಾಮಚಂದ್ರಯ್ಯ, ಕಾಳಮುದ್ದನ ದೊಡ್ಡಿ ಎಸ್.ಐ ನಾಗರಾಜು, ಹರಿಜನಕೇರಿಗೆ ನುಗ್ಗಿ ಹಲ್ಲೆ, ಪೋಲೀಸು ಠಾಣೆಯಲ್ಲಿ ಹರಿಜನರಿಗೆ ಬೆತ್ತಲೆ ಮಾಡಿ ಥಡಿ ಏಟು. ೩ ಜನರನ್ನು ಆಸ್ಪತ್ರೆಗೆ ದಾಖಲೆಮಾಡಲಾಗಿದೆ. ಇದನ್ನು ಪ್ರತಿಭಟಿಸಿ ೨೧.೧೦.೮೦ ರಿಂದ ೨೬.೧೦.೮೦ ರ ವರೆಗೆ ಜಿಲ್ಲಾ ಪೋಲೀಸು ಠಾಣೆ ಮುಂದೆ ಧರಣಿ ಸತ್ಯಾಗ್ರಹ ಮಾಡಲಾಯಿತು. ಆದರೆ ಪೋಲೀಸ್ ಅಧಿಕಾರಿಗಳು ೩೪ ನೇ ಸೆಕ್ಷನ್ ಹಾಕಿ ಸತ್ಯಾಗ್ರಹಿಗಳನ್ನು ಬಂಧಿಸಿದರು.ಬಂಧಿತರನ್ನು ಬಿಡುಗಡೆ ಮಾಡಲಾಗಿದೆ. ಈ ಬಗ್ಗೆ ತಾ ೨.೧೧.೮೦ ರಂದು ಮಂಡ್ಯದಲ್ಲಿ ಬೃಹತ್ ಮೆರವಣಿಗೆ, ಬಹಿರಂಗ ಸಭೆ ಮಾಡಲಾಯಿತು. **ಪೋಲೀಸು ಕ್ರಮ ಜರುಗಿಸಲಾಗಿಲ್ಲ**

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಹಳ್ಳಿ	ಕೇಸು
೫.	ತುಮಕೂರು	ಮಧುಗಿರಿ	ಇಟಕ ದಿಬ್ಬನಹಳ್ಳಿ	ದೊಡ್ಡಮಲ್ಲಪ್ಪನೆಂಬ ದಲಿತ ಕೊಂಡಾರೆಡ್ಡಿ ಹೊಲದಲ್ಲಿ ಸ್ವಾಡೆ ಸೊಪ್ಪು ಕೊಯ್ದ ಕಾರಣ ದೊಡ್ಡಮಲ್ಲಪ್ಪನ ಕೊಲೆ. ಪೋಲೀಸರು ಕೊಂಡಾರೆಡ್ಡಿ ಪರ ಶಾಮೀಲಾಗಿದ್ದಾರೆ. ಈ ಬಗ್ಗೆ ೨೪.೯.೮೦ ರಂದು ಬೃಹತ್ ಮೆರವಣಿಗೆ ಬಹಿರಂಗ ಸಭೆ ಮಾಡಲಾಗಿದೆ. **ಪೋಲೀಸು ಕ್ರಮ ಜರುಗಿಸಲಾಗಿಲ್ಲ**
೬.	ಕೋಲಾರ	ಶ್ರೀನಿವಾಸಪುರ	ಕೇತಗಾನಹಳ್ಳಿ	ಕೇತಗಾನಹಳ್ಳಿಯ ಹರಿಜನರಿಗೆ ಸವರ್ಣೀಯರಿಂದ ಕಿರುಕುಳ ಈ ಬಗ್ಗೆ ತಿಳಿಸಿಲು ಪೋಲೀಸು ಠಾಣೆಗೆ ಹೋದಾಗ ಎಸ್.ಐ. ನೂರುಲ್ಲಾಖಾನ್ ಅಸಭ್ಯವಾಗಿ ವರ್ತಿಸಿ ಅವ್ಯಾಚ ಶಬ್ದಗಳಿಂದ ಹೀಯಾಳಿಸಿರುತ್ತಾರೆ. ಇದನ್ನು ಪ್ರತಿಭಟಿಸಿ ತಾ. ೩೦.೧೦.೮೦ ರಂದು ಪ್ರತಿಭಟನೆ-ಮೆರವಣಿಗೆ-ಬಹಿರಂಗ ಸಭೆ ಮಾಡಲಾಯಿತು. **ಪೋಲೀಸು ಕ್ರಮ ಜರುಗಿಸಲಾಗಿಲ್ಲ** ಬಿ. ಕೃಷ್ಣಪ್ಪ ರಾಜ್ಯ ಸಂಚಾಲಕ ಕರ್ನಾಟಕ ದಲಿತ ಸಂಘರ್ಷ ಸಮಿತಿ ೧.೧೧.೧೯೮೦. ಶನಿವಾರ ಭದ್ರಾವತಿ

ಅನುಬಂಧ ಮೂರು

ದೇವಲಾಪುರ ಭೂ ಹೀನ ದಲಿತರಿಗೆ ಭೂಮಿ ಹಂಚುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುವ ಮೊದಲು ಮುಖ್ಯಮಂತ್ರಿ ಹಾಗೂ ಅರಣ್ಯಮಂತ್ರಿಗೆ ಪ್ರೊ.ಬಿ.ಕೃಷ್ಣಪ್ಪನವರು ಬರೆದ ಪತ್ರ

ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ

ಅರಣ್ಯ ಮಂತ್ರಿಗಳು
ಕರ್ನಾಟಕ ರಾಜ್ಯ
ಬೆಂಗಳೂರು

ದಿ. ೭.೧೧.೮೩
ಭದ್ರಾವತಿ

ಮಾನ್ಯರೆ,

ನಿಮ್ಮಿಂದ ಆದೇಶಿಸಲ್ಪಟ್ಟಿರುವ ನಿಮ್ಮ ಆಪ್ತ ಕಾರ್ಯದರ್ಶಿಯವರ ತಾ. ೨೫.೧೦.೮೩ ರ ಪತ್ರವು ನಮಗೆ ೨೮.೧೦.೮೩ ರಂದು ತಲುಪಿತು. ಪತ್ರಿಕೆಗಳ ಮೂಲಕ ಈಗಾಗಲೆ ನಿಮಗೆ ದೇವಲಾಪುರ ಭೂಹೀನ ದಲಿತರಿಗೆ ಭೂಮಿ ಹಂಚುವ ಬಗ್ಗೆ ತಾ. ೧೪.೧೧.೮೩ ರಂದು ಮುಖ್ಯಮಂತ್ರಿ ಹಾಗೂ ನಿಮ್ಮ ನಿವಾಸದ ಮುಂದೆ ದಲಿತ ಸಂಘರ್ಷ ಸಮಿತಿಯು ಧರಣಿ ಹಾಗೂ ಪಿಕೆಟಿಂಗ್ ನಡೆಸುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ತಿಳಿದಿರಬಹುದು.

ನಿಮ್ಮ ಪತ್ರವನ್ನು ಗಮನದಲ್ಲಿಟ್ಟುಕೊಂಡು ಚಳುವಳಿಗಾಗಿ ಚಳುವಳಿ ಮಾಡಬೇಕೆಂಬ ಉದ್ದೇಶವಿಲ್ಲದೆ ಪರಸ್ಪರ ಮಾತುಕತೆಗಳ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವ ನಂಬಿಕೆ ನಮಗಿರುವುದರಿಂದ ತಾತ್ಕಾಲಿಕವಾಗಿ ತಾ. ೧೪.೧೧.೮೩ ರ ಚಳುವಳಿಯನ್ನು ಮುಂದೂಡಿ ನಿಮ್ಮ ಪತ್ರದಲ್ಲಿ ಸೂಚಿಸಿರುವಂತೆ ತಾ. ೨೧.೧೧.೮೩ ರಂದು ಬೆಳಿಗ್ಗೆ ೧೦ ಗಂಟೆಗೆ ನಿಮ್ಮನ್ನು ಭೇಟಿಮಾಡುತ್ತೇವೆ.

ಇಂತಿ ನಿಮ್ಮ

ಬಿ. ಕೃಷ್ಣಪ್ಪ
ರಾಜ್ಯನಿರ್ವಾಹಕ

ವಿಳಾಸ:

ಬಿ. ಕೃಷ್ಣಪ್ಪ
ಎಫ್.ಎ. ೧೨೩
ಕಾಗದ ನಗರ
ಭದ್ರಾವತಿ

ಅನುಬಂಧ ನಾಲ್ಕು

ಧರ್ಮಸ್ಥಳದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಕೂಡದೆಂದು ತೀರ್ಮಾನಿಸಲು ಎಲ್ಲಾ ಸಂಚಾಲಕರು ರಾಜ್ಯ ಸಮಿತಿಯಲ್ಲಿ ಭಾಗವಹಿಸಲು ಕೋರಿ ಪ್ರೊ. ಬಿ. ಕೃಷ್ಣಪ್ಪನವರು ಬರೆದ ಪತ್ರ.

(ಈ ಪತ್ರದಲ್ಲಿ ಪ್ರೊ. ಬಿ. ಕೆ. ಅವರಿಗಿರುವ ದಲಿತರ ಬಗೆಗಿರುವ ಸಾಹಿತ್ಯದ ಪರಿಕಲ್ಪನೆ ಮತ್ತು ಸ್ವರೂಪ ಹೇಗಿತ್ತೆಂಬುದು ಸ್ಪಷ್ಟವಾಗುತ್ತದೆ.)

ಕರ್ನಾಟಕ ದಲಿತ ಸಂಘರ್ಷ ಸಮಿತಿ

ರಾಜ್ಯ ಸಮಿತಿ

ಗೆಳೆಯರೆ,

ಇತ್ತೀಚಿಗೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯಕ್ಕೆ ಪ್ರಾತಿನಿಧ್ಯ, ಬಂಡಾಯ ಸಾಹಿತ್ಯ ಸಮ್ಮೇಳನ ಇತ್ಯಾದಿಗಳ ಬಗ್ಗೆ ಪತ್ರಿಕೆಗಳಲ್ಲಿ ವಾದ ವಿವಾದಗಳು ನಡೆಯುತ್ತಿರುವುದು ಸರಿಯಷ್ಟೆ. ಧರ್ಮಸ್ಥಳದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದಲ್ಲಿ ನಾವು ಯಾರೂ ಭಾಗವಹಿಸಕೂಡದೆಂದು ತೀರ್ಮಾನಿಸಿದ್ದೇವೆ. ಕಾರಣ ಅದು ಪಟ್ಟಭದ್ರ, ಪ್ರತಿಗಾಮಿ ಸಂಸ್ಥೆಯಾಗಿದೆ. ಅದೇ ಕಾಲಕ್ಕೆ ಬೆಂಗಳೂರಿನಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಲಿದ್ದು ಅದನ್ನು ಕೆಲವು ಪ್ರಗತಿಪರರು ಮತ್ತು ಬೆಂಗಳೂರು ದ.ಸಂ.ಸ. ಗೆಳೆಯರು ಜಂಟಿಯಾಗಿ ಹಮ್ಮಿಕೊಂಡಿದ್ದು, ಅದು ಮಾರ್ಚ್ ತಾ. ೧೦ ಮತ್ತು ೧೧ ರಂದು ನಡೆಯಲಿದೆ. ಆದರೆ ಕೆಲವು ಗೆಳೆಯರು ೧೦, ೧೧ನೇ ತಾರೀಖಿಗೆ ಏಕೆ ಮಾಡಬೇಕು? ಏಕೆಂದರೆ ಅದೇ ಕಾಲದಲ್ಲಿ ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆಯಲ್ಲ! ಬೇರೆ ತಾರೀಖಿನಲ್ಲಿ ಮಾಡಬಾರದೇಕೆ? ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಆದರೆ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನವು ಪ್ರತಿಗಾಮಿ ಎಂದು ತೀರ್ಮಾನಿಸಿದ ಮೇಲೆ, ಬಂಡಾಯ ಸಾಹಿತ್ಯ ಸಮ್ಮೇಳನವು ಯಾವ ತಾರೀಖಿನಲ್ಲಾದರೇನು? ಬಂಡಾಯ ಸಾಹಿತ್ಯ ಸಮ್ಮೇಳನವು ೧೦, ೧೧ನೆಯ ತಾರೀಖಿನಲ್ಲಿ ನಡೆಯುತ್ತಿರುವುದು ಕರ್ನಾಟಕದ ಕೆಲವು ಕ್ರಾಂತಿಕಾರಿಗಳಿಗೆ ಒಡ್ಡಿದ ಅಗ್ನಿ ಪರೀಕ್ಷೆ. ಅವರು ನಿಜವಾಗಿಯೂ ಕ್ರಾಂತಿಕಾರಿಗಳಾಗಿದ್ದರೆ ಧರ್ಮಸ್ಥಳದ ಸಮ್ಮೇಳನವನ್ನು ಬಿಟ್ಟು ಬರಲಿ. ಆ ಬಗ್ಗೆ ದ. ಸಂ. ಸ. ದ ಗೆಳೆಯರು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ನಮ್ಮಲ್ಲಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಸರಿಪಡಿಸಿಕೊಳ್ಳೋಣ. ಆದರೆ ಪ್ರಗತಿಪರ ಧೋರಣೆಯನ್ನು ಹೊಂದಿರುವ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ತಪ್ಪೆಂದು ಹೇಳುವುದಾಗಲಿ, ಆ ರೀತಿ ನಡೆದುಕೊಳ್ಳುವುದಾಗಲಿ ಸರಿಯಲ್ಲ. ಹಾಗೆ ಹೇಳಿದರೆ ನಾವು ಪ್ರಗತಿ ವಿರೋಧಿಗಳಾಗುತ್ತೇವೆ ಅಷ್ಟೆ.

೧. ಬಂಡಾಯ ಸಾಹಿತ್ಯ ಚಳುವಳಿಯಲ್ಲಿ ದ. ಸಂ. ಸ. ಪಾತ್ರವೇನು?

೨. ಹಾಲಿ ಕರ್ನಾಟಕದಾದ್ಯಂತ ದ.ಸಂ.ಸ. ಎದುರಿಸುತ್ತಿರುವ ಸಮಸ್ಯೆಗಳಾವುವು.

೩. ದ. ಸಂ. ಸ. ಪ್ರಣಾಳಿಕೆ ಇತ್ಯಾದಿಗಳ ಬಗ್ಗೆ ಬೆಂಗಳೂರಿನಲ್ಲಿ ತಾ. ೧೦.೦೩.೭೯ ರ ಸಂಜೆ ರಾಜ್ಯ ಸಮಿತಿಯ ಸಭೆಯನ್ನು ಕರೆಯಲಾಗಿದೆ. ಆದ್ದರಿಂದ ಎಲ್ಲಾ ಜಿಲ್ಲಾ ಸಂಚಾಲಕರು ತಮ್ಮ ತಮ್ಮ ತಾಲ್ಲೂಕು ಸಂಚಾಲಕರೊಂದಿಗೆ ತಪ್ಪದೇ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಮಧ್ಯೆ ಎಲ್ಲಾ ದ. ಸಂ. ಸ. ಶಾಖೆಗಳು ಪ್ರಗತಿವಾದಿ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಬೆಂಬಲಿಸಿ ಪತ್ರಿಕಾ ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಂತಿ ನಿಮ್ಮ

ಬಿ. ಕೃಷ್ಣಪ್ಪ

ರಾಜ್ಯ ಸಂಚಾಲಕರು

ಅನುಬಂಧ ಐದು

ಭೂ ಪರಭಾರೆ ಕಾಯ್ದೆಯನ್ನು ಉಲ್ಲಂಘಿಸಿ ಮೇಲ್ವರ್ಗದವರು ಹೈಕೋರ್ಟ್‌ನಿಂದ ತಂದ ತಡೆಯಾಜ್ಞೆಯನ್ನು ತೆರವುಗೊಳಿಸಲು ಪ್ರೊ. ಬಿ. ಕೆ. ಅವರು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿ.

ಕರ್ನಾಟಕ ದಲಿತ ಸಂಘರ್ಷ ಸಮಿತಿ - ಕರ್ನಾಟಕ ರಾಜ್ಯ

ಮನವಿ

ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಬೆಂಗಳೂರು

ಮಾನ್ಯರೆ,

ವಿಷಯ: ಹೈಕೋರ್ಟ್ ತಡೆಯಾಜ್ಞೆಗಳನ್ನು ತೆರವು ಮಾಡುವ ಬಗ್ಗೆ

೬೫ ಲಕ್ಷಕ್ಕೂ ಮಿಕ್ಕಿ ಪರಿಶಿಷ್ಟಜಾತಿ/ವರ್ಗದ ಜನ ಕರ್ನಾಟಕ ರಾಜ್ಯದಲ್ಲಿ ವಾಸಮಾಡುತ್ತಿದ್ದು, ಕಳೆದ ೩೫ ವರ್ಷಗಳಿಂದ ದೇವರಿಗೆ ಮುಡಿಪು ಸಲ್ಲಿಸುವಂತೆ, ಕಾಂಗ್ರೆಸ್ ಸರ್ಕಾರಕ್ಕೆ ಓಟು ಮಾಡುತ್ತಾ ಬಂದಿದ್ದಾರೆ. ಆದರೂ ಅವರ ಗೋಳು ಕೇಳುವವರಿಲ್ಲದಾಗಿದೆ. ಬಡವರ ಪರವಾಗಿ ಸರ್ಕಾರ ಕಾನೂನು ಮಾಡುವುದು ಮುಖ್ಯ. ಆದರೆ ಮಾಡಿದ ಕಾನೂನುಗಳನ್ನು ಜಾರಿ ಮಾಡುವಂತೆ ನೋಡಿಕೊಳ್ಳುವುದು ಎಲ್ಲಕ್ಕಿಂತ ಮುಖ್ಯವಾಗಿದೆ.

ಬಡ ಹರಿ/ಗಿರಿಜನರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರ ಹಂಚಿದ್ದ ಭೂಮಿಯನ್ನು ಬಲಾಢ್ಯರು ಅಕ್ರಮವಾಗಿ, ದೌರ್ಜನ್ಯದಿಂದ ಲಪಟಾಯಿಸಿದ್ದಾರೆ. ಹಾಗೆ ಹಂಚಿದ ಒಟ್ಟು ಭೂಮಿಯಲ್ಲಿ ಕನಿಷ್ಠ ಶೇಕಡಾ ಒಂದರಷ್ಟು ಭೂಮಿ ಕೂಡ ಅವರ ಕೈಯಲ್ಲಿ ಉಳಿದಿಲ್ಲ. ಭೂಮಿ ಹಂಚುವಾಗ ಸರ್ಕಾರವು ಇಂಥ ದರಖಾಸ್ತು ಭೂಮಿಗಳನ್ನು ೧೫ ವರ್ಷಗಳವರೆಗೆ ಯಾರೂ ಕೊಳ್ಳಕೂಡದೆಂದು ಷರತ್ತು ಹಾಕಿದ್ದರೂ ಕೂಡ ಮೇಲ್ವರ್ಗದ ಜನ ಸರ್ಕಾರದ ಕಾನೂನುಗಳನ್ನು ಉಲ್ಲಂಘಿಸಿ ಅಕ್ರಮವಾಗಿ ಬಡ ಹರಿ/ಗಿರಿ ಜನರಿಂದ ಭೂಮಿ ಕಬಳಿಸಿದ್ದಾರೆ. ಕೈಗೆ ಬಂದ ತುತ್ತು ಬಾಯಿಗೆ ಬಾರದೆ ಎಲ್ಲಾ ಪರಿಶಿಷ್ಟಜಾತಿ/ವರ್ಗದ ಜನ ಬಾಯಿ ಬಾಯಿ ಬಿಡುವಂತಾಗಿದೆ.

ಹಿಂದುಳಿದವರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಕರ್ನಾಟಕ ಸರ್ಕಾರವು ೧೯೭೮ ಜನವರಿ ೩೦ ರಂದು ವಿಶೇಷ ಆಜ್ಞೆಯೊಂದನ್ನು ಹೊರಡಿಸಿ, ಪರಿಶಿಷ್ಟಜಾತಿ/ವರ್ಗದ ಜನರಿಗೆ ಇದುವರೆಗೂ ದರಖಾಸ್ತಿನಲ್ಲಿ ಹಂಚಿದ ಭೂಮಿಯನ್ನು ಅಕ್ರಮ ಸಾಗುವಳಿದಾರರಿಂದ ಬಿಡಿಸಿ ಕೊಡುವುದಾಗಿ ಆದೇಶ ಹೊರಡಿಸಿತು. ಸರ್ಕಾರದ ಆಜ್ಞೆಯ ಪ್ರಕಾರ, ಆಯಾ ಜಿಲ್ಲೆಯ ರೆವಿನ್ಯೂ ವಿಭಾಗದ ಅಧಿಕಾರಿಗಳು ಅಕ್ರಮ ಸಾಗುವಳಿದಾರರಿಂದ ಹರಿ/ಗಿರಿಜನರಿಗೆ ಭೂಮಿ ಬಿಡಿಸಿ ಕೊಡುವ ಯತ್ನ ಮಾಡಿದರು. ಇದರಿಂದ ಕೋಪಗೊಂಡ ಭೂಮಾಲೀಕರು ಸರ್ಕಾರದ ಆಜ್ಞೆ ವಿರುದ್ಧ ಹೈಕೋರ್ಟ್‌ನಲ್ಲಿ ತಡೆಯಾಜ್ಞೆಯನ್ನು ತಂದಿರುತ್ತಾರೆ. ಇಂಥ ತಡೆಯಾಜ್ಞೆಗಳ ಒಟ್ಟು ಸಂಖ್ಯೆ ೨೦,೦೦೦ ಮೀರಿರುವುದಾಗಿ ತಿಳಿದು ಬಂದಿದೆ. ಅಕ್ರಮ ಸಾಗುವಳಿದಾರರ ವಿರುದ್ಧ ಕ್ರಮ ತೆಗೆದುಕೊಳ್ಳುವ ಮತ್ತು ಹೈಕೋರ್ಟ್ ತಡೆಯಾಜ್ಞೆಗಳನ್ನು ರದ್ದುಗೊಳಿಸುವ ಹೊಣೆಗಾರಿಕೆ ಸರ್ಕಾರದ ತಲೆಯ ಮೇಲಿದೆ.

ಇಂಥ ತಡೆಯಾಜ್ಞೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಲು ದಲಿತ ಸಂಘರ್ಷ ಸಮಿತಿಯು ೧೯೮೦ ಆಗಸ್ಟ್ ೧೫ ರಂದು ಬೆಂಗಳೂರು ರಾಜಧಾನಿಯಲ್ಲಿ ೧೦ ಸಾವಿರ ಜನರ ಮೆರವಣಿಗೆಯನ್ನು ತೆಗೆದು, ನಿಮಗೆ ಮನವಿಯೊಂದನ್ನು ಅರ್ಪಿಸಲಾಯಿತು.

ತಾವುಗಳು ಆದಷ್ಟು ಬೇಗ ತಡೆಯಾಜ್ಞೆ ರದ್ದುಗೊಳಿಸಿಕೊಡುವ ಭರವಸೆ ಕೊಟ್ಟಿರಿ. ಪುನಃ ೧೯೮೧ ಆಗಸ್ಟ್ ೧೫ ರಂದು ನಾವು ನಿಮ್ಮನ್ನು ಹಾಗೂ ರಾಜ್ಯ ಕಂದಾಯ ಮಂತ್ರಿಗಳನ್ನು ಭೇಟಿ ಮಾಡಿದಾಗ, ಆಗಲೂ ಮಾಡಿಸಿಕೊಡುವ ಭರವಸೆ ಕೊಟ್ಟಿರಿ. ಈ ಮಧ್ಯೆ ನಾವು ಹೈಕೋರ್ಟ್ ಛೀಫ್‌ಜಸ್ಟೀಸ್, ಅಡ್ವೊಕೇಟ್ ಜನರಲ್ ಇವರನ್ನು ಭೇಟಿ ಮಾಡಿರುತ್ತೇವೆ. ಆದರೆ ಒಟ್ಟು ನಮ್ಮ ಭೇಟಿ, ಬೇಡಿಕೆಯಾಗಿಯೇ ಉಳಿದಿದೆ, ತತ್ಕಾಲದಲ್ಲಿ ಪರಿಹಾರವಂತೂ ಸಿಕ್ಕದಾಗಿದೆ.

ನೀವು ದಲಿತರ ಪರವಾಗಿ ಅಂಬೇಡ್ಕರ್ ಶಿಲಾಮೂರ್ತಿ, ತೈಲಚಿತ್ರಗಳನ್ನು ಪ್ರತಿಷ್ಠಾಪಿಸಿದ್ದೀರಿ. ವಿಧಾನಸಭೆಗೆ ಅಂಬೇಡ್ಕರ್ ವೀಧಿ ಎಂಬ ಹೆಸರನ್ನು ಇಟ್ಟಿದ್ದೀರಿ. ಅಂಬೇಡ್ಕರ್ ಮೆಡಿಕಲ್ ಕಾಲೇಜು ಕೊಟ್ಟಿದ್ದೀರಿ. ಇಂಥ ಕೆಲಸಗಳು ಶ್ಲಾಘನೀಯವಾಗಿದೆ. ಈ ಮೊದಲಾದ ಶ್ಲಾಘನೀಯ ಕೆಲಸಗಳ ಜೊತೆಗೆ, ಸಹಸ್ರಾರು ಹೊಟ್ಟೆಗಿಲ್ಲದ ಬಡ ಹರಿ/ಗಿರಿಜನರಿಗೆ ಅನ್ನ ಕೊಡುವ ಭೂಮಿ ಬಿಡಿಸಿಕೊಡುವುದು ಅದಕ್ಕಿಂತಲೂ ಹೆಚ್ಚಿನದೆಂದು ನಾವು ಭಾವಿಸುತ್ತೇವೆ. ತಾವು ನಮ್ಮ ಮಾತುಗಳನ್ನು ಗಂಭೀರವೆಂದು ಭಾವಿಸಿ ಈ ಬಗ್ಗೆ ಕೂಡಲೆ ನಿರ್ಣಯ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಇಂತಿ ನಿಮ್ಮ

ಬಿ. ಕೃಷ್ಣಪ್ಪ

ರಾಜ್ಯ ಸಂಚಾಲಕ

ಕರ್ನಾಟಕ ದಲಿತ ಸಂಘರ್ಷ ಸಮಿತಿ ಪರವಾಗಿ

ಅನುಬಂಧ ಆರು

ದಲಿತ ಸಂಘರ್ಷಕ್ಕಿರಬೇಕಾದ ಸೈದ್ಧಾಂತಿಕ ದೃಷ್ಟಿಕೋನ ಮತ್ತು ರಾಜಕೀಯ ನಿಲುವುಗಳೇನು ಎಂಬುದನ್ನು ಸ್ಪಷ್ಟಪಡಿಸುವ ಪ್ರೊ. ಬಿ. ಕೆ. ಅವರು ಪ್ರಕಟಿಸಿದ ಪತ್ರ

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸೈದ್ಧಾಂತಿಕ ದೃಷ್ಟಿಕೋನ ಮತ್ತು ರಾಜಕೀಯ ನಿಲುವುಗಳು

ಭಾರತೀಯ ಸಮಾಜವು ಜಾತಿ ಮತ್ತು ವರ್ಗಗಳಿಂದ ಕೂಡಿದೆ. ಮೇಲ್ವರ್ಗದ ಜನ, ಶೋಷಿತ ವರ್ಗದ ನಾಯಕತ್ವವನ್ನು ವಹಿಸಿದ್ದಾರೆ. ದೊಡ್ಡ ಬಂಡವಾಳದಾರರ ಹಾಗೂ ಭೂ ಮಾಲೀಕರ ವರ್ಚಸ್ಸು, ರಾಜ್ಯಗಳ ರಾಜಕೀಯ ಪ್ರಭುತ್ವದಲ್ಲಿ(State) ಎದ್ದು ಕಾಣುತ್ತಿದೆ. ವಿದೇಶಿ ಬಂಡವಾಳಶಾಹಿಗಳ ಸಹಭಾಗಿತ್ವವು ಇದರ ಬಲವನ್ನು ಹೆಚ್ಚಿಸಿದೆ. ಪುರೋಹಿತ ವರ್ಗವು ತನ್ನ ಕ್ರೂರ ಪದ್ಧತಿ, ಪರಂಪರೆ ಮತ್ತು ನಿಯಮಗಳ ಮೂಲಕ ಭಾರತೀಯ ವ್ಯವಸ್ಥೆಯನ್ನು ಕಲುಷಿತಗೊಳಿಸಿವೆ. ಅಸ್ಪೃಶ್ಯರು, ಹಿಂದುಳಿದ ಜಾತಿಗಳು ಇದರ ಕ್ರೌರ್ಯಕ್ಕೆ ಸಿಕ್ಕಿ ಬಲಿಪಶುಗಳಾಗಿದ್ದಾರೆ. ಈ ರೀತಿಯ ಯಜಮಾನ ಸಂಸ್ಕೃತಿ ಹಾಗೂ ಪ್ರತ್ಯೇಕಗೊಳಿಸಲ್ಪಟ್ಟ ವರ್ಗವನ್ನು ನಿರ್ಮಾಣ ಮಾಡಿದೆ. ಇಂತಹ ಅವಮಾನಿತ ಶೋಷಣಾ ವರ್ಗವನ್ನು ವಿಶ್ವದ ಯಾವುದೇ ಅವಮಾನಿತ ಶೋಷಣಾ ಜನತೆಯೊಂದಿಗೆ ಹೋಲಿಸಲು ಸಾಧ್ಯವಿಲ್ಲ.

ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ಉಳಿಸಿಕೊಂಡು ಬಲಪಡಿಸಲು ಆಳುವ ವರ್ಗಗಳು ಜಾತಿಯನ್ನು ಒಂದು ಅಸ್ತ್ರವನ್ನಾಗಿ ಬಳಸುತ್ತಿದೆ. ನಮ್ಮ ಸಾಮಾಜಿಕ ಆರ್ಥಿಕ ವ್ಯವಸ್ಥೆಯಲ್ಲಿ ರಾಜಿ ಮಾಡಿಕೊಳ್ಳಲಾಗದ ವೈರುಧ್ಯಗಳು ತುಂಬಿವೆ. ಉದಾಹರಣೆಗೆ ಶ್ರಮಜೀವಿಗಳು V/s ಬಂಡವಾಳಗಾರರು, ಸ್ಪೃಶ್ಯರು V/s ಅಸ್ಪೃಶ್ಯರು, ಸಮಾನತೆ V/s ಅಸಮಾನತೆ ಈ ವೈರುಧ್ಯಗಳನ್ನು ಭಾರತದ ಯಾವುದೇ ರಾಜ್ಯದಲ್ಲಿ ಗುರುತಿಸಬಹುದಾಗಿದೆ.

ಶೋಷಿತ ಜನರ ಆಶೋತ್ತರಗಳಾದ, ಗೌರವಯುತ ಸಹಬಾಳ್ವೆ – ಸಮಾನತೆ – ಭ್ರಾತೃತ್ವ – ಸ್ವಾತಂತ್ರ್ಯ, ನ್ಯಾಯ, ಸಮಾನ ಅವಕಾಶ, ವಾಕ್‌ಸ್ವಾತಂತ್ರ್ಯ, ಚಿಂತನೆ ಮತ್ತು ನಂಬಿಕೆಗಳು ಇವುಗಳನ್ನು ನಿತ್ಯ ಜೀವನದಲ್ಲಿ ವಿರೋಧಿಸುವುದಲ್ಲದೆ ಅವುಗಳನ್ನು ಆಳುವ ಪ್ರಭುಗಳು ದಮನಗೊಳಿಸುತ್ತಿದ್ದಾರೆ. ಆದ್ದರಿಂದ ಶೋಷಿತ ಜನವರ್ಗದ ಹಿತಾಸಕ್ತಿಯನ್ನು ಕಾಪಾಡಲು ದಲಿತ ಸಂಘರ್ಷ ಸಮಿತಿಯು ರಾಜಕೀಯ ಶಕ್ತಿಯನ್ನು ಉಪಯೋಗಿಸಿಕೊಳ್ಳುವ ಅನಿವಾರ್ಯತೆಯನ್ನು ದಲಿತ ಸಂಘರ್ಷ ಸಮಿತಿಯ ರಾಜಕೀಯಕ್ಕೆ ಹಂಬಲಿಸದೆ, ವಿಮೋಚನಾ ರಾಜಕೀಯವನ್ನು ಎತ್ತಿ ಹಿಡಿಯಬೇಕಾಗಿದೆ. ಆದ್ದರಿಂದ ದಲಿತ ಸಂಘರ್ಷ ಸಮಿತಿಯು ತುಳಿತಕ್ಕೆ ಒಳಪಟ್ಟ ಜನರಲ್ಲಿ ಸದ್ವಿವೇಕ ಬುದ್ಧಿ ಹಾಗೂ ವರ್ಗ ಪ್ರಜ್ಞೆಯನ್ನು ರೂಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ.

ಮತೀಯ ರಾಜಕಾರಣಿಗಳು ಮತ್ತು ಮೂಲಭೂತವಾದಿಗಳು ಹಿಂಸೆಗೆ ಒಳಪಟ್ಟ ಜನರ ಮಧ್ಯೆ ಸಾಮಾಜಿಕ ಐಕ್ಯತೆ, ಸಹಬಾಳ್ವೆ ಬೆಳೆಸುವುದರ ಬದಲಾಗಿ, ತರ್ಕರಹಿತ ಹಾಗೂ ಅವೈಚಾರಿಕ ಪ್ರವೃತ್ತಿಗಳನ್ನು ಬಿತ್ತುತ್ತಿದ್ದಾರೆ. ದಲಿತ ಸಂಘರ್ಷ ಸಮಿತಿಯು ಇಂತಹ ಮತೀಯ ರಾಜಕಾರಣವನ್ನು ವಿರೋಧಿಸುತ್ತದೆ.

ತುಳಿತಕ್ಕೆ ಒಳಗಾದ ಅಮಾನವೀಯಗೊಳಿಸಲ್ಪಟ್ಟ ಜನರನ್ನು ಸಂಘಟಿಸಿ ಬಂಡವಾಳಶಾಹಿ - ಭೂ ಮಾಲೀಕರು-ಜಾತಿಶಕ್ತಿಗಳ ಆಳ್ವಿಕೆಯನ್ನು ಕಿತ್ತು ಹಾಕಿ ವರ್ಗ ಮತ್ತು ಜಾತಿರಹಿತ ಸಮಾಜವನ್ನು ಕಟ್ಟುವುದು ದಲಿತ ಸಂಘರ್ಷ ಸಮಿತಿಯ ಮುಖ್ಯ ಧ್ಯೇಯವಾಗಿದೆ.

ಕಳೆದ ಹದಿನೈದು ವರ್ಷಗಳಿಂದ ಕರ್ನಾಟಕದಲ್ಲಿ ಜನಪರ ಚಳವಳಿಯನ್ನು ಮಾಡುತ್ತಾ ಬಂದಿರುವ ದಲಿತ ಸಂಘರ್ಷ ಸಮಿತಿಯು ಒಂದು ಒತ್ತಡ ಗುಂಪು (Pressure Group) ಆಗಿ ಕೆಲಸ ಮಾಡುತ್ತಾ ಚುನಾವಣೆಗಳಿಂದ ದೂರ ಉಳಿದಿತು. ಹಾಗೆ ಉಳಿದಿದ್ದರ ಕಾರಣ ದಲಿತ ಸಂಘರ್ಷ ಸಮಿತಿ ಒಂದು ಸಾಂಸ್ಕೃತಿಕ ಸಂಘಟನೆಯಾಗಬೇಕೆಂಬ ಪ್ರಾರಂಭಿಕ ಆಶಯಗಳು ನಮ್ಮಲ್ಲಿದ್ದವು. ಆದರೆ ಕಾಲದ ಬದಲಾವಣೆ ಹಾಗೂ

ರಾಜಕೀಯ ಮತ್ತು ಆರ್ಥಿಕ ಸವಾಲುಗಳ ಹಿನ್ನೆಲೆಯಲ್ಲಿ ದಲಿತ ಸಂಘರ್ಷ ಸಮಿತಿಯು ಇನ್ನು ಕೇವಲ ಒಂದು Pressure Group ಆಗಿ ಉಳಿಯದೆ ಪ್ರಜಾಸತ್ತೆಯ ಅತಿ ಮುಖ್ಯ ಅಂಗವಾದ ಚುನಾವಣೆಯನ್ನು ಎದುರಿಸಲೇ ಬೇಕಾಗಿದೆ. ದಲಿತ ಸಂಘರ್ಷ ಸಮಿತಿ ಒಂದು ಕ್ರಾಂತಿಕಾರಿ ಚಳುವಳಿಯಾಗಿ ಉಳಿದುಕೊಂಡು, ಈ ಕೆಳ ಕಂಡ ಕಾರಣಗಳಿಂದ ಚುನಾವಣೆಯನ್ನು ಎದುರಿಸಬೇಕಾಗಿದೆ.

೧. ನಾವು ಪ್ರಜಾತಂತ್ರವನ್ನು ಒಪ್ಪಿಕೊಂಡಿದ್ದೇವೆ. ಆದ್ದರಿಂದ ಚುನಾವಣೆಗಳನ್ನು ತಿರಸ್ಕರಿಸಬಾರದು ಮತ್ತು ಉದಾಸೀನ ಮಾಡಬಾರದು.

೨. ಪ್ರಜಾತಂತ್ರವನ್ನು ನಮ್ಮ "Base Extend" ಚಳುವಳಿ ವಿಸ್ತರಣೆಗಾಗಿ ಬಳಸಿಕೊಳ್ಳಬೇಕು.

೩. ಚುನಾವಣೆಗಳ ಮೂಲಕ ಅಧಿಕಾರ ಗದ್ದುಗೆ ಮತ್ತು ಅಧಿಕಾರ ಚಲಾವಣೆ ಮಾಡುವ ಜಾತಿ ಹಾಗೂ ವರ್ಗಶತ್ರುಗಳನ್ನು ನಿಯಂತ್ರಿಸುವುದು.

೪. ಅಸೆಂಬ್ಲಿ-ಪಾರ್ಲಮೆಂಟುಗಳನ್ನು ಪ್ರವೇಶ ಮಾಡಿ ಅಲ್ಲಿ ನಮ್ಮ ಧೋರಣೆ, ನಿಲುವುಗಳನ್ನು ಪ್ರತಿಪಾದನೆ ಮಾಡಲು ವಿಮರ್ಶಾತ್ಮಕ ಜನಪರ ಪ್ರಜ್ಞೆ ಮೂಡಿಸಲು ಬಳಸಬಹುದು.

ಕಾಂಗ್ರೆಸ್‌ನ ಕೇಂದ್ರ ಆಡಳಿತ-ನಿರಂಕುಶ-ಏಕಕುಟುಂಬವಾಗಿದ್ದು, ಭ್ರಷ್ಟಗೊಂಡು ಜನವಿರೋಧಿಯಾಗಿದೆ. ಅನೇಕ ಜನವರ್ಗಗಳ ಆಸೆಗಳನ್ನು ಮಣ್ಣುಗೂಡಿಸಿದೆ. ರೈತರ-ದಲಿತರ-ಕೂಲಿಕಾರ್ಮಿಕರ ಬೇಡಿಕೆಗಳನ್ನು ದಮನಗೊಳಿಸಿದೆ. ಜನತೆಯ ಮೂಲಭೂತ ಸಮಸ್ಯೆಗಳಾದ ಅನ್ನ-ಬಟ್ಟೆ-ವಸತಿ-ವಿದ್ಯಾಭ್ಯಾಸ – ಇವುಗಳನ್ನು ಪೂರೈಸುವ ಕಾರ್ಯಕ್ರಮಗಳನ್ನು ಎತ್ತಿಕೊಳ್ಳಲು ವಿಫಲಗೊಂಡಿದೆ. ಇದರಿಂದ ಬೇಸತ್ತ ಕರ್ನಾಟಕದ ಜನತೆ ಕಾಂಗ್ರೆಸ್‌ಗೆ ಪರ್ಯಾಯವಾಗಿ ಎರಡನೆಯ ಶಕ್ತಿಯಾಗಿ ಜನತಾ ಪಕ್ಷವನ್ನು ಆಡಳಿತಕ್ಕೆ ತಂದಿತು.

ಜನತೆಗೆ ಸ್ವಚ್ಛ ಹಾಗೂ ಮೌಲ್ಯಯುತ ಆಡಳಿತ ಕೊಡುತ್ತೇವೆಂದು ಭರವಸೆ ಕೊಟ್ಟ ಜನತಾ ಪಕ್ಷ, ಅಧಿಕಾರ ಕಿತ್ತಾಟ, ಅಂತಃಕಲಹ, ಭ್ರಷ್ಟಾಚಾರಗಳಿಂದ ಜರ್ಝರಿತಗೊಂಡು, ಒಡೆದು ಚೂರಾಗಿ ಜನತೆಯ ಆಶೋತ್ತರಗಳನ್ನು ಮಣ್ಣುಗೂಡಿಸಿತ್ತು. ಅಧಿಕಾರದ ಅಂತಃಕಲಹ ಕಿತ್ತಾಟಗಳಿಂದ ಅದು ಜನತಾ ಪಕ್ಷ ಹಾಗೂ ಜನತಾ ದಳ ಎಂದು ಹೋಳಾಗಿ ಛಿದ್ರಗೊಂಡಿತು. ಒಳಕಿತ್ತಾಟದಿಂದ ಉರಿದು ಭಗ್ನಗೊಂಡ ಪಕ್ಷವನ್ನು ಕಿತ್ತುಹಾಕಿ, ಕಾಂಗ್ರೆಸ್ ಕೇಂದ್ರಾಡಳಿತವನ್ನು ಕರ್ನಾಟಕದ ಜನತೆಯ ಮೇಲೆ ಹೇರಿ ಪ್ರಜಾಸತ್ತೆಯನ್ನು ದಮನಗೊಳಿಸಿತು.

ಕೇಂದ್ರದ ದಮನಕಾರಿ ನೀತಿ ಒಂದು ಕಡೆ, ಮತ್ತೊಂದು ಕಡೆ ಆಡಳಿತ ಪಕ್ಷದ ಒಳಜಗಳ – ಇವುಗಳಿಂದ ಕರ್ನಾಟಕದ ಜನ ಕಾಂಗ್ರೆಸ್ - ಜನತಾ - ಅಥವಾ ಜನತಾ ದಳದ ಆಡಳಿತ ವೈಖರಿ ಮತ್ತು ಜನವಿರೋಧಿ ನೀತಿಗಳಿಂದ ರೋಸಿಹೋಗಿ ಮುಂದೇನು? ಎಂಬ ಅನಿಶ್ಚಿತ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. ಕರ್ನಾಟಕದಲ್ಲಿ ಇಂದು ರಾಜಕೀಯವಾಗಿ ಒಂದು ಶೂನ್ಯ ನಿರ್ಮಾಣವಾಗಿದೆ.

ಇಂತಹ ಶೂನ್ಯವನ್ನು ತುಂಬುವ, ಜನತೆಗೆ ಪರ್ಯಾಯವಾಗಿ ಶುದ್ಧ ಆಡಳಿತ ಹಾಗೂ ಸ್ವಚ್ಛ ನೀತಿಬದ್ಧ ರಾಜಕಾರಣವನ್ನು ಒದಗಿಸುವ ನೈತಿಕ ಹೊಣೆ ದಲಿತ ಸಂಘರ್ಷ ಸಮಿತಿ ಮತ್ತು ದಲಿತ ಸಂಘರ್ಷಸಮಿತಿಯಂಥ ಇನ್ನೂ ಅನೇಕ ಸಂಘ-ಚಳುವಳಿಗಳ ಹೊಣೆ ಎಂದು ನಾನು ಭಾವಿಸುತ್ತೇನೆ. ಅನೇಕ ವರ್ಷಗಳು ಆಡಳಿತ ಸೂತ್ರದ ಕೈಹಿಡಿದು ಅಧಿಕಾರದ ರುಚಿಕಂಡ ಕಾಂಗ್ರೆಸ್ ಒಂದು ನಿರಂಕುಶ ಶಕ್ತಿಯಾಗಿ ಮಾರ್ಪಟ್ಟಿದೆ. ಅಲ್ಲದೆ ನೆಹರೂ-ಏಕಕುಟುಂಬದ ಗುತ್ತಿಗೆಯಾಗಿ ರೂಪುಗೊಂಡಿದೆ.

ಛಾಯಾಚಿತ್ರಗಳು




ಶೋಷಿತರ ಧ್ವನಿಯಾಗಿದ್ದ ಪ್ರೊ. ಬಿ. ಕೃಷ್ಣಪ್ಪ

ಸಮಾರಂಭವೊಂದರಲಿ ಮಾತನಾಡುತಿ ರುವ ಪ್ರೊ. ಬಿ. ಕೃಷ್ಣಪ ನವರು



ಬಿ. ಕೃಷ್ಣಪನವರ ಪ್ರತಿಭಟನೆಯ ಒಂದು ದೃಶ್ಯ



ಸಮಾರಂಭವೊಂದರಲಿ ಮಾತನಾಡುತಿ ರುವ ಪ್ರೊ. ಬಿ. ಕೃಷ್ಣಪ ನವರು






ಪ್ರೊ. ಬಿ. ಕೃಷ್ಣಪ್ಪನವರ ಒಡನಾಡಿಗಳ ಪ್ರತಿಭಟನೆಯ ಹಾದಿ





ಪ್ರತಿಭಟನೆಯ ವಿವಿಧ ನೋಟ



ಪ್ರೊ. ಬಿ. ಕೃಷ್ಣಪ್ಪನವರ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ಹೊರಟಿರುವ ಜನಯಾತ್ರೆ



ಪ್ರೊ. ಬಿ. ಕೃಷ್ಣಪ್ಪನವರ ದೇಹವನ್ನು ಅಂತ್ಯ ಸಂಸ್ಕಾರಕ್ಕಾಗಿ ಕೊಂಡೊಯ್ಯುತ್ತಿರುವ ದೃಶ್ಯ



ಪ್ರೊ. ಬಿ. ಕೃಷ್ಣಪ್ಪನವರ ಹನಗವಾಡಿಯಲ್ಲಿರುವ ಸಮಾಧಿ